ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶನಿವಾರ, ೬ನೇ ಏಪ್ರಿಲ್ ೧೯೮೫ ಚೈತ್ರ ೧೬, ೧೯೦೭ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ರವರು ಪೀಠವನ್ನು ಅಲಂಕರಿಸಿದರು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯ

(ಮಾನ್ಯ ಮುಖ್ಯಮಂತ್ರಿಯವರಿಂದ ಚರ್ಚೆಗೆ ಉತ್ತರ)

ಅಧ್ಯಕ್ಷರು.—ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆಯಾದ ವಿಷಯದ ಮೇಲೆ ಶ್ರೀ ರಾಮಕೃಷ್ಣ ಹೆಗಡೆಯವರು ಉತ್ತರವನ್ನು ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲೆ ಅನೇಕ ಸದಸ್ಯರು ಈ ಸಭೆಯಲ್ಲಿ ಸಾಕಷ್ಟು ಚರ್ಚೆ ಮಾಡಿದ್ದಾರೆ. ನಾನು ಅನಿವಾರ್ಯ ಕಾರಣಗಳಿಂದ ಈ ಚರ್ಚೆಯಾದಂತಹ ಸಮಯದಲ್ಲಿ ಇಲ್ಲಿ ಇರಲಿಲ್ಲ. ಅದಕ್ಕಾಗಿ ಸದನದ ಕ್ಷಮೆಯನ್ನು ನಾನು ಕೋರುತ್ತೇನೆ. ನಾನು ಸ್ವತಃ ಇಲ್ಲಿ ಹಾಜರು ಇಲ್ಲದೇ ಇದ್ದರೂ ಕೂಡ, ನಾನು ವರದಿಗಳನ್ನು ತರಿಸಿದ್ದೇನೆ. ಮಾನ್ಯ ಸದಸ್ಯರು ಮಾಡಿದಂತಹ ಭಾಷಣಗಳನ್ನು ಅದರ ಮುಖಾಂತರ ತಿಳಿದುಕೊಂಡಿದ್ದೇನೆ. ಆ ಆಧಾರದ ಮೇಲಿನಿಂದ ಕೆಲವೊಂದು ವಿಷಯಗಳ ಬಗ್ಗೆ ನಾಲ್ಕು ಮಾತುಗಳಲ್ಲಿ ಉತ್ತರವನ್ನು ಹೇಳಲಿಕ್ಕೆ ಬಯಸುತ್ತೇನೆ. ಮೊನ್ನೆ ತಾನೇ ತಾತ್ಕಾಲಿಕ ಬಜೆಟ್ ಮೇಲೆ ಚರ್ಚೆಯಾದಾಗ ಮಾನ್ಯ ಸದಸ್ಯರಲ್ಲಿ ಅನೇಕರು ಮಾತನಾಡಿದಂತಹವರೇ, ಇದರಲ್ಲಿಯೂ ಭಾಗವಹಿಸಿದ್ದಾರೆ ಮತ್ತು ಆಗ ಅವರು ಮಾಡಿದಂತಹ ಭಾಷಣ, ಮೊನ್ನೆ ಅಂತಹ ಚರ್ಚೆಯಲ್ಲಿ ಮಾಡಿದಂತಹ ಭಾಷಣ ಹೆಚ್ಚು ಕಡಿಮೆ ಒಂದೇ ಸ್ವರೂಪದ್ದಾಗಿದೆ. ಆದುದರಿಂದ ನನ್ನ ಭಾಷಣ ಬಹಳ ಮಟ್ಟಿಗೆ ಕಡಿಮೆಯಾಗಿದೆಯೆಂದು ನಾನು ತಿಳಿದುಕೊಂಡರೆ ತಪ್ಪಾಗಲಿಕ್ಕಿಲ್ಲ. ಮೊದಲನೆಯ ವಿಚಾರ ಚುನಾವಣೆಗೆ ಸಂಬಂಧಪಟ್ಟದ್ದು. ಚುನಾವಣೆ ಆಯಿತು, ಚುನಾವಣೆ ಆದ ಮೇಲೆ ಜನರು ಕೊಟ್ಟಂತಹ ನಿರ್ಣಯವನ್ನು ಗಂಭೀರವಾಗಿ ನಾವು ಸ್ವೀಕಾರ ಮಾಡಬೇಕು. ಅದು ನಮ್ಮ ಪರವಾಗಿರಲಿ ಅಥವಾ ನಮ್ಮ ವಿರೋಧವಾಗಿರಲಿ, ಚುನಾವಣೆಯಲ್ಲಿ ಸೋತರೂ ಅದು ಜನರ ತೀರ್ಮಾನವೆಂದು ತಿಳಿದುಕೊಳ್ಳಬೇಕು. ಸೋತ ಮೇಲೆ ಅದಕ್ಕಾಗಿ ಕಾರಣಗಳನ್ನು ನಾವು ಹುಡುಕತಕ್ಕಂತಹ ಚಪಲ ಇರುತ್ತದೆ. ಆಗ ಹಿಂದೆ ನಡೆದಂತಹ ಅನೇಕ ಸಂಗತಿಗಳು ನಮಗೆ ಗೋಚರವಾಗುತ್ತವೆ. ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಇಲ್ಲ. ಅವರೇ ಈ ವಿಚಾರವನ್ನು ಮುಖ್ಯವಾಗಿ ಎತ್ತಿದ್ದರು. ಅದಕ್ಕೆ ನಾನು ಉತ್ತರ ಕೊಡಲಿಕ್ಕೆ ಬಯಸುತ್ತೇನೆ. ಅವರು ಆಪಾದನೆ ಮಾಡುವುದರಲ್ಲಿ ಶೂರರು, ಅವರು ಈ ಸ್ಥಾನಕ್ಕೆ ಬಂದಮೇಲೆ ತಪ್ಪುಪಕ್ಷ ಆಪಾದನೆಗಳನ್ನು ಮಾಡುವುದಕ್ಕಿಂತ ಮೊದಲು ಸತ್ಯಾಸತ್ಯತೆಯ ಬಗ್ಗೆ ಸ್ವಲ್ಪಮಟ್ಟಿಗಾದರೂ ಪರಿಶೀಲನೆ ಮಾಡಿ ಅನಂತರ ಸತ್ಯದ ಅಂಶ ನೂರರಲ್ಲಿ ಒಂದಂಶದಷ್ಟಾದರೂ ಇದೆ ಎಂದು ಮನವರಿಕೆಯಾದರೆ ಆಗ ಆಪಾದನೆಗಳನ್ನು ಮಾಡಬಹುದಾಗಿತ್ತು. ಅವರು ಮೊನ್ನೆ ಮಾತನಾಡುತ್ತಾ ಇರುವಾಗ ಹೇಳುತ್ತಿದ್ದರು ಜಯವಾಹಿನಿಯ ಹಿಂದೆ ಹೆಂಡ, ಸಾರಾಯಿ ಸೀರೆ, ಕುಪ್ಪಸ, ಲುಂಗಿ, ಮೇಲೆ ಪಂಚೆ, ಅಂಗಿ ಎಲ್ಲಾ ಹೋಯಿತು ಎಂದು. ಇದೇ ಮಾನ್ಯ ಬಂಗಾರಪ್ಪನವರು ಹಿಂದಿನ ಚುನಾವಣೆ ಫಲಿತಾಂಶ ಬಂದಮೇಲೆ ಆದರಲ್ಲೂ ಅವರ ಯಾವ ಒಂದು ಹೇಳಿಕೆ ಇತ್ತು......

ಆ ಹೆಬ್ಬಯಕೆ ಕೈಗೂಡದೆ ಇದ್ದಮೇಲೆ, ಈ ಸದನದಲ್ಲಿಯೂ ಮತ್ತು ಹೊರಗೂ ಅವರು ಒಂದು ಮಾತು ಹೇಳಿದ್ದರು ಜನತಾ ಪಕ್ಷ ಗೆದ್ದದ್ದು ತನ್ನಿಂದಲೇ, ನಾನು ಪ್ರತಿಯೊಂದೂ ಕ್ಷೇತ್ರಕ್ಕೆ ಹೋಗಿ ಹಗಲಿರುಳು ಎನ್ನದೆ ದುಡಿದು ಕೆಲಸ ಮಾಡದಿದ್ದರೆ ಜನತಾ ಪಕ್ಷ ಎಲ್ಲಿ ಅಧಿಕಾರಕ್ಕೆ ಬರುತ್ತಿತ್ತು ಎಂದು ಹೇಳಿದ್ದರು. ಆವಾಗ ನಾನು ಏನನ್ನೂ ಹೇಳಲಿಲ್ಲ. ಅವರು ದೊಡ್ಡ ಮನುಷ್ಯರು, ಅವರ ಧ್ಯೇಯದಿಂದ ನಮ್ಮ ಪಕ್ಷಕ್ಕೆ ಜಯ ಸಿಕ್ಕಿತ್ತು ಆಗಲಿ, ಅವರ ಉಪಕಾರವನ್ನು ಸ್ಮರಿಸೋಣ, ಹಾಗೆಂದು ಸುಮ್ಮನಿದ್ದೆ. ಅಂದಮೇಲೆ ಈ ಸಾರಿ ಬಂಗಾರಪ್ಪನವರು ಎಲ್ಲಾ ಕಡೆಗಳಿಗೂ ಹೋಗಲಿಲ್ಲವೋ, ಹಗಲಿರುಳು ದುಡಿಯಲಿಲ್ಲವೋ, ಹಾಗಾದರೆ ಈ ಬಾರಿ ಅವರ ಪಕ್ಷ ಸೋತದ್ದು ಹೇಗೆ ? ಜನತಾ ಪಕ್ಷಕ್ಕೆ ಜಯ ಹೇಗೆ ಸಿಕ್ಕಿತು ? ಆದರೆ ಈಗ ಯಾವುದು ಸತ್ಯ, ಯಾವುದು ಅಸತ್ಯ ಯಾವ ಕಾರಣಗಳಿಂದ ನಮ್ಮ ಪಕ್ಷ ಗೆದ್ದಿದೆ ಎಂದು ಹೇಳ ತಕ್ಕಂಥದ್ದು ಬಹಿರಂಗವಾಗಿದೆ. ಇದನ್ನು ಎಲ್ಲರೂ ಗಂಭೀರವಾಗಿ ಒಪ್ಪಿಕೊಳ್ಳಬೇಕು, ಗ್ರಹಿಸಬೇಕು. ಜನ ನಮ್ಮನ್ನು ಇಷ್ಟಪಡಬಹುದು ಇಷ್ಟಪಡದೇ ಬಿಡಬಹುದು. ಅದು ಜನರಿಗೆ ಬಿಟ್ಟಂತಹ ವಿಚಾರ. ಆದರೆ ಯಾವುದೇ ಸತ್ಯದ ಆಧಾರ ಇಲ್ಲದೇ ಇರತಕ್ಕಂತಹ ಆರೋಪವನ್ನು ಅವರು ಮಾಡಿ, ಜನರ ನಿರ್ಣಯವನ್ನು ಬದಲಾಯಿಸುವುದಕ್ಕೆ ಆಗುತ್ತದೆಯೇ ? ಇಲ್ಲ. ನಾನು ಒಂದು ಸಣ್ಣ ಸೂಚನೆ ಕೊಡುವುದಾದರೆ, ಇದರಿಂದ ಕಕ್ಕಿದ್ದನ್ನು ಪುನಃ ತಿನ್ನತಕ್ಕಂತಹ ದುರಾವಸ್ಥೆ ಯಾರಿಗೂ ಬರಕೂಡದು. ಹಿಂದಿನ ಚುನಾವಣೆಯಲ್ಲಿ ಅವರ ಪ್ರಚಾರ ಧಾಟಿ ಏನಿತ್ತು, ಅದು ಶ್ರೀಮಾನ್ ಬಸವಲಿಂಗಪ್ಪನವರಿಗೂ ಗೊತ್ತಿದೆ, ಅವರು ಆಗಲೂ ಅಲ್ಲಿಯೇ ಇದ್ದರು, ಈಗಲೂ ಅಲ್ಲಿಯೇ ಇದ್ದಾರೆ. ಅದೇನೆಂದರೆ, ಹೋದ ಹೋದ ಕಡೆಗಳಲ್ಲಿ, ಸಾರ್ವಜನಿಕ ಭಾಷಣಗಳಲ್ಲಿ, ಚುನಾವಣಾ ಪ್ರಚಾರಗಳಲ್ಲಿ, ಏನು ಹೇಳುತ್ತಿದ್ದರು. ಎಂದರೆ, ಇಂದಿರಾಗಾಂಧಿಯವರನ್ನು ನಂಬಿ ಈ ದೇಶ ಕೆಟ್ಟಿತು ಎಂದು ಪ್ರಚಾರ ಮಾಡುತ್ತಿದ್ದರು. ಇವೊತ್ತು ಅವರೇ ಏನು ಪ್ರಚಾರ ಮಾಡುತ್ತಿದ್ದಾರೆ ಡೆಲ್ಲಿಗೆ ಹೋಗಿ ಸ್ಟೇಟ್‌ಮೆಂಟ್ ಕೊಡುತ್ತಾರೆ. ನಾವು ಹೆಚ್ಚು ಕರಗಳನ್ನು ಹಾಕುತ್ತೇವೆಂದು ಖೋತಾ ಬಜೆಟ್‌ನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಮತ್ತೆ ಹೆಚ್ಚು ಕರವನ್ನು ಹಾಕಿ ಇದನ್ನು ಕಡಿಮೆ ಮಾಡಬೇಕೆನ್ನುವ ಮಾತನ್ನೂ ಹೇಳಿದ್ದಾರೆ. ಹೀಗೆ ನಾವು ಒಮ್ಮೆ ಮಾತನಾಡಬೇಕಾದರೆ, ಯೋಚನೆ ಮಾಡಿ ಮಾತನಾಡಬೇಕು. ನಮ್ಮ ಒಂದು ಕನ್ವೆನ್‌ಷನ್ ಎನ್ನತಕ್ಕಂಥದ್ದು ಎಲ್ಲರಿಗೂ ಇರುತ್ತದೆಂದು ನಾನು ಹೇಳುವುದಿಲ್ಲ. ರಾಜಕೀಯದಲ್ಲಿ ಅದು ಕೆಲವೇ ಜನರಿಗೆ ಇರುತ್ತದೆ. ಬಹಳ ಜನರಿಗೆ ಕಡಿಮೆ ಇರುತ್ತದೆ. ಕನಿಷ್ಟಪಕ್ಷ ಒಂದು ಸ್ಥಾನಕ್ಕೆ ಬಂದಾಗ, ಈಗ ಅವರು ಇರತಕ್ಕಂಥ ಸ್ಥಾನ ಒಬ್ಬ ಮಂತ್ರಿಯವರಿಗೆ ಇರತಕ್ಕಂಥ ಸ್ಥಾನ ಮಾನಕ್ಕೆ ಸರಿಯಾದುದು. ಅದನ್ನು ಅವರು ಅಷ್ಟೇ ಜವಾಬ್ದಾರಿಯಿಂದ ನೋಡಿಕೊಳ್ಳಬೇಕು. ಅದಕ್ಕಾಗಿ ಈ ಮಾತನ್ನು ಪುನಃ ನಾನು ಹೇಳಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಕೇವಲ ನಾಲ್ಕು ವಿಚಾರಗಳ ಬಗ್ಗೆ ಮಾತ್ರ ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಈ ನಾಲ್ಕು ವಿಚಾರಗಳು ನಮ್ಮ ರಾಜ್ಯಕ್ಕೆ, ರಾಜ್ಯದ ಅಭಿವೃದ್ಧಿಗೆ, ಜನತೆಯ ಕಲ್ಯಾಣಕ್ಕೆ ಸಂಬಂಧಪಟ್ಟ ವಿಚಾರಗಳು. ಮೊಟ್ಟಮೊದಲನೆಯದಾಗಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ನಿಜವಾಗಿ ಈ ಕಾರ್ಖಾನೆಯನ್ನು ದಿವಂಗತ ಶ್ರೀಮಾನ್ ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ಬಹಳ ವರ್ಷಗಳ ಹಿಂದೆ, ಬಹುಶಃ ೧೯೨೧ರಲ್ಲಿ ಎಂದು ಕಾಣುತ್ತದೆ, ಇದನ್ನು ಆಗ ಸ್ಥಾಪನೆ ಮಾಡಲಾಯಿತು. ಆದರೆ ದುರಾದೃಷ್ಟದಿಂದ ಪ್ರಾರಂಭದ ದಿಸೆಯಲ್ಲಿಯೇ ಕೂಡಾ ಅಷ್ಟು ಚೆನ್ನಾಗಿ ಅದು ನಡೆದಿರಲಿಲ್ಲ. ಅದಕ್ಕಾಗಿ ವಿಶ್ವೇಶ್ವರಯನವರು ಬಹಳಷ್ಟು ನಿಂದನೆಯನ್ನು, ಟೀಕೆಯನ್ನು ಎದುರಿಸತಕ್ಕಂತಹ ಪ್ರಸಂಗ ಬಂತು. ಲಾಭವನ್ನು ಮಾಡಿಲ್ಲವೆಂದಲ್ಲ, ಕೆಲವು ವರ್ಷಗಳಲ್ಲಿ ಲಾಭವನ್ನೂ ಅದು ಮಾಡಿದೆ. ಆದರೆ ಕೆಲವಾರು ವರ್ಷಗಳಿಂದ, ಅನೇಕ ಕಾರಣಗಳಿಂದ, ನಮ್ಮ ಹಿಡಿತಕ್ಕೂ ಮೀರಿರತಕ್ಕಂತಹ ಕಾರಣ ನಮ್ಮ ಕೈಗೆ ನಿಲುಕದ ಕಾರಣಗಳಿಂದ ಅದನ್ನು ಕೇಂದ್ರ ಸರ್ಕಾರಕ್ಕೆ ಕೊಡಲು ನಿರ್ಧಾರ ಮಾಡಬೇಕಾಯಿತು. ಆ ಕಾರ್ಖಾನೆ ಯಾವ ಒಂದು ದೊಡ್ಡ ಸ್ಥಾನವನ್ನು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಪಡೆದುಕೊಂಡಿತ್ತೋ ಆ ಕಾರ್ಖಾನೆಗೆ ಈ ಪರಿಸ್ಥಿತಿ ಬಂತು.

ಮಾನ್ಯ ಬಂಗಾರಪ್ಪನವರು ಹೇಳಿದರು, ಗುಪ್ತವಾಗಿ ಈ ಕಾರ್ಖಾನೆಯನ್ನು ಕೇಂದ್ರ ಸರ್ಕಾರಕ್ಕೆ ವರ್ಗಾಹಿಸತಕ್ಕಂತಹ ಕೆಲಸ ನಡೆದಿದೆ ಎಂದು, ಅವರು ಹೇಳುತ್ತಿರುವ ಈ ಗುಪ್ತ ಎನ್ನುವುದು ಏನು ಎಂದು ನನಗೆ ಗೊತ್ತಾಗುತ್ತಿಲ್ಲ. ನಾವು ಬ್ಲ್ಯಾಕ್ ಮಾರ್ಕೆಟ್ ಮಾಡುವವರ ಹತ್ತಿರ ಸಂಬಂಧ ಇಟ್ಟು

ಕೊಂಡಿದ್ದೇವೆಯೋ, ಅಥವಾ ವಿದೇಶಿ ವ್ಯವಹಾರ ಮಾಡುವವರ ಜೊತೆಗೂಡಿ ಗುಪ್ತವಾಗಿ ಅವರ ಕೈಗೆ ಕೊಡುತ್ತಿದ್ದೇವೆಯೋ ? ಅವರು ಹೇಳುವ ಈ ಗುಪ್ತದ ವಿಚಾರ ಏನೆಂದು ನನಗೆ ಅರ್ಥವಾಗುತ್ತಿಲ್ಲ.

ಮಾತನಾಡಿದರೆ ಸಾಕು, ಕೇಂದ್ರ ಸರ್ಕಾರದವರು ಹೇಳಿದಂತೆ ನಡೆದುಕೊಳ್ಳಬೇಕೆಂದು ಹೇಳುತ್ತಾರೆ ಕೇಂದ್ರ ಸರ್ಕಾರವನ್ನು ನಾವು ನಿಂದನೆ ಮಾಡುತ್ತಿದ್ದೇವೆಂದು ಹೇಳುತ್ತಾರೆ. ನಾವು ಈ ಕಂಪನಿಯಿಂದ ಆಗುತ್ತಿರುವ ನಷ್ಟವನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಆ ನಿರ್ಧಾರಕ್ಕೆ ಬಂದಿದ್ದೇವೆ ಕಂಪನಿಯು ಸೇಲ್‌ನಲ್ಲಿಯೂ ಲಾಭ ಆಗುತ್ತಿಲ್ಲ. ಲಾಭ ಮಾಡುವುದು ಹೇಗೆ ಎಂದರೆ, ಬೇಕಾದಷ್ಟು ಎಕ್ಸೈಜ್ ಸುಂಕ ಹಾಕುತ್ತಾರೆ, ಅದರಿಂದ ಲಾಭ ಬರುತ್ತದೆ.

ಈಗ ಈ ಕಾರ್ಖಾನೆಯು ನಷ್ಟವನ್ನು ಅನುಭವಿಸುತ್ತಿರುವ ಕಾರಣ, ವಿದ್ಯುಚ್ಛಕ್ತಿಯ ಕೊರತೆ ಇರಬಹುದು, ಮತ್ತು ನಾವು ಕೊಡತಕ್ಕಂತಹ ವಸ್ತುಗಳ ಮೇಲೆ ಕೇಂದ್ರ ಸರ್ಕಾರದವರು ಎಕ್ಸೈಸ್ ಡ್ಯೂಟಿ ಹೆಚ್ಚು ಮಾಡಿರುವುದರಿಂದ ಇರಬಹುದು, ಉತ್ಪಾದನೆಯಲ್ಲಿ ಆಗುತ್ತಿರುವ ವೆಚ್ಚದ ಹೆಚ್ಚಳ ಇರಬಹುದು. ಇವೆಲ್ಲಾ ಕಾರಣಗಳಿಂದಲೂ, ಅಥವಾ ಇತರ ಅನೇಕ ದೃಷ್ಟಿಯಿಂದಲೂ ಇರಬಹುದು, ಒಟ್ಟಿನಲ್ಲಿ ಕಾರ್ಖಾನೆಗೆ ತಿಂಗಳಿಗೆ ಸುಮಾರು ೨ ಕೋಟಿ ರೂಪಾಯಿಗಳ ನಷ್ಟ ಆಗುತ್ತಿದೆ. ವರ್ಷಕ್ಕೆ ಒಟ್ಟು ೨೫ ಕೋಟಿ ರೂಪಾಯಿಗಳ ನಷ್ಟ ಇದರಿಂದ ಆಗುತ್ತಿದೆ. ಈ ೨೫ ಕೋಟಿ ರೂಪಾಯಿಗಳು ನಮ್ಮ ಕೇಂದ್ರ ಸರ್ಕಾರಕ್ಕೆ ಆಗಿದ್ದರೆ, ಅದು ಒಂದು ಸಣ್ಣ ಬಿಂದುವೂ ಆಗುತ್ತಿರಲಿಲ್ಲ. ಅದು ಎಲ್ಲಿಯೋ ಹೋಗುತ್ತಿತ್ತು. ಆದರೆ ನಮಗೆ ಇದು ಹೊರಲಾರದಂತಹ ಹೊರೆಯಾಗಿದೆ. ಈ ೧೫ ವರ್ಷಗಳ ಹಿಂದೆ. ಇದಕ್ಕೆ ಎಕ್ಸ್‌ಪಾನಷನ್ ಮಾಡಬೇಕು, ಹೆಚ್ಚಿನ ಬಂಡವಾಳವನ್ನು ಹಾಕಬೇಕೆನ್ನುವ ಪ್ರಶ್ನೆ ಬಂದಾಗ ಅಷ್ಟು ಬಂಡವಾಳ ನಮ್ಮ ಕೈಯಲ್ಲಿ ಇಲ್ಲದಿದ್ದುದರಿಂದ ನಾವು ಕೇಂದ್ರ ಸರ್ಕಾರದ ಜೊತೆಗೆ ಮಾತನಾಡಿ ಅವರು ಈ ಕಂಪನಿಗೆ ಪಾರ್ಟನರ್ ಆಗಿರಬೇಕೆಂದು ನಿರ್ಣಯ ಮಾಡಿದೆವು. ಇಂದು ಅವರದು ಹೆಚ್ಚು ಕಡಿಮೆ ಸಮಭಾಗ ಕಂಪನಿಯಲ್ಲಿದೆ, ಇವೊತ್ತು ಈ ವಿಚಾರ ಹೊಸದಾಗಿ ಬಂದಿದೆ ಎಂದು ಯಾರೂ ದಯವಿಟ್ಟು ತಿಳಿದುಕೊಳ್ಳಬಾರದು. ಈ ವಿಷಯವನ್ನು ನಾವು ಕೇಂದ್ರ ಸರ್ಕಾರದ ಜೊತೆಗೆ ಮಾತನಾಡಿದ್ದೇವೆ ಹಾಗೂ ಪತ್ರ ವ್ಯವಹಾರ ನಡೆಸಿದ್ದೇವೆ. ಅದರಲ್ಲಿ ಮುಚ್ಚುಮರೆ ಏನೂ ಇಲ್ಲ. ಇದರ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಕೂಡಾ ಆಗಿದೆ. ಇದನ್ನು ನಮ್ಮ ರಾಜ್ಯದ ಹಿತದೃಷ್ಟಿಯಿಂದಲೇ, ಈ ಒಂದು ನಿರ್ಣಯವನ್ನು ತೆಗೆದುಕೊಳ್ಳಲಾಗಿದೆಯೆಂದು ಹೇಳಲಿಕ್ಕೆ ನಾನು ಬಯಸುತ್ತೇನೆ.

ಅಷ್ಟೇ ಅಲ್ಲ, ಇನ್ನೂ ಒಂದು ಹೆಜ್ಜೆ ಮುಂದು ಹೋಗಲಿಕ್ಕೆ ಬಯಸುತ್ತೇನೆ. ಯಾವ ರೀತಿ ಯಿಂದಲೂ ಕೇಂದ್ರ ಸರ್ಕಾರದ ಒಂದು ಯೋಜನೆ ಇದೆಯೋ, ಅದರ ಪ್ರಕಾರ ಯಾವ ಯಾವ ಸಾರ್ವಜನಿಕ ವಲಯದಲ್ಲಿರುವ ಕೈಗಾರಿಕಾ ಉದ್ದಿಮೆಗಳು ವಿಪರೀತ ನಷ್ಟ ಮಾಡುತ್ತಿದ್ದಾವೋ ಮತ್ತು ಅವುಗಳನ್ನು ಸುಧಾರಿಸತಕ್ಕಂಥಾದ್ದು ಸಧ್ಯದಲ್ಲಿ ಸಾಧ್ಯ ಎಂದು ಕಾಣುವುದಿಲ್ಲವೋ, ಅಂತಹ ಉದ್ದಿಮೆ ಗಳ ಕಾಯಕಲ್ಪಕ್ಕೆ ನಾವು ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯ. ಯಾವ ರೀತಿಯಲ್ಲಿ ನಾನು ವಿವರವಾಗಿ ಇವುಗಳ ಬಗ್ಗೆ ಹೇಳಬೇಕೂ ಎಂಬುದು ಕಷ್ಟವಾಗುತ್ತಿದೆ. ಆ ಪ್ರಾಜೆಕ್ಟ್‌ಗೆ ಬೇಕಾದಂತಹ ಹಣವನ್ನು ಒದಗಿಸಿಕೊಡುವುದಕ್ಕೆ ಸರ್ಕಾರಕ್ಕೆ ಕಷ್ಟವಾಗುತ್ತಿದೆ ಮತ್ತೊಂದು ಕಡೆ ಉದ್ದಿಮೆಗಳನ್ನು ನಡೆಸಬೇಕು, ಈ ರೀತಿಯಾದರೆ ಸರ್ಕಾರ ಎರಡನ್ನು ಸಹ ಮಾಡುವುದಕ್ಕೆ ಆಗುವುದಿಲ್ಲ. ಈಗ ಅಸಿಟೇಟ್ ಫ್ಯಾಕ್ಟರಿ ಇದೆ. ಅದರ ಕಥೆ ಹಳೆಯ ಮಾನ್ಯ ಸದಸ್ಯರಿಗೆಲ್ಲಾ ಚೆನ್ನಾಗಿ ಗೊತ್ತಿದೆ. ಇಂತಹ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡುವುದು ಏತಕ್ಕಾಗಿ ? ಅದೇ ರೀತಿಯಲ್ಲಿ ಹಿಂದೂಸ್ತಾನ್ ಫೋಟೋ ಫಿಲ್ಲಂ ಇದೆ. ಇದಕ್ಕೆ ಕೇಂದ್ರ ಸರ್ಕಾರದವರು ಶಬ್ದಗಳ ಪ್ರೋತ್ಸಾಹ ಮಾತ್ರ ಕೊಡುತ್ತಿದ್ದಾರೆ ಅಷ್ಟೆ. ಈ ಒಂದು ಹಿಂದೂಸ್ತಾನ್ ಫೋಟೋ ಫಿಲಮ್ ಊಟಿಯಲ್ಲಿ ಇದೆ. ಅಲ್ಲಿ ಬೇಕಾದಂತಹ ಎಲ್ಲಾ ಸಾಮಗ್ರಿಗಳು ಕೂಡ ಸಿಗುತ್ತಿವೆ. ಅಲ್ಲಿ ರೆಕ್ಟಿಫೈಡ್ ಸ್ಪಿರಿಟ್ ಕೂಡ ಸಿಗುತ್ತದೆ. ಆದರೂ ಸಹ ಈ ಒಂದು ಕೈಗಾರಿಕೆ ಪ್ರಾರಂಭ ಮಾಡಿದ ದಿವಸದಿಂದ ಇವತ್ತಿನವರೆವಿಗೂ ಒಂದು ರೂಪಾಯಿಯಷ್ಟು ಲಾಭ ಮಾಡಿಲ್ಲ. ಬರೀ ನಷ್ಟದಲ್ಲಿಯೇ ಇದು ನಡೆಯುತ್ತಿದೆ. ಇಲ್ಲಿಯವರೆವಿಗೂ ಅನೇಕ ಕೋಟಿ ರೂಪಾಯಿಗಳ ನಷ್ಟವಾಗಿದೆ. ಇದಕ್ಕೆ ಸರ್ಕಾರದವರು ಎಷ್ಟು ಕೋಟಿ ರೂಪಾಯಿಗಳ ಬಂಡವಾಳ ಹಾಕಿದರೂ ಕೂಡ ನಷ್ಟ ಹೆಚ್ಚುತ್ತಲೇ ಹೋಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಯೋಚನೆ ಮಾಡಿ ಕೇಂದ್ರ ಸರ್ಕಾರದ ಒಂದು

ಫೋಟೋ ಫಿಲಂ ಇದೆ, ಅದರ ಜೊತೆಗೆ ಈ ಹಿಂದೂಸ್ತಾನ್ ಫೋಟೋ ಫಿಲಂನ್ನು ವಹಿಸಿಕೊಳ್ಳಿ ಎಂದು ಹೇಳಿದೆ. ಅದರಲ್ಲಿ ತಪ್ಪೇನಿದೆ ? ಅದಕ್ಕೆ ಅವರು ಒಪ್ಪಿಕೊಳ್ಳುತ್ತಿಲ್ಲ. ಆದರೂ ಕೂಡ ಹೇಗಾದರೂ ಮಾಡಿ ಅವರ ಮನಸ್ಸನ್ನು ಒಲಿಸಬೇಕೆನ್ನುವ ಮನಸ್ಸು ನನಗಿದೆ. ಇದನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸದಿದ್ದರೆ ಅದಕ್ಕೆ ಬೇಕಾದಂತಹ ಸಾಮಗ್ರಿಗಳನ್ನು ರಾಜ್ಯ ಸರ್ಕಾರ ಒದಗಿಸಿ ಕೊಡುವುದಕ್ಕೆ ಕಷ್ಟವಾಗುತ್ತದೆ. ಇಲ್ಲಿ ಸುಮಾರು ಕೋಟಿ ರೂಪಾಯಿಗಳು ಅನಾವಶ್ಯಕವಾಗಿ ನಷ್ಟವಾಗುತ್ತಿದೆಯೆಂದು ನನ್ನ ಭಾವನೆ. ಕೇವಲ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗುವುದು ಪ್ರತಿಷ್ಠೆಯ ಪ್ರಶ್ನೆಯಲ್ಲ. ಬಂಡವಾಳವಿಲ್ಲದಿದ್ದರೆ ನಾವು ಕೈಗಾರಿಕೆಗಳನ್ನು ಯಾವ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಆಗುತ್ತದೆ ? ಭದ್ರಾ ಪ್ರಾಜೆಕ್ಟ್ ಇದು ಒಂದು ಸಣ್ಣ ವಿಷಯವಲ್ಲ. ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಸರ್. ಎಂ. ವಿಶ್ವೇಶ್ವರಯ್ಯನವರು ಶುರು ಮಾಡಿದರು. ಇದರಲ್ಲಿ ಒಂದು ಭಾವನಾತ್ಮಕವಾದಂತಹ ಅಂಶ ಇದೆ. ಇದಕ್ಕೆ ಒಂದು ಐತಿಹಾಸಿಕ ಮಹತ್ವ ಇದೆ. ಆದರೂ ಸಹ ಈ ಒಂದು ಪ್ರಾಜೆಕ್ಟಿನಿಂದ ವರ್ಷಕ್ಕೆ ಸುಮಾರು ೨೫ ಕೋಟಿ ರೂಪಾಯಿಗಳ ನಷ್ಟವಾಗುತ್ತಿದ್ದರೆ ಯಾವ ರೀತಿಯಲ್ಲಿ ಇದನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಆಗುತ್ತದೆ ? ಒಂದು ವೇಳೆ ಈ ಪ್ರಾಜೆಕ್ಟನ್ನು ಕೇಂದ್ರ ಸರ್ಕಾರದವರು ತೆಗೆದುಕೊಂಡರೆ ನಷ್ಟವಾಗುವುದಕ್ಕೆ ಕಾರಣವಿಲ್ಲ. ಏತಕ್ಕೆಂದರೆ ಅವರಲ್ಲಿ ಬೇಕಾದಷ್ಟು ಬಂಡವಾಳವಿದೆ. ಬಹುಶಃ ಒಂದೆರಡು ವರ್ಷಗಳಲ್ಲಿ ಅದನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗುವಂತಹ ಶಕ್ತಿ ಅವರಿಗೆ ಇದೆ. ಇನ್ನು ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಯಡಿಯೂರಪ್ಪನವರು ಭಾಷಣ ಮಾಡುತ್ತಾ......

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಬೇರೆ ವಿಷಯಕ್ಕೆ ಹೋಗುತ್ತಿದ್ದಾರೆ. ಆದರಿಂದ ನಾನು ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಕ್ಲಾರಿಫಿಕೇಷನ್ ಕೇಳಿಬಿಡುತ್ತೇನೆ ಕೊನೆಯಲ್ಲಿ ಎಲ್ಲಾ ಕ್ಲಾರಿಫಿಕೇಷನ್ ಕೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದರು ಸಾರ್ವಜನಿಕ ಉದ್ದಿಮೆಗಳಲ್ಲಿ ಇವತ್ತು ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿದೆ ಎಂದು. ಸಾಮಾಜಿಕ ದೃಷ್ಟಿಯಿಂದ ಇದು ಇದ್ದರೂ ಇರಬಹುದು. ಆದರೆ ಈ ರೀತಿಯಾಗಿ ನಷ್ಟವಾಗುವುದಕ್ಕೆ ಮುಖ್ಯ ಕಾರಣ ಅಧ್ಯಕ್ಷ ಅಧಿಕಾರಿಗಳನ್ನು ಅಲ್ಲಿ ಹಾಕುವುದರಿಂದ ಆ ರೀತಿ ನಷ್ಟವಾಗುತ್ತಿದೆಯೆಂದು ನನ್ನ ಭಾವನೆ. ಈಗ ಈ ಭದ್ರಾ ಪ್ರಾಜೆಕ್ಟಿಗೆ ಮುಖ್ಯ ಕಾರ್ಯದರ್ಶಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಆದರೆ ಅವರು ಸರ್ಕಾರದ ಕೆಲಸ ಮತ್ತು ಈ ಫ್ಯಾಕ್ಟರಿಯ ಕೆಲಸ ಯಾವಾಗ ಮಾಡುತ್ತಾರೆ ? ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಒಳ್ಳೆಯ ದಕ್ಷ ಅಧಿಕಾರಿಗಳನ್ನು ಹಾಕಿ ಚೆನ್ನಾಗಿ ಕೆಲಸ ಮಾಡುವಂತೆ ಮಾಡಿ. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಕೊಟ್ಟರೆ ಅಷ್ಟು ಸರಿಯಾಗುವುದಿಲ್ಲ. ಆ ಒಂದು ಪ್ರಯತ್ನವನ್ನು ತಾವು ಮಾಡಬಾರದೆಂದು ದನ್ನ ಮನವಿ.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ಅಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ಮಾಡದೆ ಬೇರೆ ಯಾರನ್ನು ಹಾಕಬೇಕು? ಅದು ಮಾಡಿ ಆಗಿದೆ. ಆ ಬಗ್ಗೆ ಸಾಕಷ್ಟು ಟೀಕೆಗಳನ್ನು ನಾವು ಕೇಳಿದ್ದು ಆಗಿದೆ. ಖಾಸಗಿಯವರನ್ನು ಅಲ್ಲಿ ನೇಮಿಸಿದರೆ ಆ ಬಗ್ಗೆ ಕೂಡ ಸಾಕಷ್ಟು ಟೀಕೆಗಳನ್ನು ಮಾಡಿದ್ದೀರಿ. ಇದರಲ್ಲಿ ಈಗ ಎಷ್ಟರ ಮಟ್ಟಿಗೆ ಸಾಮಾಜಿಕ ನೈಪುಣ್ಯತೆ ಇದೆ ಎಂದು ಹೇಳುತ್ತೇನೆ. ಸಾರ್ವಜನಿಕ ಉದ್ಯಮಗಳು ಇರಬಾರದು. ಅಥವಾ ಸಾರ್ವಜನಿಕ ಉದ್ದಿಮೆಗಳ ಬಗ್ಗೆ ನನಗೆ ವಿರೋಧವಿಲ್ಲ. ಆದರೆ ಮಾನ್ಯ ಅಧ್ಯಕ್ಷರೇ ನಿಮ್ಮ ಮುಖಾಂತರ ಮಾನ್ಯ ಬಸವಲಿಂಗಪ್ಪನವರಿಗೆ ಹೇಳಬಯಸುವುದೇನೆಂದರೆ ಸಾರ್ವಜನಿಕ ಉದ್ದಿಮೆಗಳನ್ನು ನಡೆಸಿಕೊಂಡು ಅದರಿಂದ ಕೋಟ್ಯಾಂತರ ರೂಪಾಯಿಗಳನ್ನು ನಷ್ಟ ಅನುಭವಿಸಿ ಆ ನಷ್ಟವನ್ನು ತುಂಬಿಕೊಳ್ಳಲು ಜನರ ಮೇಲೆ ಕರಭಾರವನ್ನು ಹೆಚ್ಚು ವಿಧಿಸುವುದಕ್ಕೆ ಆಗುವುದಿಲ್ಲ, ಆದಷ್ಟು ಜನರಿಗೆ ಕರಭಾರವನ್ನು ತಪ್ಪಿಸಬೇಕೆನ್ನುವ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆಯೇ ಹೊರತು ಬೇರೆ ಯಾವ ಉದ್ದೇಶ ಕೂಡದಿಂದ ಇಲ್ಲ. ಸುದೈವದಿಂದ ಕೇಂದ್ರ ಸರ್ಕಾರದವರು ಇದನ್ನು ತೆಗೆದುಕೊಂಡರೆ ತಪ್ಪಾಗುವುದಿಲ್ಲ. ಒಂದು ಪುಣ್ಯ ಈ ಸಮಯದಲ್ಲಿ ವಿರೋಧಪಕ್ಷದ ನಾಯಕರು ಇಲ್ಲ, ಹಿಂದಿನ ವಿರೋಧಪಕ್ಷದ ನಾಯಕರೂ ಇಲ್ಲ. ಅವರೇನಾದರೂ ಇದ್ದಿದ್ದರೆ ಈಗ ಎದ್ದು ಒಂದೇ ಸಮನೆ ಗಲಾಟೆ ಮಾಡಲು ಪ್ರಾರಂಭ ಮಾಡುತ್ತಿದ್ದರು. ಕಾರಣವೇನೆಂದರೆ ನೀವು ಕೇಂದ್ರ ಸರ್ಕಾರವೆಂದು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೀರೆಂದು. ಒಂದು

ವೇಳೆ ಕೇಂದ್ರ ಸರ್ಕಾರವನ್ನು ತೆಗೆದುಕೊಂಡರೆ ಅವರಲ್ಲಿ ನಾವು ಸುಮಾರು ೩೦ ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿದ್ದೇವೆ. ಆದರೆ ಅಲ್ಲಿಂದ ನಮಗೆ ಬರತಕ್ಕಂಥಾದ್ದು ಏನೇನೂ ಇಲ್ಲ. ಈಗ ಇಂಡಸ್ಟ್ರಿಯಲ್ ಸ್ಟೀಲ್ ಫ್ಯಾಕ್ಟರಿಯನ್ನು ಗಣನೆಗೆ ತೆಗೆದುಕೊಂಡರೆ ಇವರಲ್ಲಿ ವಿಪರೀತವಾಗಿ ಲಾಭ ಬರುತ್ತದೆ. ಆದರೆ ಯಾವ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಲಾಭವಾಗುತ್ತದೆ ಎಂಬುದನ್ನು ನಾನು ವಿವರವಾಗಿ ಹೇಳುವುದಕ್ಕೆ ಬಯಸುವುದಿಲ್ಲ. ಆದರೂ ಕೂಡ ಒಂದೇ ಒಂದು ಅಂಶವನ್ನು ಹೇಳುವುದಾದರೆ ಇದರ ಉತ್ಪಾದನೆಯಲ್ಲಿ ಕ್ರೂಡ್ ಆಯಿಲ್ ಫ್ಯಾಕ್ಟರಿ ಇವೆ. ಇಲ್ಲಿ ಹೆಚ್ಚು ಆಯಿಲ್ ಬರುತ್ತದೆ. ಈ ಆಯಿಲ್ ಬೆಲೆ ಹೆಚ್ಚು. ಇದರಿಂದ ಸಾಮಾನ್ಯವಾಗಿ ಲಾಭದಾಯಕ ವಾಗುತ್ತದೆ. ಕೇವಲ ಸಾರ್ವಜನಿಕ ಉದ್ದಿಮೆಗಳನ್ನು ನಡೆಸಿಕೊಂಡು ಹೋಗತಕ್ಕಂಥ ದೃಷ್ಟಿಯಿಂದ ಇದನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಭದ್ರಾವತಿ ಪ್ರಾಜೆಕ್ಟ್ ವಿಚಾರದಲ್ಲಿ ಹೇಳುವುದಾದರೆ ಇದನ್ನು ವಿಸ್ತರಣೆ ಮಾಡಬೇಕಾದರೆ ಸುಮಾರು ೫೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ೫೦ ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಎಲ್ಲಿಂದ ತರಬೇಕು ? ಎಲ್ಲಾ ನೀರಾವರಿಗೆ ಉಪಯೋಗಿಸತಕ್ಕಂಥ ಹಣದಲ್ಲಿ ಬಂಡವಾಳ ಹಾಕುವುದಕ್ಕೆ ಆಗುತ್ತದೆಯೋ ? ಅಥವಾ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಇಟ್ಟಿರತಕ್ಕಂಥ ಹಣದಲ್ಲಿ ಕಡಿಮೆ ಮಾಡುವುದಕ್ಕೆ ಬರುತ್ತದೆಯೋ ಯಾವ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಒಂದು ವೇಳೆ ನಾವು ಈ ಪ್ರಾಜೆಕ್ಟ್‌ಗೆ ಬಂಡವಾಳವನ್ನು ಹಾಕಿದರೆ ಯಾವ ಪುರುಷಾರ್ಥ ಸಾಧನೆ ಮಾಡಬೇಕಾಗಿದೆ. ಆದ್ದರಿಂದ ಈ ಪ್ರಾಜೆಕ್ಟ್‌ನ್ನು ಬಿಟ್ಟು ಕೊಡುವುದು ಅಗತ್ಯವೆಂದು ನನಗನಿಸುತ್ತದೆ. ಇನ್ನು ಮಾನ್ಯ ಸದಸ್ಯರಾದಂತಹ ಯಡಿಯೂರಪ್ಪನವರು ಭಾಷಣ ಮಾಡುತ್ತಾ ಪ್ರಸ್ತಾಪ ಮಾಡಿದ್ದಾರೆ, ಅವರ ಮನಸ್ಸಿನಲ್ಲಿ ಯಾವುದು ಇದೆಯೋ ನನಗೆ ಗೊತ್ತಿಲ್ಲ. ಅವರು ಬಂದೋಪಾಧ್ಯಾಯ, ಪಾಲಿಫೈಬರ್ಸ್, ಯೂಕಲಿಪ್ಟಸ್ ಎಲ್ಲಾ ಒಟ್ಟಿಗೆ ಸೇರಿಸಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಮ್ಮಲ್ಲಿ ಅನೇಕ ವುಡ್ ಬೇಸ್‌ಡ್ ಇಂಡಸ್ಟ್ರಿಗಳು ಇವೆ. ಆ ಇಂಡಸ್ಟ್ರಿಗಳಿಗೆ ಸಾಕಷ್ಟು ಮರವನ್ನು ಒದಗಿಸಿಕೊಡುವಂತಹ ಪರಿಸ್ಥಿತಿಯಲ್ಲಿ ನಾವು ಇಲ್ಲ. ಕಾಗದದ ಕಾರ್ಖಾನೆ, ಮತ್ತು ಪಾಲಿಫೈಬರ್ಸ್‌ನವರು ಅನೇಕ ವರ್ಷಗಳಿಂದ ಕಾಡಿನಲ್ಲಿರತಕ್ಕಂಥ ಮರಗಳನ್ನು ಕಡಿದು ಇಂಡಸ್ಟ್ರಿಗಳನ್ನು ನಡೆಸಿಕೊಂಡು ಬರುತ್ತಿದ್ದರು. ಆದರೆ ಕಾಡಿನಲ್ಲಿ ಕಡಿದಂತಹ ಪ್ರಮಾಣದಲ್ಲಿ ಮರಗಳನ್ನು ಬೆಳೆಸತಕ್ಕಂಥ ಕೆಲಸ ಮಾಡಲಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ನಾನು ಕೇಂದ್ರ ಸರ್ಕಾರಕ್ಕೆ ಅನೇಕ ಪತ್ರಗಳನ್ನು ಬರೆದಿದ್ದೇನೆ. ಅದು ಏನೆಂದರೆ ಪಾಲಿಫೈಬರ್ಸ್ ವುಡ್ ಇಂಡಸ್ಟ್ರಿಗೆ ಮರವನ್ನು ಆಮದು ಮಾಡಿಕೊಳ್ಳುವುದಕ್ಕೆ ಅನುಮತಿಯನ್ನು ಕೊಡಿ ಎಂದು. ಆದರೆ ಇದುವರೆವಿಗೂ ಅವರಿಂದ ಅನುಮತಿ ದೊರೆತಿಲ್ಲ. ಏತಕ್ಕೆಂದರೆ ಇದು ನಮ್ಮಲ್ಲಿ ಇಲ್ಲ. ಅನೇಕ ವರ್ಷಗಳಿಂದ ಈ ವಿಚಾರ ಇತ್ತು. ಇಂಡಸ್ಟ್ರೀಸ್‌ಗಳಿಗೆ ನಾವು ಈ ಜವಾಬ್ದಾರಿಯನ್ನು ಕೊಟ್ಟರೆ, ನಿಮಗೆ ಬೇಕಾದಂಥ ಕಚ್ಚಾ ಸಾಮಗ್ರಿಯನ್ನು ನೀವು ಬೆಳೆದುಕೊಳ್ಳಬೇಕು ಎಂದರೆ ಅವರಲ್ಲಿ ಯಾರೂ ಇಲ್ಲ. ಇದು ಬೇರೆ ಎಲ್ಲಾ ದೇಶಗಳಲ್ಲಿ ಇದೆ. ಅದೂ ಅಲ್ಲದೆ ಇದರ ಜವಾಬ್ದಾರಿ ಸರ್ಕಾರಕ್ಕೆ ಇರುವುದಿಲ್ಲ. ಇಲ್ಲದಿದ್ದರೆ ಕಾಡುಗಳನ್ನು ಕಡಿಯತಕ್ಕಂಥ ಜವಾಬ್ದಾರಿ ಅವರದಾಗುತ್ತದೆ ಅಥವಾ ಕೊಳ್ಳತಕ್ಕಂಥಾದ್ದು ಬಂದೇ ಅವರ ಪಾಲಾಗುತ್ತದೆ. ಅದಕ್ಕಾಗಿ ಜಾಯಿಂಟ್ ಸೆಕ್ಟರ್ ಅಂಡರ್ ಟೇಕಿಂಗ್‌ನಲ್ಲಿ ಒಂದು ಉದ್ದಿಮೆಯನ್ನು ಮಾಡಿದ್ದೇವೆ. ಜಾಯಿಂಟ್ ಸೆಕ್ಟರ್‌ನಲ್ಲಿ ಸರ್ಕಾರದ ಶೇಕಡಾ ೫೦ ರಷ್ಟು ಪಾಲು, ಉದ್ದಿಮೆದಾರರದ್ದು ಶೇಕಡಾ ೪೯ ರಷ್ಟು ಪಾಲು ಇರುತ್ತದೆ. ಸರಕಾರದವರು ಅಧ್ಯಕ್ಷ ರಾಗಿರುತ್ತಾರೆ ಅಥವಾ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುತ್ತಾರೆ. ಆ ೩೦ ಸಾವಿರ ಎಕರೆ ಜಮೀನು ಯಾರಿಗೂ ಹೋಗುವುದಿಲ್ಲ. ಅದನ್ನು ಈ ಒಂದು ಅಂಡರ್ ಟೇಕಿಂಗ್‌ಗೆ ಕಾಡನ್ನು ಬೆಳೆಯಲಿಕ್ಕೆ ನಾವು ಕೊಡುತ್ತೇವೆ. ಅವರು ಕಾಡನ್ನು ಬೆಳೆಯಬೇಕು. ಕಾಡಿನಲ್ಲಿ ಬೆಳೆದಂಥ ಕಚ್ಚಾ ಸಾಮಗ್ರಿ ಇರುತ್ತದೆ, ಅದಕ್ಕೆ ಇಂತಹ ರೇಟನ್ನು ಕೊಡಬೇಕೆಂದು ನಾವು ಕಂಡೀಷನ್ ಹಾಕಿದ್ದೇವೆ. ಇದೇ ಸಂದರ್ಭದಲ್ಲಿ ನಾನು ಯೂಕಲಿಪ್ಟಸ್ ಬಗ್ಗೆ ಚರ್ಚೆಗೆ, ಇದು ಸೂಕ್ತ ಸಂದರ್ಭ ಅಲ್ಲ ಎಂದು ನಾನು ಹೋಗುತ್ತಿಲ್ಲ. ಸಂಬಂಧಪಟ್ಟ ಮಂತ್ರಿಗಳು ಸಂದರ್ಭ ಬಂದಾಗ ಸವಿಸ್ತಾರವಾಗಿ ಉತ್ತರ ಕೊಡುತ್ತಾರೆ. ಯೂಕಲಿಪ್ಟಸ್ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಇದಕ್ಕೆ ಪರವಾಗಿ, ವಿರೋಧವಾಗಿ ಒಂದು ವಾದ ಬಹಳ ಉಗ್ರವಾಗಿ ನಡೆದಿದೆ, ನಾನೂ ಇದನ್ನು ವಿರೋಧ ಮಾಡಿದವನು. ಉತ್ತರ ಕನ್ನಡ ಜಿಲ್ಲೆಯಲ್ಲಿ ಯೂಕಲಿಪ್ಟಸ್ ಹಾಕಕೂಡದು ಎಂದು ವಿರೋಧ ಮಾಡಿದವರಲ್ಲಿ ಮೊದಲನೆ ಯವನು ನಾನು. ಎಲ್ಲಿ ನೈಸರ್ಗಿಕವಾಗಿ ಕಾಡು ಬೆಳೆಯುತ್ತದೆ. ಅಲ್ಲಿ ನಿಸರ್ಗಕ್ಕೆ ಆತಂಕ ಉಂಟು

ಮಾಡಿ ಯಾವುದೇ ಒಂದು ಫ್ಯಾಕ್ಟರಿಗಾಗಲೀ, ಮತ್ತೊಂದಕ್ಕಾಗಲೀ, ಯಾವುದೇ ಒಂದು ಕಾರಣದಿಂದ ಯೂಕಲಿಪ್ಟಸ್ ಹಾಕಕೂಡದು ಎಂದು ಹೇಳಿದ್ದೇನೆ. ಯೂಕಲಿಪ್ಟಸ್ ಹಾಕುವುದು ನಮ್ಮ ಆಫೀಸರ್‌ಸ್‌ಗೆ, ಅರಣ್ಯ ಖಾತೆಯವರಿಗೆ ಬಹಳ ಸುಲಭ. ಅದನ್ನು ಕಾಯಬೇಕಾದುದಿಲ್ಲ, ದನಕರುಗಳು ತಿನ್ನುವುದಿಲ್ಲ. ಕುರಿಗಳು ತಿನ್ನುವುದಿಲ್ಲ, ಬೇರೆ ಯಾವ ಗಿಡ ಹಾಕಿದರೂ ಕೂಡಾ ನೀರು ಹಾಕಬೇಕು ಕುರಿ ತಿನ್ನುತ್ತದೆ, ಕಡಿದುಕೊಂಡು ಹೋಗುತ್ತಾರೆ, ಮತ್ತೇನಾದರೂ ಮಾಡುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇದೆ, ಅದು ಬಹಳ ಉತ್ತಮವಾದಂಥ ಅರಣ್ಯ ಎಂದು ಹೆಸರು ಪಡೆದಿದೆ. ಆದಕ್ಕೆ ನಾನು ಅಲ್ಲಿ ನೀಲಗಿರಿ ಹಾಕಲು ವಿರೋಧ ಮಾಡಿದ್ದುದ್ದು. ಉತ್ತರ ಕನ್ನಡ ಜಿಲ್ಲೆಯಲ್ಲಿ ೧೧೦–೧೫೦ ಇಂಚಿನಷ್ಟು ಮಳೆಯಾಗುತ್ತದೆ. ಅಂತಹ ಭಾಗದಲ್ಲಿ ಯೂಕಲಿಪ್ಟಸ್ ಹಾಕುವುದು ಒಂದು ಅಪರಾಧ ಎಂದು ನನ್ನ ದೃಷ್ಟಿ. ಬೇರೆ ಕಡೆಗೆ ಅಂದರೆ ೨೦ ಇಂಚು ೩೦ ಇಂಚು ಮಳೆ ಬರುತ್ತದೆ, ಅಂತಹ ಕಡೆ ಬೇರೆ ಯಾವುದೇ ಗಿಡ ಹಾಕಿದರೂ ನೀರು ಹಾಕಬೇಕಾಗುತ್ತದೆ, ಬೆಳೆಸಬೇಕಾಗುತ್ತದೆ, ಅಂತಹ ಕಡೆ ಎಲ್ಲಾ ತರಹದ ಗಿಡಗಳೂ ಬೆಳೆಯುವುದಿಲ್ಲ, ಅದರ ಬಗ್ಗೆ ಪ್ರಯೋಗವನ್ನೂ ಕೂಡಾ ನಾವು ಮಾಡಿ ನೋಡಿದ್ದೇವೆ, ಅಂತಹ ಕಡೆ ಯೂಕಲಿಪ್ಟಸ್ ಹಾಕಬೇಕೆಂದು ಹೇಳಿದರೆ, ಅದರಿಂದೇನೂ ತೊಂದರೆ ಇಲ್ಲವೆಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿದರು, ರಾಗಿ ಬೆಳೆಯುವುದನ್ನು ಬಿಟ್ಟು ಇದನ್ನು ಬೆಳೆಯುತ್ತಿದ್ದಾರೆ ಎಂದು. ಆದರೆ ರೈತರ ಮೇಲೆ ನಾವು ಇದರ ಬಗ್ಗೆ ಒತ್ತಾಯ ಮಾಡಲಿಕ್ಕೆ ಬರುವುದಿಲ್ಲ, ಎಂದು ಮಾನ್ಯ ಎಡೆಯೂರಪ್ಪನವರಿಗೆ ತಿಳಿಯ ಬಯಸುತ್ತೇನೆ. ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ ನೀರಾವರಿ ಪ್ರದೇಶದಲ್ಲಿ, ಇವತ್ತು ಅಲ್ಲಿನ ರೈತರು ಹತ್ತಿ ಬೆಳೆಯುವುದಿಲ್ಲ, ಗೋಧಿ ಬೆಳೆಯುವುದಿಲ್ಲ, ಬೇರೆ ಆಹಾರ ಪದಾರ್ಥಗಳನ್ನು ಅವರು ಬೆಳೆಯುವುದಿಲ್ಲ, ಯೂಕಲಿಪ್ಟಸ್ ಬೆಳೆಯುತ್ತಿದ್ದಾರೆ ಅಲ್ಲಿ ಆಂಧ್ರದವರು ಅನೇಕ ಜನ ಬಂದಿದ್ದಾರೆ. ತುಂಗಭದ್ರಾ ಯೋಜನೆ ಪ್ರಾರಂಭವಾದ ತಕ್ಷಣ ಅವರು ಬಂದು, ಅಲ್ಲಿನ ಜನರ ಜಮೀನು ಖರೀದಿ ಮಾಡಿದರು, ಎಕರೆಗೆ ೩೦೦ ರೂಪಾಯಿ, ೪೦೦ ರೂಪಾಯಿಗಳಂತೆ ಖರೀದಿ ಮಾಡಿದರು. ಇವತ್ತು ಅದೇ ಜಮೀನಿಗೆ ಎಕರೆಗೆ ೧೦ ಸಾವಿರ, ೧೫ ಸಾವಿರ, ೨೦ ಸಾವಿರ, ರೂಪಾಯಿಗಳೂ ಆಗಬಹುದು. ಅವರಲ್ಲೊಬ್ಬರು ನಮ್ಮ ಕಾಂಗ್ರೆಸ್-(ಐ) ಪಕ್ಷದ ಪಾರ್ಲಿಮೆಂಟ್ ಸದಸ್ಯರು, ಅವರ ಹೆಸರು ಹೇಳತಕ್ಕಂಥ ಅಗತ್ಯ ಇಲ್ಲ. ಅವರು ನನ್ನ ಸ್ನೇಹಿತರು, ಅವರ ತಂದೆಯೂ ನನ್ನ ಸ್ನೇಹಿತರಾಗಿದ್ದರು, ಅವರು ಆಂಧ್ರಪ್ರದೇಶದಲ್ಲಿ ಮಂತ್ರಿಗಳಾಗಿದ್ದರು. ಅವರ ಹತ್ತಿರ ಮಾತನಾಡುವಾಗ ಏನೋ ಅನುಷಂಗೀಕವಾದ ಈ ವಿಚಾರ ಬಂತು. ನಾನು ಇವತ್ತು ನನ್ನ ಜಮೀನಿನಲ್ಲಿ ನೂರಾರು ಎಕರೆಯಲ್ಲಿ ಯೂಕಲಿಪ್ಟಸ್ ಬೆಳೆಯುತ್ತಿದ್ದೇನೆ ಎಂದು ಅವರು ಹೇಳಿದರು. ನಾನು ಇದು ಏತಕ್ಕೆ ಉಪಯೋಗ ಆಗುತ್ತದೆ ಎಂದು ಕೇಳಿದೆ. ಅದಕ್ಕೆ ಅವರು ಏನು ಮಾಡಲಿ. ಬೇರೆ ಯಾವುದೇ ಬೆಳೆ ಹಾಕಿದರೂ ಅದನ್ನು ಕಾಯಬೇಕು, ಅಲ್ಲೇ ಇರಬೇಕು, ಕೂಲಿಗಾರರೂ ನಮಗೆ ಸಿಗುವುದಿಲ್ಲ. ಕೆಲಸ ಮಾಡುವವರೂ ಸಿಗುವುದಿಲ್ಲ ಕೆಲಸ ಮಾಡುವವರಿಗೆ ದಿನದಿನಕ್ಕೆ ಹೆಚ್ಚು ಕೂಲಿ ಕೊಡುತ್ತಾ ಹೋಗಬೇಕು, ಇದಾದರೆ ಒಂದು ಸಲ ಹಾಕಿದರೆ ಐದು ವರ್ಷ, ೬ ವರ್ಷ ಬಿಟ್ಟುಕೊಂಡು ಹೋಗಿ ಕಡಿದರೆ ಆಯಿತು. ಇದರಿಂದ ಒಂದು ಎಕರೆಗೆ ಸರಾಸರಿ ೧೦ ಸಾವಿರದಿಂದ ೧೫ ಸಾವಿರ ರೂಪಾಯಿಗಳು ನಮಗೆ ಬರುತ್ತದೆ ಎಂದು ಹೇಳಿದರು. ಈಗ ಕೋಲಾರದಲ್ಲಿ ಎಂದು ಇಟ್ಟು ಕೊಳ್ಳೋಣ, ಅಲ್ಲಿ ಒಬ್ಬ ರೈತ ರಾಗಿ ಬೆಳೆದರೆ ಅದರಿಂದ ಅವನಿಗೆ ನಷ್ಟವಾಗುತ್ತದೆ, ಅವನು ನಾನು ಯೂಕಲಿಪ್ಟಸ್ ಬೆಳೆಯುತ್ತೇನೆ ಎಂದು ಹೇಳಿದರೆ, ಯಾವ ಕಾನೂನು ಇದೆ ಅವನನ್ನು ಬೇಡ ಎಂದು ಹೇಳಲಿಕ್ಕೆ. ಒಬ್ಬ ವ್ಯಾಪಾರಿ ನಾನು ಇದನ್ನು ಮಾರಾಟ ಮಾಡಿದರೆ ನನಗೆ ಗಿಟ್ಟುವುದಿಲ್ಲ ಎಂದು ಹೇಳಿ ಮತ್ತೊಂದು ವಸ್ತುವನ್ನು ಮಾರಾಟ ಮಾಡುವುದಕ್ಕೆ ಸ್ವಾತಂತ್ರ್ಯ ಇದೆ. ಸಣ್ಣ ಕೈಗಾರಿಕೆ ನಡೆಸತಕ್ಕವನು ಒಂದು ವಸ್ತುವನ್ನು ತಯಾರಿಸುತ್ತಿರುತ್ತಾನೆ, ಅದು ಅವನಿಗೆ ಗಿಟ್ಟುವುದಿಲ್ಲ ಲಾಭದಾಯಕವಾಗುವುದಿಲ್ಲ ಅವನು ಬೇರೆಯದನ್ನು ತಯಾರು ಮಾಡಬಹುದು. ಇದೇ ರೀತಿ ರೈತ ಮಾಡಲಿಕ್ಕೆ ಬರುವುದಿಲ್ಲವೆ ? ಈ ರೀತಿ ನಿರ್ಬಂಧ ಹಾಕಲಿಕ್ಕೆ ಬರುವುದಿಲ್ಲ. ಅದು ಸರಿಯಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಕ್ರಾಪ್ ರಿಸ್ಟ್ರಿಕ್ಷನ್ಸ್ ಇದೆಯೆಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ನೀರಾವರಿ ಇದ್ದಲ್ಲಿ ಮಾತ್ರ, ನೀರು ಕೊಟ್ಟಾಗ ಮಾತ್ರ ಕೊಡಬಹುದು. ಅದು ಕಾಯಿದೆ ಬದ್ಧವಾಗಿ ಇಲ್ಲದೇ ಹೋದರೆ ರಿಸ್ಟ್ರಿಕ್ಟ್ ಮಾಡುವುದಕೆ ಬರುವುದಿಲ್ಲ. ಅದು ಮೂಲಭೂತ ಹಕ್ಕು, ಜಮೀನು ತನ್ನದೇ ಆದರೆ, ಸರಕಾರದಿಂದ

ಯಾವುದೇ ನೆರವು ಪಡೆಯಂದೇ ಇದ್ದರೆ, ಯಾವ ಬೇಳೆ ಬೇಕೋ ಅದನ್ನು ಬೆಳೆದುಕೊಳ್ಳಬಹುದು.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರೈತರಿಗೆ ಆಹಾರಧಾನ್ಯ ಬೆಳೆಯುವುದ ಕಿಂತಲೂ ಹತ್ತಿ ಬೆಳೆದರೆ ಲಾಭದಾಯಕ. ಹಾಗೆ ಎಲ್ಲಾ ರೈತರೂ ಹತ್ತಿ ಬೆಳೆಯುವುದಕ್ಕೆ ಪ್ರಾರಂಭ ಮಾಡಿ ಬಿಟ್ಟರೆ ಆಹಾರಧಾನ್ಯಕ್ಕೆ ನಮ್ಮ ದೇಶ ಏನು ಮಾಡಬೇಕು. ? ಸರ್ಕಾರದವರು ಆಹಾರಧಾನ್ಯ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡತಕ್ಕ ಕಾರ್ಯಕ್ರಮಗಳನ್ನು ಹಾಕಿ ಆಹಾರಧಾನ್ಯ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಬೇಕು. ಅವನ್ನು ಬಿಟ್ಟು ಲಾಭದಾಯಕವಾದುದನ್ನು ಬೆಳೆಯುವುದಕ್ಕೆ ಬಿಟ್ಟು ಬಿಟ್ಟರೆ ದೇಶದ ಪರಿಸ್ಥಿತಿ ಏನಾಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ .— ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಪ್ರಸ್ತಾಪ ಮಾಡಿದ ಮೂಲ ಉದ್ದೇಶ ಏನೆಂದರೆ, ಕರ್ನಾಟಕ ಪಲ್ಪ್ಸ್ ಅಂಡ್ ಪ್ಲೈವುಡ್ಸ್ ಲಿಮಿಟೆಡ್ ಎಂಬ ಸಂಸ್ಥೆಯನ್ನು ೧೯೮೦ನೇ ನವೆಂಬರ್ ತಿಂಗಳಲ್ಲಿ ಹುಟ್ಟು ಹಾಕಿ, ಫಾರೆಸ್ಟ್ ಪ್ಲಾಂಟೇಷನ್ ಕಾರ್ಪೊರೇಷನ್ ಮತ್ತು ಹಾರ್ಲಿಫೈಬರ್ಸ್‌ನ್ನು ಸರಕಾರದವರು ಪಾಲುದಾರರನ್ನಾಗಿ ಮಾಡಿ, ಒಂದು ಸಂಸ್ಥೆ ಮಾಡಿ ಅದಕ್ಕೆ ೩೦ ೦೦೦ ಎಕರೆ ಸಿ. ಅಂಡ್. ಡಿ. ಭೂಮಿಯನ್ನು ನೀಲಗಿರಿ ಮರ ಬೆಳೆಯಲು ಕೊಟ್ಟಿದ್ದಾರೆ. ಈ ಸಿ ಅಂಡ್ ಡಿ ಜಮೀನು ಯಾವುದು ? ನನಗೆ ಗೊತ್ತಿರುವಹಾಗೆ ಶಿಕಾರಿಪುರ ತಾಲ್ಲೂಕನಲ್ಲಿ ಹನ್ನೆರಡೂವರೆ ಸಾವಿರ ಎಕರೆ ಭೂಮಿಯನ್ನು ಇದಕ್ಕೆ ಕೊಟ್ಟಿದ್ದೀರಿ. ಈ ಹನ್ನೆರಡೂವರೆ ಸಾವಿರ ಎಕರೆಯೆಲ್ಲಾ ಸಿ ಅಂಡ್ ಡಿ ಲ್ಯಾಂಡ್ ಆಗಿದೆಯೇ ? ಸಾವಿರಇದರಲ್ಲಿ ಮೂರು ನಾಲ್ಕು ಎಕರೆಯನ್ನು ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡಿಕೊಂಡು ಅಲ್ಲಿ ಭತ್ತ, ರಾಗಿ, ಜೋಳವನ್ನು ಬೆಳೆಯುತ್ತಿದ್ದಾರೆ, ಅದು ಫಲವತ್ತಾದ ಭೂಮಿ. ತಮ್ಮ ಪ್ರಕಾರ ಇದು ಯಾವುದಕ್ಕೂ ಉಪಯೋಗಕ್ಕೆ ಆಗದೇ ಇರತಕ್ಕ ಭೂಮಿ. ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದು ಇಷ್ಟೇ, ಬೇರೆ ಯಾವುದೇ ಕೆಲಸ ತಾವು ಮಾಡಬೇಕಾದರೂ ಸಹ. ಅದಕ್ಕೆ ಒಂದು ಒಳ್ಳೆಯ ತಜ್ಞರ ಸಮಿತಿಯನ್ನು ನೇಮಕ ಮಾಡಿ, ಆ ಸಮಿತಿಯ ಅಭಿಪ್ರಾಯ ಪಡೆದು ಮಾಡುತ್ತೀರಿ. ಇದು ಒಳ್ಳೆಯ ಕೆಲಸ. ಕಳೆದ ಎರಡು ವರ್ಷಗಳಿಂದ ಇದನ್ನು ಮಾಡುತ್ತಿದ್ದೀರಿ. ಇದು ರೈತರ ಹಾಗೂ ಕೂಲಿಗಾರರ ಸಮಸ್ಯೆ ಆಗಿದೆ. ಈ ನೀಲಗಿರಿಮರ ಬೆಳೆಯುವುದಕ್ಕೆ ಯಾವ ತಜ್ಞರಸಮಿತಿಯ ಅಭಿಪ್ರಾಯ ಪಡೆದಿದ್ದೀರಿ ಸ್ವಾಮಿ ? ಈಗಾಗಲೇ ೨೮ ವರ್ಷದಿಂದ ನೀಲಗಿರಿ ಮರ ಬೆಳೆದಿರತಕ್ಕ ಜಮೀನನ್ನು ನೋಡಿದರೆ ಆ ಜಮೀನಿನಲ್ಲಿ ಬೇರೆ ಯಾವುದೇ ಬೆಳೆ ಬೆಳೆಯುವುದಕ್ಕೆ ಸಾಧ್ಯವಿಲ್ಲ ಅಂದ್ರುದಕಡೆಯವರು ಬಂದು ಬೆಳೆಯುತ್ತಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಅವರಿಗೆ ಹತ್ತಾರು ಸಾವಿರ ರೂಪಾಯಿಗಳ ಲಾಭ ಬರುತ್ತದೆ. ನೀಲಗಿರಿ ಮರ ಬೆಳೆಯುತ್ತಾರೆ, ಮಾರುತ್ತಾರೆ, ಲಾಭ ಮಾಡಿ ಕೊಳ್ಳುತ್ತಾರೆ. ಹೊರಟು ಹೋಗುತ್ತಾರೆ. ಆ ಜಮೀನು ನೂರಾರು ವರ್ಷ ಉಪಯೋಗಕ್ಕೆ ಬರುವುದಿಲ್ಲ. ಅದಕ್ಕೋಸ್ಕರ ಬೇರೆ ಬೇರೆ ದೇಶಗಳಲ್ಲಿ ಏನು ಪರಿಸ್ಥಿತಿ ಆಗಿದೆ, ಪರಿಣಾಮ ಆಗಿದೆ ಅದನ್ನು ನೋಡಬೇಕು. ಭೂಮಿಯಲ್ಲಿರುವ ನೀರನ್ನು ಕುಡಿದು ಮಣ್ಣಿನಲ್ಲಿ ವಿಷ ಉಗುಳುವ ಮರ ನೀಲಗಿರಿ ಮರ ಎಂದು ತಜ್ಞರು ಹೇಳಿದ್ದಾರೆ. ತಾವು ಮುಖ್ಯ ಮಂತ್ರಿಗಳಾದ ತಕ್ಷಣ ಮಾಡಿದಂಥ ಮೊದಲನೆ ಕೆಲಸ ಎಂದರೆ, ತಾವು ೮ ನೇ ತಾರೀಖು ಮುಖ್ಯ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಿರಿ, ೧೦ ನೇ ತಾರೀಖು ತಾವು ರೆವಿನ್ಯೂ ಕಮಿಷನರ್, ಡೆವಲಪ್‌ಮೆಂಟ್ ಕಮೀಷನರ್ ಅವರ ಮೀಟಿಂಗ್ ಕರೆದು ೨೫ ನೇ ತಾರೀಖಿನ ಒಳಗಾಗಿ ೩೦ ಸಾವಿರ ಎಕರೆ ಸಿ ಅಂಡ್ ಡಿ ಲ್ಯಾಂಡನ್ನು ಅರಣ್ಯ ಇಲಾಖೆಗೆ ವರ್ಗಾಯಿಸಬೇಕೆಂದು ಹೇಳಿದಿರಿ. ನನ್ನ ಹತ್ತಿರ ಅದಕ್ಕೆ ಸಂಬಂಧಪಟ್ಟ ಕಾಫೀಸ್ ಇದೆ. ಅದನ್ನು ಈ ಸದನಕ್ಕೆ ಬೇಕಾದರೆ ಕೊಡುತ್ತೇನೆ. ೧೦ ನೇ ತಾರೀಖಿನ ಮೀಟಿಂಗ್ ಆದ ಮೇಲೆ ೧೪ ನೇ ತಾರೀಖು ರೆವಿನ್ಯೂಕಮಿಷನ್‌ರವರು, ಚಿತ್ರದುರ್ಗ, ಬಳ್ಳಾರಿ, ಶಿವಮೊಗ್ಗ, ಧಾರವಾಡ ಜಿಲ್ಲೆಗಳ ನಾಲ್ಕೂ ಜನ ಜಿಲ್ಲಾಧಿಕಾರಿಗಳನ್ನು ಕರೆದು ೨೫ ನೇ ತಾರೀಖಿನ ಒಳಗಡೆ ೩೦ ಸಾವಿರ ಎಕರೆ ಭೂಮಿಯನ್ನು ಅರಣ್ಯ ಇಲಾಖೆಗೆ ಹ್ಯಾಂಡ್ ಓವರ್ ಮಾಡಬೇಕು ಎಂದು ಹೇಳಿದರು. ಇದರ ಅವಶ್ಯಕತೆ ಏನಿತ್ತು ? ಇವತ್ತು ಆ ಕಂಪೆನಿಯವರು ಹೆಲಿಕಾಫ್ಟರ್‌ನಲ್ಲಿ ಓಡಾಡುತ್ತಿದ್ದಾರೆ, ೧೨ ಸಾವಿರ ಎಕರೆ ಜಮೀನು ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಿದ್ದಾರೆ. ಇದು ಪ್ರಮುಖವಾದ ಅಂಶ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ಸಚಿವರು) .— ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಯಡಿಯೂರಪ್ಪನವರು ಪ್ಲಾಂಟೇಷನ್ ಕಾರ್ಪೊರೇಷನ್ ಜಾಯಿಂಟ್ ಸೆಕ್ಟರ್ ಬಗ್ಗೆ ಮೊನ್ನೆ ಮಾತನಾಡಿದರು. ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಹಾಗೆ ಅವರು confused state of

mind ...... ನಲ್ಲಿದ್ದಾರೆ. ನಿಜವಾಗಿಯೂ ಕೂಡ ಕೈಗಾರಿಕೆಗಳಿಗೆ ಸಿ. ಅಂಡ್ ಡಿ ಕ್ಲಾಸ್ ಲ್ಯಾಂಡ್ ಮತ್ತು degraded forest ಕೊಡಬೇಕೆಂದು ತೀರ್ಮಾನ ಮಾಡಿದ್ದು ೧೪-೯-೭೮ ನೇ ಇಸವಿಯಲ್ಲಿ. ಆಗ ಮಾನ್ಯ ಕೆ. ಹೆಚ್. ಪಾಟೀಲರೋ ಅಥವಾ ಮಾನ್ಯ ರಾಮೆಗೌಡರೋ ಅರಣ್ಯ ಮಂತ್ರಿಗಳಾಗಿದ್ದರು. ಆಗಲೇ ಒಂದು ತೀರ್ಮಾನ ತೆಗೆದುಕೊಂಡಿದ್ದರು. ಈರೀತಿ ದೈವದತ್ತವಾಗಿ ಬಂದ ಅರಣ್ಯವನ್ನು ಕಳೆದುಕೊಂಡು, ಅದು ನಾಶವಾಗಿ ಹೋದರೆ ಪರಿಸರದಲ್ಲಿ ಬದಲಾವಣೆಯಾಗುತ್ತದೆ. ಇದರಿಂದ ಕೈಗಾರಿಕಗಳಿಗೆ ಏನು ಅರಣ್ಯವನ್ನು ಕೊಡುತ್ತಿದ್ದಾರೆ ಕೈಗಾರಿಕೆಗಳ ಉದ್ಯಮಗಳೂ ಕೂಡ ಸಕ್ರೀಯವಾದ ಪಾತ್ರವನ್ನು ವಹಿಸಬೇಕು. ಈ ಬಗ್ಗೆ ೧೦ ವರ್ಷದ ದೃಷ್ಟಿಯಿಂದ ನೋಡುಂತಾ, ಮುಂದಿನ ಪೀಳಿಗೆಗಾಗಿ ಅರಣ್ಯವನ್ನು ಉಳಿಸಿ ಕೊಳ್ಳಬೇಕು, ಏನಾದರೂ ಯೋಜನೆ ಹಾಕಿಕೊಂಡು ಸಿ ಅಂಡ್ ಡಿ ಲ್ಯಾಂಡ್‌ನಿಂದ ಕೈಗಾರಿಕಾ ಉದ್ಯಮಗಳಿಗೆ, ಜನರಿಗೆ ಅರಣ್ಯವನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನವಾಗಿದೆ. ಈಗ ಉರವಲು ಕಟ್ಟಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಕರ್ನಾಟಕದಲ್ಲಿ ೧೧೦ ಲಕ್ಷ ಟನ್ ಉರುವಲು ಕಟ್ಟಿಗೆ ಬೇಕು. ನಮ್ಮಲ್ಲಿ ಹೆಚ್ಚು ಕಡಿಮೆ ೧೧ ಲಕ್ಷ ಹೇಕ್ಟರ್ ಬಂಜರು ಭೂಮಿ ಇದೆ. ಜನರಿಗೆ ನಾವೆಲ್ಲಾ ಸೇರಿ ಅನುಕೂಲ ಮಾಡಬೇಕು. ಅರಣ್ಯ ಬೆಳಸಬೇಕು. ಒಂದು ಕುಟುಂಬಕ್ಕೆ ೭ ಹೇಕ್ಟರ್ ಕೊಡಬೇಕು. ವರ್ಷಕ್ಕೆ ಒಂದು ಹೇಕ್ಟರ್‌ನಂತೆ ೭ ವರ್ಷಕ್ಕೆ ೭ ಹೆಕ್ಟರ್ ಕೊಡಬೇಕು. ೧೪ ವರ್ಷದ ಅವಧಿಯಲ್ಲಿ ೫೩ ಸಾವಿರ ನಬಾರ್ಡ್ ಮೂಲಕ ಸಾಲವನ್ನು ಕೊಟ್ಟು ಉರುವಲು ಕಟ್ಟಿಗೆ ಬೆಳೆಸತಕ್ಕಂಥ ಯೋಜನೆ ಇದರಲ್ಲಿ ಸರ್ಕಾರದ ಗುಪ್ತ ವ್ಯವಹಾರ ಏನೂ ಇಲ್ಲ ಕೈಗಾರಿಕೆಗಳಿಗೆ ಅರಣ್ಯವನ್ನು ಬಿಡುಗಡೆ ಮಾಡಬೇಕೆಂಬುದನ್ನು ೧೯೭೮ ನೇ ಇಸವಿಯಲ್ಲಿ ಅಂದಿನ ಸರ್ಕಾರ ತೀರ್ಮಾನ ತೆಗೆದುಕೊಂಡಿತು. ನಮ್ಮ ಜನತಾ ಸರ್ಕಾರ ಬಂದ ಮೇಲೆ ೧೯-೬-೮೪ ರಲ್ಲಿ ಈ ಬಗ್ಗೆ ತೀರ್ಮಾನ ತೆಗೆದುಕೊಂಡು, ೧೩-೯-೮೪ ರಲ್ಲಿ ಸರ್ಕಾರಿ ಆಜ್ಞೆ ಹೊರಡಿಸಿದ್ದೇವೆ. ಹೊಸ ಗವರ್ನಮೆಂಟ್ ಗುಪ್ತವ್ಯವಹಾರ ಮಾಡಿದೆಯೆಂದು ತಾವು ಏನು ಆಪಾದನೆ ಮಾಡಿದ್ದೀರಿ ಅದನ್ನು ರುಜುವಾತು ಮಾಡಿದರೆ ಮಂತ್ರಿ ಪದವಿಗೆ ನಾನು ರಾಜೀನಾಮೆ ಕೊಡುತ್ತೇನೆ. ಅಲ್ಲದೆ ನನ್ನ ಸದಸ್ಯತ್ವಕ್ಕೂ ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ ನೀವು ರಾಜೀನಾಮೆ ಕೊಡಬೇಕು.

(ಗೊಂದಲ)

ಶ್ರೀ ಯಡಿಯೂರಪ್ಪ .— ಸನ್ಮಾನ್ಯ ಮಂತ್ರಿಗಳು ಹೇಳಿದಂತೆ ಅವರು ಚಾಲೆಂಜ್ ಮಾಡಿದ್ದಾರೆ.........

(ಗೊಂದಲ)

ಶ್ರೀ ಆರ್. ಎನ್. ನಾಯಕ್ .— ಮಾನ್ಯ ಸಚಿವರು ಏಕೆ ಹೀಗೆ ......

(ಗೊಂದಲ)

ಶ್ರೀ ಬಿ. ಎ. ಜೀ. ವಿಜಯ .— ಮಾನ್ಯ ಯಡಿಯೂರಪ್ಪನವರು ಏನು ಮಾತನಾಡಿದ್ದಾರೆ ಅದರ ಬಗ್ಗೆ ಹೇಳಿದ್ದೇನೆ. ರೆಕಾರ್ಡ್ಸ್ ಬೇಕಾದರೆ ನೋಡಲಿ. ಇದರಲ್ಲಿ ಗುಪ್ತ ವ್ಯವಹಾರ ಏನಿದೆ?

(ಗೊಂದಲ)

ಶ್ರೀ ಸಿ. ಬೈರೇಗೌಡ — ನೀವು ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಎಂ. ರಾಮಪ್ಪ .— ಲೈಸೆನ್ಸ್ ಕೊಡುವುದಕ್ಕೂ ಕೂಡ ಪ್ರೊಸೀಜರ್ ಪ್ರಕಾರ ಮಾಡಿಲ್ಲ. ರಾಜಕೀಯ ಮಾಡಿ ಕೊಟ್ಟಿದ್ದಾರೆ. ಆದಕ್ಕೆ ನಿಮ್ಮ ಮಂತ್ರಿಗಳು ರಾಜೀನಾಮೆ ಕೊಡುತ್ತಾರೆಯೆ ?

(ಗೊಂದಲ)

Sri B. A. Jivijaya .—I don't know who is this Bandopadhya? Is he a Botanist ? Is he a Hydrologist ? At the best we can call him a Sociologist. What is his investigation about Eucalyptus ? What is his theory ?

ಅರಣ್ಯ ಇಲಾಖೆಯಲ್ಲಿ ಬೇಕಾದಷ್ಟು ತಜ್ಞರು ಇದ್ದಾರೆ. ಮಾನ್ಯ ಸದಸ್ಯರು ಬೇಕಾದರೆ ನಮ್ಮೊಡನೆ ಚರ್ಚೆಮಾಡಲಿ. ೧೧೧ ದೇಶಗಳಲ್ಲಿ ಯೂಕಲಿಪ್ಟಸ್ ಬೆಳೆಯುತ್ತಿದ್ದಾರೆ. ಇದರಲ್ಲಿ ಗುಪ್ತ, ವ್ಯವಹಾರ ಏನೂ ಇಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ .— ನನ್ನ ಹೆಸರನ್ನು ಅವರು ವ್ಯಕ್ತಪಡಿಸಿದ್ದಾರೆ. ಅದಕ್ಕೆ ನಾನು ಕ್ಲಾರಿಫೈ ಮಾಡಬೇಕು. ದಯಮಾಡಿ ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು ನೀವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್ ಯಡಿಯೂರಪ್ಪ .— ಸ್ವಾಮಿ ನನಗೂ ಕೇಳುವ ಹಕ್ಕು ಇದೆ. ನಾನು ಕ್ಲಾರಿಫೈ ಮಾಡುತ್ತಿದ್ದೇನೆ ಅವಕಾಶ ಮಾಡಿಕೊಡಬೇಕು. ನನ್ನ ಬಗ್ಗೆ ಅವರು ಹೇಳಿದ್ದಾರೆ ......

(ಗೊಂದಲ)

ಅಧ್ಯಕ್ಷರು .— ಮುಖ್ಯಮಂತ್ರಿಯವರು ಉತ್ತರ ಕೊಡಲಿ. ಆಮೇಲೆ.......

ಶ್ರೀ ಬಿ. ಎಸ್ ಎಡಿಯೂರಪ್ಪ.—ನಾನು ಕ್ಲಾರಿಫೈ ಮಾಡುವುದಕ್ಕೆ ಅವಕಾಶ ಬೇಡವೇ ? ದಯಮಾಡಿ ನನಗೆ ರಕ್ಷಣೆ ಕೊಡಬೇಕು. ಒಂದೇ ಒಂದು ನಿಮಿಷ ಉತ್ತರ......

ಅಧ್ಯಕ್ಷರು ,— ನೀವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ .— ನೀವು ನನಗೆ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ ? ರಾಜೀನಾಮೆ ಕೊಡಬೇಕು ಎನ್ನುವ ಮಾತನ್ನು ಹೇಳಿದರು. ನಾನು ರಾಜೀನಾಮೆ ಕೊಡುವುದಕೆ ಸಿದ್ಧನಿದ್ದೇನೆ. ಸದನದಲ್ಲಿ ನಮ್ಮ ರಕ್ಷಣೆಗೆ ಅವಕಾಶ ಕೊಡದೇ ಇದ್ದರೆ......

ಅಧ್ಯಕ್ಷರು.—ತಾವು ಈ ತರಹ ಮಾತನಾಡಿದರೆ ಹೇಗೆ...

ಶ್ರೀ ಬಿ. ಎಸ್. ಯಡಿಯೂರಪ್ಪ.—ನಮಗೆ ರಕ್ಷಣೆ ಕೊಡಬೇಕು. ನೀವು ಕೊಡದೇ ಹೋದರೆ ಇನ್ನ್ಯಾರು ರಕ್ಷಣೆ ಕೊಡಬೇಕು ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ.—ನಾವು ಕೇಳಬೇಕಾದಂತಹ ಸಮಯ ಬಂದಾಗ, ನಿಮ್ಮ ತಾತ ಬಂದರೂ ಬಿಡುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—Don't say like that ? ಅದಕ್ಕೆ ನಾವು ಹೆದರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವೂ ಹೆದರುವುದಿಲ್ಲ. ಯಾರು ಬಂದರೂ ನಾವು ಕೇಳಬೇಕಾದುದನ್ನು ಕೇಳುತ್ತೇವೆ.

SRI H. D. DEVEGOWDA.—Don't use that word. You are a Senior Member. You were also a Minister.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಪದೇ ಪದೇ ಹೆದರಿಸುತ್ತಾರೆ. ಅಧ್ಯಕ್ಷರೇ ತಮಗೆ ಗೊತ್ತಿದೆ. ಯಾರು ಮಾತನಾಡಿ ಅವರಿಗೆ ಪ್ರಚೋದನೆ ಮಾಡಿದ್ದಾರೆ ?...

(ಗೊಂದಲ)

ಶ್ರೀ ಬಿ. ಎ, ಜೀವಿಜಯ.—ಯಡಿಯೂರಪ್ಪನವರು ಬಾಯಿಗೆ ಬಂದಹಾಗೆ ಮಾತನಾಡಿದರೆ ಹೇಗೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಬಾಯಿಗೆ ಬಂದಹಾಗೆ ಮಾತನಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊನ್ನೆ ಮುಖ್ಯಮಂತ್ರಿಗಳು ಹೇಳಿದಹಾಗೆ, ಇಂದು ಎಲ್ಲಾ ಮಂತ್ರಿಗಳೂ ಆ ರೀತಿ ಹೇಳುತ್ತಿದ್ದಾರೆ.

ಅಧ್ಯಕ್ಷರು.—ನೀವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ.—ಈ ಸದನದಲ್ಲಿ ಜವಾಬ್ದಾರಿಯಿಂದ ಮಾತನಾಡಬೇಕು. ಬಾಯಿಗೆ ಬಂದಹಾಗೆ ಮಾತನಾಡಿದರೆ ಹೇಗೆ ?...

ಶ್ರೀ ಬಿ. ಎಸ್. ಯಡಿಯೂರಪ್ಪ.—ಸದನದಲ್ಲಿ ನನಗೆ ರಕ್ಷಣೆ ಕೊಡಬೇಕು. ಸನ್ಮಾನ್ಯ ಮಂತ್ರಿಗಳು ರಾಜಿನಾಮೆ ಕೊಡುತ್ತೇವೆಂದು ಹೇಳಿದರು...

ಶ್ರೀ ಆರ್. ಎನ್. ನಾಯಕ್.—ರಾಜಿನಾಮೆ ಕೊಡಿ ಎಂದು ಸಚಿವರು ಚಾಲೆಂಜ್ ಮಾಡಿದ್ದಾರೆ. ಅವರಿಗೆ ಉತ್ತರ ಕೊಡಲು ಅವಕಾಶ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ,...

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾನು ಕೇಳಿದ್ದಕ್ಕೆ ಉತ್ತರ ಕೊಡದೇ ಹೋದರೆ ಏನು ಅರ್ಥ ? ತಾವು ಈ ಸಂದರ್ಭದಲ್ಲಿ ನನಗೆ ರಕ್ಷಣೆ ಕೊಡಬೇಕು. ನಾನು ಕೇಳಿದ ಒಂದು ಕ್ಲಾರಿಫಿಕೇಷನ್‌ಗೆ ಅವರು ಉತ್ತರ ಕೊಡುವುದರ ಬಗ್ಗೆ ಚರ್ಚೆ ಮಾಡುವುದನ್ನು ಈರೀತಿ ಮಾತನಾಡಿದರೆ ಅದು ಸದನದಲ್ಲಿ ರಿಕಾರ್ಡ್‌ಗೆ ಹೋಗುವುದಿಲ್ಲವೇ ?

ಅಧ್ಯಕ್ಷರು.—ತಾವು ಈರೀತಿ ಮಾತನಾಡಿದರೆ ಅದು ರಿಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳಿಗೆ ತಾವು ರೆಸ್ಪೆಕ್ಟ್ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅದೇನು ಅರ್ಥ ಸ್ವಾಮಿ, ನಮಗೆ ತಾವು ರಕ್ಷಣ ಕೊಡಬೇಕು.

(ಗೊಂದಲ)

(೧೦–೧೫ ಜನರು ಮಾತನಾಡಲು ಎದ್ದು ನಿಂತರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಗೆ ರೆಸ್ಪೆಕ್ಟ್ ಕೊಡುತ್ತೇನೆ. ನಾನು ಈ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ ಈಗ್ಗೆ ೧೫–೨೦ ದಿವಸದಲ್ಲಿ ಈ ಒಂದು ವ್ಯವಹಾರ ನಡೆದಿದ್ದರಿಂದ. ರಾಜ್ಯದ ಜನತೆಗೆ ಅಪಮಾನ ಆಗತಕ್ಕಂಥ ರೀತಿಯಲ್ಲಿ ಇದು ನಡೆದಿದ್ದರಿಂದ ಈ ಬಗ್ಗೆ ರಾಜ್ಯ ಜನತೆಗೆ ಒಂದು ತಪ್ಪು ಕಲ್ಪನೆಗೆ ಅವಕಾಶ ಮಾಡಿಕೊಡಬಾರದು ಎನ್ನುವ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಅವರು ಅಲ್ಲಿ ನೀಲಗಿರಿ ಮರ ಏನು ಬೆಳೆಯುತ್ತಿದ್ದಾರೋ ಇದರಿಂದ ಅಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುವವರಿಗೆ ತೊಂದರೆಯಾಗುತ್ತದೆ ಆದುದರಿಂದ ಆ ಜಮೀನನ್ನು ಅವರಿಗೆ ಹ್ಯಾಂಡ್ ಓವರ್ ಏನು ಮಾಡುತ್ತಾರೆ ಅದಕ್ಕೆ ತಾವು ಅವಕಾಶಕೊಡಬಾರದು, ಬೇಕಾದರೆ ಇದರ ಬಗ್ಗೆ ತಜ್ಞರ ಒಂದು ಸಮಿತಿಯನ್ನು ಕರೆದು ಆಲೋಚನೆ ಮಾಡಿ, ಎಂದು ಪ್ರಸ್ತಾಪ ಮಾಡಿದೆ ಇನ್ನೇನೂ ಇಲ್ಲ. ಈ ಬಗ್ಗೆ ತನಿಖೆ ಮಾಡಿಸಿ ಎಂದು ಹೇಳಿದೆ. ಅದರಲ್ಲಿ ತಪ್ಪೇನೂ ಇಲ್ಲವಲ್ಲಾ. ಆ ಜಮೀನನ್ನು ಅವರಿಗೆ ಕೊಟ್ಟಿರತಕ್ಕಂತಾದ್ದು ಕಾನೂನು ಬಾಹಿರವಾಗಿದೆ, ಅದನ್ನು ನಾನು ಪ್ರೂವ್ ಮಾಡದೇ ಹೋದರೆ ರಾಜೀನಾಮೆ ಕೊಡುತ್ತೇನೆ. ಅದೇರೀತಿಯಲ್ಲಿ ಹೊರಗಡೆ ಜನರೂ ಮಾತನಾಡಿಕೊಂಡು ಹೋಗುತ್ತಿದ್ದಾರೆ. ನಾನು ಏನೂ ಅವರಿಂದ ದುಡ್ಡು ಹೊಡೆದಿದ್ದಾರೆ ಹಾಗೆ ಮಾಡಿದ್ದಾರೆ ಹೀಗೆ ಮಾಡಿದ್ದಾರೆ ಎಂದು ಹೇಳಿಲ್ಲ. ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ. ಕಳೆದ ೧೫–೨೦ ದಿನದಲ್ಲಿ ಇಂಥ ಒಂದು ವ್ಯವಹಾರ ನಡೆದಿದ್ದರಿಂದ ಈ ಬಗ್ಗೆ ರಾಜ್ಯದ ಜನತೆಗೆ ತಪ್ಪು ಕಲ್ಪನೆಗೆ ಅವಕಾಶ ಮಾಡಿಕೊಡಬೇಡಿ, ಅದಕ್ಕಾಗಿ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ ಇಲ್ಲದೇ ಹೋದರೆ ಅಲ್ಲಿ ರೈತರ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ ಎಂದು ಹೇಳಿದೆ. ಈ ಬಗ್ಗೆ ಕೂಡಲೇ ತಾವು ಒಂದು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದೆ. ಇಲ್ಲದೇ ಹೋದರೆ ಅಲ್ಲಿ ೧೨½ ಸಾವಿರ ಎಕರೆ ಜಮೀನು ಹೋಗುತ್ತದೆ. ಹಿಂದೆ ಡೆವಲಪ್‌ಮೆಂಟ್ ಕಮಿಟಿಯಲ್ಲಿ ಇದನ್ನು ವಿರೋಧ ಮಾಡಿದ್ದಾರೆ. ಎಲ್ಲಾ ಕಡೆಯೂ ಇದನ್ನು ವಿರೋಧ ಮಾಡುತ್ತಿದ್ದಾರೆ. ಹರಿಹರ ಪಾಲಿಫೈಬರ್ಸ್‌ನ ಮಾಲೀಕರನ್ನು ಉಳಿಸುವುದಕ್ಕೆ ಈರೀತಿ ಮಾಡುತ್ತಿದ್ದಾರೆ. ಆದುದರಿಂದ ಇದನ್ನು ಪುನರ್ವಿಮರ್ಶೆ ಮಾಡಬೇಕು ಎಂದು ಹೇಳುತ್ತೇನೆ. ನನ್ನ ಬಗ್ಗೆ ಒಂದೊಂದು ಪ್ರಶ್ನೆಗೂ ಈರೀತಿಯಾಗಿ ತಡೆ ಹಾಕುವುದಾದರೆ ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಅಲ್ಲದೆ ಇಲ್ಲಿ ಮಾತನಾಡುವುದಕ್ಕೂ ಕಷ್ಟವಾಗುತ್ತದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು ಎಂದು ಇಚ್ಛೆಪಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಹಿಂದೆ ಭಾಷಣ ಮಾಡಿದಾಗ ಯಾವ ಮಾತಿನಲ್ಲಿ ಹೇಳಿದರೋ ಅದೇ ಮಾತಿನಲ್ಲಿ, ಅದೇ ಶಬ್ದದಲ್ಲಿ ಅದೇ ವ್ಯಾಖ್ಯಾನದಲ್ಲೇ ಇವೊತ್ತೂ ಹೇಳಿದ್ದಾರೆ. ಈ ಬಗ್ಗೆ ಒಂದು ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ೨೦ ವರ್ಷದಿಂದ ಬಹಳ ಕಾಲದಿಂದ ಅವರು ಏನು ಜಮೀನು ಮಾಡಿಕೊಂಡು ಬರುತ್ತಿದ್ದರೋ ಅದನ್ನು ಹರಾಜು ಹಾಕುತ್ತಿದ್ದಾರೆ ಎಂದು ಹೇಳಿದರು. ಅದು ನಿಜವಲ್ಲ. ಮತ್ತು ಆ ಜಮೀನನ್ನು ಯಾರು ಎನ್‌ಕ್ರೋಚ್‌ಮೆಂಟ್ ಮಾಡುತ್ತಿದ್ದಾರೆ ಆ ಎನ್‌ಕ್ರೋಚ್‌ಮೆಂಟ್ ಜಮೀನನ್ನು ಅವರಿಗೆ ಕೊಟ್ಟಿಲ್ಲ. ಆ ಮೇಲೆ ಸಿ ಮತ್ತು ಡಿ ವರ್ಗದವರಿಗೆ ಸೇರಿದಂಥ ಸುಮಾರು ೨೨ ಲಕ್ಷ ಎಕರೆ ಜಮೀನು ಏನು ಇದೆ ಇದನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ವರ್ಗಾಯಿಸಲಾಗಿದೆ. ನಮ್ಮ ಪ್ರತಿವರ್ಷದ ಕಾರ್ಯಕ್ರಮ ಏನೆಂದರೆ ೩೫ ಸಾವಿರ ಹೆಕ್ಟೇರ್ಸ್ ಭೂಮಿಯಲ್ಲಿ ಕಾಡು ಬೆಳೆಸಬೇಕಾದರೆ ಸುಮಾರು ೨೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಈ ಬರಡು ಭೂಮಿಯಲ್ಲಿ ಅರಣ್ಯ ಅಥವಾ ಕಾಡನ್ನಾಗಲೆ ಪೂರ್ತಿಯಾಗಿ ನಾವು ಬೆಳಸಬೇಕಾದರೆ ಎಷ್ಟೋ ದಶಕಗಳು ಬೇಕಾಗುತ್ತದೆ, ಎನ್ನುವುದನ್ನು ಯೋಚನೆ ಮಾಡಬೇಕು. ಅದಕ್ಕಾಗಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಖಾಸಗಿಯವರು ಆಯಿತು, ಸಂಸ್ಥೆಯವರು ಆಯಿತು ಅಂಥಾವರೂ ಕೂಡ ಕಾಡನ್ನು ಬೆಳೆಸುವುದಕ್ಕೆ ಒಂದು ಅನುಕೂಲತೆಯನ್ನು ಒದಗಿಸಿಕೊಡಬೇಕೆಂದು ಹೇಳುವಂಥ ಒಂದು ಸ್ಕೀಮನ್ನು ಮಾಡಿದ್ದೇವೆ. ಈ ಬಗ್ಗೆ ಹೋದಸಲ ಈ ಸದನದಲ್ಲಿ ಚರ್ಚೆಯಾಗಿರಬೇಕು. ಮಾನ್ಯ ಅರಣ್ಯ ಖಾತೆ ಸಚಿವರು ತಮ್ಮ ಉತ್ತರದಲ್ಲಿ ಇದನ್ನು ಹೇಳಿರಬೇಕು. ಯಾವುದೇ ಶಿಕ್ಷಣ ಸಂಸ್ಥೆಯಾಗಿರಲಿ, ಯಾವುದೇ ಹಾಸ್ಟಲ್ ಆಗಿರಲಿ ಅಥವಾ ಬೇರೆ ಯಾವುದೇ ಒಂದು ಸಂಸ್ಥೆ ಆಗಿರಲಿ, ಅದು ರೋಟರಿ ಕ್ಲಬ್ಬೇ ಆಗಿರಲಿ, ಪಂಚಾಯಿತಿಯೇ ಆಗಿರಲಿ, ಬೇರೆ ಇನ್ನಾವುದೇ ಆಗಿರಲಿ ಅಲ್ಲಿ ಕಾಡನ್ನು ಬೆಳೆಸುತ್ತೇವೆಂದು ಅವರು ಮುಂದೆ ಬಂದರೆ ಅವರು ಎಷ್ಟು ಪ್ರದೇಶವನ್ನು ಕೇಳುತ್ತಾರೋ ಅಷ್ಟು ಪ್ರದೇಶವನ್ನು ಕೊಡಲಿಕ್ಕೆ ನಾವು ಸಿದ್ಧರಿದ್ದೇವೆ. ಇಷ್ಟೇ ಅಲ್ಲದೆ ಅವರು ಒಂದು ಹೆಕ್ಟೇರ್‌ನಲ್ಲಿ ಗಿಡಗಳನ್ನು ಬೆಳೆಸಿದರೆ ಅವರಿಗೆ ಒಂದು ಸಾವಿರ ರೂಪಾಯಿಗಳ ಸಬ್ಸಿಡಿಯನ್ನೂ ಸಹ ಕೊಡುವುದಕ್ಕೆ ಸಿದ್ಧರಿದ್ದೇವೆ. ಏತಕ್ಕೆಂದರೆ ಅದಕ್ಕೆ ಗುಳಿ ತೋಡಲಿಕ್ಕೆ, ಇನ್ನು ಬೇರೆ ಬೇರೆ ತರಹ ಕೆಲಸವನ್ನು ಪ್ರಾರಂಭದಲ್ಲಿ ಮಾಡಲಿಕ್ಕೆ ಹಣ ಕೊಡುತ್ತೇವೆ. ಆದರೆ ಅವರಿಗೆ ಜವಾಬ್ದಾರಿ ಏನು ಇದೆ ಎಂದರೆ ಗಿಡವನ್ನು ನೆಡಬೇಕು, ಅವುಗಳನ್ನು ರಕ್ಷಣೆ ಮಾಡಬೇಕು, ೧೫ ವರ್ಷ ೧೦ ವರ್ಷ ಅಥವಾ ೫ ವರ್ಷ ಆಯಾಯ ಜಾತಿ ಗಿಡಗಳು ಅವಲಂಬಿಕೆಯಂತೆ ಯಾವಾಗ ಫಲಕ್ಕೆ ಬರುತ್ತದೆಯೋ ಅವರು ಉಪಯೋಗ ಮಾಡಿಕೊಳ್ಳಲಿಕ್ಕೆ ಅದೇ ಸಂದರ್ಭದಲ್ಲಿ ನಾವು ಈರೀತಿ ಅವರಿಗೆ ಅನುಕೂಲವಾಗುವ ಹಾಗೆ ಯೋಚನೆ ಮಾಡಿದ್ದೇವೆ. ಈ ಒಂದು ಸ್ಕೀಂ ಬಗ್ಗೆ ಹಿಂದೆ ಈ ಸದನದಲ್ಲಿ ಚರ್ಚೆಯಾಗಿದೆ. ಅದೇ ರೀತಿಯಾಗಿ ಅನುಸೂಚಿತ ವರ್ಗಕ್ಕೆ ಸೇರಿದಂಥ ಯುವಕರು ಮುಂದೆ ಬಂದರೆ, ಅಥವಾ ಒಂದು ಸಂಘ ಮುಂದಕ್ಕೆ ಬಂದರೆ ಅವರಿಗೆ ನಾವು ಫಸ್ಟ್ ಪ್ರಿಯಾರಿಟಿ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದುದರಿಂದ ಇದು ಹೊಸ ವಿಚಾರವೇನೂ ಅಲ್ಲ. ಯೂಕಲಿಪ್ಟಸ್ ಟ್ರೀಸ್ ಕೆಟ್ಟದ್ದು ಎನ್ನುವುದಾಗಲಿ, ಒಳ್ಳೆಯದು ಎನ್ನುವುದಾಗಲಿ ಅದರ ಬಗ್ಗೆ ಈಗಾಗಲೇ ಸದನದಲ್ಲಿ ಚರ್ಚೆಯಾಗಿದೆ. ಅದು ಕೆಟ್ಟದ್ದೂ ಅಲ್ಲ, ಒಳ್ಳೆಯದೂ ಅಲ್ಲ ಎನ್ನುವ ಅಭಿಪ್ರಾಯವನ್ನು ತಜ್ಞರು ಹೇಳಿದ್ದಾರೆ. ಈ ಬಗ್ಗೆ ಶ್ರೀಮಾನ್ ಬಿ.ಎಸ್. ಯಡಿಯೂರಪ್ಪನವರಿಗೆ ಎಷ್ಟು ತಿಳುವಳಿಕೆ ಇದೆಯೋ ಅಷ್ಟೇ ತಿಳುವಳಿಕೆ ನನಗೂ ಇದೆ. ನಾನು ಒಂದು ಸಲ ಈ ವಿಚಾರದಲ್ಲಿ ತಜ್ಞರನ್ನು ಕರೆಯಿಸಿ ಚರ್ಚೆ ಮಾಡಿದೆ ಆಗ ಅದರ ಬಗ್ಗೆ ಪರವಾಗಿಯೂ ವಾದ ಮಾಡಿಕೊಂಡು ಬಂದರು, ವಿರೋಧವಾಗಿಯೂ ವಾದ ಮಾಡಿಕೊಂಡು ಬಂದರು. ಕೊನೆಯಲ್ಲಿ ನಾನು ಒಂದು ತೀರ್ಮಾನಕ್ಕೆ ಬಂದೆ. ಏನೆಂದರೆ ಈ ಯೂಕಲಿಪ್ಟಸ್ ಟ್ರೀಸ್ ಸಂಪೂರ್ಣವಾಗಿ ಕೆಟ್ಟದ್ದೂ ಅಲ್ಲ, ಸಂಪೂರ್ಣವಾಗಿ ಒಳ್ಳೆಯದೂ ಅಲ್ಲ ಎನ್ನುವ ರೀತಿಯಲ್ಲಿ ನನ್ನ ಮನಸ್ಸಿಗೆ ಒಂದು ಇಂಪ್ರೆಶನ್ ಆಯಿತು. ಆದರೆ ಶ್ರೀ ಬಿ. ಎಸ್. ಯಡಿಯೂರಪ್ಪನವರು ಮನಸ್ಸಿನಲ್ಲಿ ಇದರ ಬಗ್ಗೆ ಏನು ಒಂದು ಶಂಕೆ ಇದೆ ಆದರೆ ಬಗ್ಗೆ ನಾನು ಪ್ರತ್ಯೇಕವಾಗಿ ಒಂದು ಮೀಟಿಂಗ್ ಮಾಡಲಿಕ್ಕೆ ಪ್ರಯತ್ನಪಡುತ್ತೇನೆ. ಅಥವಾ ಅರಣ್ಯ ಖಾತೆ ಸಚಿವರಿಗೆ ಹೇಳುತ್ತೇನೆ. ಆ ಮೀಟಿಂಗ್‌ಗೆ ಬಂಡೋಪಾಧ್ಯಾಯರನ್ನೂ ಕರೆಸೋಣ. ಬೇರೆ ತಜ್ಞರನ್ನೂ ಕರೆಸೋಣ. ಬಂಡೋಪಾಧ್ಯಾಯರು ಯಾರು ಎನ್ನುವುದು ನನಗೆ ಗೊತ್ತಿಲ್ಲ, ಅವರು ಮತ್ತು ಅವರು ಹೆಂಡತಿ ಈ ವಿಚಾರದಲ್ಲಿ ಕಾಗದವನ್ನು ಬರೆಯುತ್ತಲೇ ಇದ್ದಾರೆ. ಅವರನ್ನೂ ಈ ಮೀಟಿಂಗ್‌ಗೆ ಕರೆಸೋಣ, ನಿಮ್ಮನ್ನೂ ಕರೆಸೋಣ. ನಾನು ಈ ಮಾತನ್ನು ಮಾನ್ಯ ಅರಣ್ಯ ಖಾತೆ ಸಚಿವರಗೆ ಹೇಳುತ್ತೇನೆ, ಅವರನ್ನೆಲ್ಲಾ ಕರೆಯಿಸಿ ಒಂದು ಮೀಟಿಂಗ್ ನಡೆಸಿ ಚರ್ಚೆ ಮಾಡಿ ಎಂದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆದುವರೆಗೆ ತಮ್ಮ ಆಜ್ಞೆಯನ್ನು ತಡೆಹಿಡಿಯಿರಿ.

ಶ್ರೀ ರಾಮಕೃಷ್ಣ ಹೆಗಡೆ.—ಹಾಗೆ ತಡೆಹಿಡಿಯುವುದಕ್ಕಾಗುವುದಿಲ್ಲ. ಆ ಮೀಟಿಂಗ್‌ನ್ನು ಬೇಕಾದರೆ ನೀವು ಊರಿಗೆ ಹೋಗುವುದಕಕ್ಕಿಂತ ಮುಂಚಿತವಾಗಿ ಮಾಡುವಂತೆ ಒಂದು ವ್ಯವಸ್ಥೆ ಮಾಡುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ನಮಗೆ ತಿಳಿದಿರುವ ಹಾಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿದ್ದೇವೆ. ಆ ಬಗ್ಗೆ ಮಾನ್ಯ ಸದಸ್ಯರು ಮಾತನಾಡುವಾಗ ಮಾನ್ಯ ರಾಜ್ಯಪಾಲರವರ ಬಾಯಿನಿಂದ ಹಾಗೆ ಹೇಳಿಸಿದ್ದಾರೆ, ಹೀಗೆ ಹೇಳಿಸಿದ್ದಾರೆ ಎನ್ನುವ ಟೀಕೆ ಮಾಡಿದ್ದಾರೆ. ರಾಜ್ಯಪಾಲರ ಭಾಷಣ ಅದು ಸರ್ಕಾರದ ನೀತಿ, ಸರ್ಕಾರ ಕಾರ್ಯಕ್ರಮಗಳನ್ನು ಸರಿಸಿ ಈ ಸದನದ ಮುಂದೆ ಇಡತಕ್ಕಂಥ ಒಂದು ಡಾಕ್ಯುಮೆಂಟ್, ಸ್ಟೇಟ್‌ಮೆಂಟ್. ಆದುದರಿಂದ ನಾವು ಏನು ಮಾಡಬೇಕು ಎಂದು ಅನಿಸಿದೆಯೋ ಅದನ್ನು ಇಲ್ಲಿ ಇಡುತ್ತೇವೆ. ಈಗ ಇದರ ಬಗ್ಗೆ ೩ ಕಾರ್ಯಕ್ರಮಗಳನ್ನು ನಾನು ಮೊಟ್ಟ ಮೊದಲಾಗಿ ತೆಗೆದುಕೊಳ್ಳುತ್ತೇನೆ. ಮೊದಲನೆಯದಾಗಿ ಎರಡು ರೂಪಾಯಿಗೆ ಒಂದು ಕಿಲೋ ಅಕ್ಕಿ ಇದರ ಜೊತೆಗೆ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಜೋಳ ಮತ್ತು ರಾಗಿ ಕೊಡುವುದು. ಎರಡನೆಯದಾಗಿ ಶಾಲಾ ಮಕ್ಕಳಿಗೆ ಸಮವಸ್ತ್ರ ಕೊಡುವುದು. ಮೂರನೆಯದಾಗಿ ಕಡಿಮೆ ಬೆಲೆಯಲ್ಲಿ ಒಂದೊಂದು ಸೀರೆ ಮತ್ತು ಧೋತ್ರವನ್ನು ಕೊಡುವುದು. ಈ ವಿಷಯದ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದರು ಇದು ಜನಪ್ರಿಯತೆಯನ್ನು ಗಳಿಸುವುದಕ್ಕೆ ಮಾಡುವಂಥ ಸಧನೆಯಾಗಿರುತ್ತದೆಂದು. ಎರಡನೆಯದು ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಕೇಳಿದರು. ಈ ಬಗ್ಗೆ ಒಂದು ಶಬ್ದವನ್ನು ಉಪಯೋಗಿಸಿದ್ದಾರೆ, ಬಹುಶ: ಮಾನ್ಯ ವೀರಪ್ಪಮೊಯ್ಲಿರವರು ಇದನ್ನು ಹೇಳಿರಬಹುದು ಎಂದು ಕಾಣುತ್ತದೆ. ಈ ಬಗ್ಗೆ ಒಂದು ರೀತಿ ಮೋಸ ಮಾಡಲಿಕ್ಕೆ ಹೀಗೆ ಮಾಡಿದ್ದಾರೆ ಎಂದು. ಇದರಲ್ಲಿ ಯಾವಮೋಸವೂ ಇಲ್ಲ ಇದರಲ್ಲಿ ಯಾವ ಜನಪ್ರಿಯತೆಯನ್ನೂ ಸಹ ಗಳಿಸತಕ್ಕಂಥ ಉದ್ದೇಶವೂ ಇಲ್ಲ. ಈ ಮಾರ್ಚಿ ೫ನೇ ತಾರೀಖು ನಮ್ಮ ರಾಜ್ಯದಲ್ಲಿ ಚುನಾವಣೆ ಏನು ನಡೆಯಿತು ಅದು ನಮ್ಮ ಒಂದು ಸಾಧನೆಯ ಆಧಾರದ ಮೇಲೆ ಇದೆ. ಆ ಚುನಾವಣೆಯ ಆಧಾರದ ಮೇಲೆ ಈ ಮಾತನ್ನು ನಾನು ಹೇಳಿದೆ.

೧೧-೦೦ ಎ.ಎಂ.

ಬಹುಶಃ ಮುಂದೆ ನಾವು ಮಾಡುತ್ತೇವೆ ಎಂದು ಹೇಳತಕ್ಕಂಥ ಕಾರ್ಯಕ್ರಮ ಬಿಟ್ಟು ಮತ್ತು ಸಾಧನೆಗಳ ಮೇಲೆ ಚುನಾವಣೆ ಯಾವುದಾದರೂ ನಡೆದಿದ್ದರೆ ಅದು ಮೊನ್ನೆ ಆದಂಥ ಚುನಾವಣೆ. ಆದುದರಿಂದ ಜನಪ್ರಿಯತೆ ಗಳಿಸತಕ್ಕ ಪ್ರಶ್ನೆ ಇರಲಿಲ್ಲ. ಆದರೆ ಇದನ್ನು ಏತಕ್ಕೆ ತರುವಂಥ ಪ್ರಸಂಗ ಬಂತು ಎಂದರೆ ಕೇವಲ ಆಂಧ್ರದಲ್ಲಿ ಮಾಡಿದ್ದಾರೆ, ಅದರ ಅನುಕರಣೆ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಅಲ್ಲ. ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಒಂದು ಅಧಿಕಾರ, ಕೇಂದ್ರ ಸರ್ಕಾರದ ನೀತಿಗೆ ಸಂಬಂಧಪಡತಕ್ಕಂಥಾದ್ದು ಬೆಲೆಗಳ ಹತೋಟಿ ಇಡಬೇಕು ಎನ್ನುವುದು. ಯಾವಾಗ ದಿನನಿತ್ಯ ಉಪಯೋಗಿಸತಕ್ಕಂಥ ಪ್ರತಿಯೊಂದು ವಸ್ತುವಿನ ಬೆಲೆ ಏರುತ್ತಾ ಹೋಗುತ್ತದೆಯೋ ಆ ಸಂದರ್ಭದಲ್ಲಿ ಸಾಮಾನ್ಯ ಜನರ ಖರೀದಿ ಮಾಡತಕ್ಕ ಶಕ್ತಿ ಕೊರತೆಯಾಗುತ್ತಾ ಹೋಗುತ್ತದೆ. ಇದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದ್ದಂಥ ವಿಚಾರ. ಹಳ್ಳಿಯಲ್ಲಿ ಕೆಲಸ ಮಾಡತಕ್ಕ ಒಬ್ಬ ಭೂಹೀನ ಕೂಲಿಕಾರನಿಗೆ ಸಿಗತಕ್ಕಂಥಾದ್ದು ದಿವಸಕ್ಕೆ ೧೦ ರೂಪಾಯಿಗಳು. ಅವನು ಇವೊತ್ತು ಸಂತೆಗೆ ಅಥವಾ ಪೇಟೆಗೆ ಹೋಗಿ ೧೦ ರೂಪಾಯಿಗಳನ್ನು ಖರ್ಚು ಮಾಡಿದರೆ ಅವನಿಗೆ ಎಷ್ಟು ಪ್ರಮಾಣದಲ್ಲಿ ಅಕ್ಕಿ ಅಥವಾ ಜೋಳ ಅಥವಾ ರಾಗಿ ಸಿಗುತ್ತದೆಯೋ, ಮುಂದಿನ ವಾರ ಅಲ್ಲಿ ಹೋದಾಗ ಅವನಿಗೆ ಅಷ್ಟು ಪ್ರಮಾಣದಲ್ಲಿ ಸಿಕ್ಕುವುದಿಲ್ಲ, ಕಡಿಮೆ ಸಿಗುತ್ತದೆ. ಏಕೆಂದರೆ, ಅವನ ಹತ್ತಿರ ಇರತಕ್ಕಂಥಾದ್ದು ೧೦ ರೂಪಾಯಿ. ಆದರೆ ಈ ವಸ್ತುವಿನ ಬೆಲೆ ಹೆಚ್ಚಾಗಿರುತ್ತದೆ. ನಮ್ಮ ರಾಜ್ಯದಲ್ಲಿ ಶೇಕಡ ೧೦ರಷ್ಟು ಜನ ಪ್ರತಿ ದಿವಸ ಕೇವಲ ೧೧೦೦ ಕ್ಯಾಲೋರಿಗಳ ಆಹಾರದ ಮೇಲೆ ಕೆಲಸ ಮಾಡುತ್ತಾರೆ. ಸಾಮಾನ್ಯವಾಗಿ ಕೆಲಸ ಮಾಡತಕ್ಕ ವ್ಯಕ್ತಿಗೆ ಪ್ರತಿ ದಿವಸ ೨೨೦೦ ಕ್ಯಾಲೊರಿಗಳಾದರೂ ಬೇಕು ಎನ್ನುವುದು ಅಂತರರಾಷ್ಟ್ರೀಯ ಆಹಾರ ನಿಗಮದವರ ಅಭಿಪ್ರಾಯ. ಬೇರೆ ರಾಜ್ಯಗಳಲ್ಲಿ ಇನ್ನೂ ಹೆಚ್ಚು ಇರಬಹುದು ಅಥವಾ ಕಡಿಮೆ ಇರಬಹುದು. ಕರ್ನಾಟಕ ರಾಜ್ಯದಲ್ಲಿ ಶೇಕಡ ೧೦ರಷ್ಟು ಜನರಿಗೆ ಎಷ್ಟು ಅತ್ಯಗತ್ಯವಾಗಿ ಬೇಕೋ ಅದಕ್ಕಿಂತ ಶೇಕಡ ೫೦ರಷ್ಟು ಮಾತ್ರ ಕ್ಯಾಲೊರಿಗಳು ಸಿಗುತ್ತಿದೆ. ಆದರಿಂದಲೇ ರೋಗರುಜಿನಗಳು ಬರುವುದು ಮತ್ತು

ಅವರ ಆಯುಸ್ಸು ಕೂಡ ಕ್ಷೀಣವಾಗುತ್ತದೆ. ಈಗ ನಾವು ವೆಲ್‌ಫೇರ್ ಸ್ಟೇಟ್ ಎಂದು ಹೇಳಿಕೊಳ್ಳುತ್ತೇವೆ. ಅದು ವೆಲ್‌ಫೇರ್ ಸ್ಟೇಟ್ ಆಗಿದ್ದರೆ ಅದರ ಕರ್ತವ್ಯವೇನೆಂದರೆ, ಈ ರೀತಿ ಅರ್ಧಹೊಟ್ಟೆ ಊಟ ಮಾಡಿ ಅದರಲ್ಲೇ ಯಾರು ಕೆಲಸ ಮಾಡುತ್ತಾರೆ ಅಂತಹವರಿಗೆ ಹೊಟ್ಟೆ ತುಂಬ ಎರಡು ಹೊತ್ತು ಊಟ ಕೊಡತಕ್ಕಂಥ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳದೇ ಹೋದರೆ ಅದು ವೆಲ್‌ಫೇರ್ ಸ್ಟೇಟ್ ಆಗುವುದಿಲ್ಲ. ಅದೇ ಎರಡು ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿ ಕೊಡತಕ್ಕಂಥ ನಿರ್ಧಾರಕ್ಕೆ ಕಾರಣ. ಬೆಲೆ ಏರಿಕೆಯನ್ನು ನಿಲ್ಲಿಸುವುದಕ್ಕೆ ಸಾಧ್ಯವಾದರೆ ಇದರ ಅಗತ್ಯ ಬರುವುದಿಲ್ಲ. ಅದೇ ರೀತಿ ಸಮವಸ್ತ್ರಗಳನ್ನು ಕೊಡತಕ್ಕಂಥಾದ್ದಕ್ಕೆ ಇದಕ್ಕೆ ಹೊರತಾದ ಮತ್ತೊಂದು ಕಾರಣ. ಮಾನ್ಯ ಬಸವಲಿಂಗಪ್ಪನವರಿಗೆ ಅದು ಹಿಡಿಸಬಹುದು. ಚಿಕ್ಕಮಕ್ಕಳು ಬಹಳ ಬೇಗ ಏನು ನೋಡುತ್ತಾರೋ ಅದನ್ನು ಕೇಳುತ್ತಾರೆ. ಏಕೆಂದರೆ, ಅವರ ಮನಸ್ಸಿನ ಮೇಲೆ ಅದರ ಪರಿಣಾಮ ಬಹಳ ತೀವ್ರವಾಗಿ ಆಗುತ್ತದೆ. ಶಾಲೆಗೆ ಹೋಗತಕ್ಕ ಮಕ್ಕಳು ಹಳ್ಳಿಯಲ್ಲಿರಲಿ, ಶಹರದಲ್ಲಿರಲಿ, ಒಬ್ಬರು ಉತ್ತಮವಾದ ಸಮವಸ್ತ್ರಗಳನ್ನು ಹಾಕಿಕೊಂಡು ಬಂದಿರುತ್ತಾರೆ, ಇನ್ನೊಬ್ಬರು ಹರಕಲು ಬಟ್ಟೆಯನ್ನು ಹಾಕಿಕೊಂಡಿರುತ್ತಾರೆ ಒಂದೇ ಸ್ಕೂಲಿನಲ್ಲಿ ಓದತಕ್ಕ ಮಕ್ಕಳಲ್ಲಿ ಕೆಲವು ಹೊಸ ಅಥವಾ ಶುದ್ಧವಾಗಿರತಕ್ಕ ಬಣ್ಣಬಣ್ಣದ ಪೋಷಾಕನ್ನು ಹಾಕಿಕೊಂಡಿರುತ್ತವೆ, ಇನ್ನು ಕೆಲವು ಮಕ್ಕಳು ಹರಕಲು ಲಂಗ ಬಟ್ಟೆಯನ್ನು ಹಾಕಿಕೊಂಡಿರುತ್ತವೆ. ಇದರ ಪರಿಣಾಮ ಆ ಒಂದು ಚಿಕ್ಕಮಕ್ಕಳ ಮನಸ್ಸಿನ ಮೇಲೆ ಏನಾಗುತ್ತದೆ ? ಅಂದರೆ, ಒಂದು ವರ್ಗದವರು ಮೇಲೆ ಇನ್ನೊಂದು ವರ್ಗದವರು ಕೀಳು ಅಥವಾ ಒಬ್ಬರು ಮೇಲು, ಒಬ್ಬರು ಕೀಳು ಎನ್ನತಕ್ಕ ಭಾವನೆ ಬರುತ್ತದೆ. ಅದು ವರ್ಗದ ದೃಷ್ಟಿಯಿಂದಾಗಲಿ ಅಥವಾ ಜಾತಿಯ ದೃಷ್ಟಿಯಿಂದಾಗಲಿ ಮೊಟ್ಟಮೊದಲು ಆ ಭಾವನೆಗಳು ಬರುವುದು ಅಲ್ಲಿ. ಪ್ರಪಂಚದ ಯಾವುದೇ ಸುಧಾರಿಸಿದಂಥ ದೇಶದಲ್ಲಿ ಎಂದರೆ ಅದು ಅಮೆರಿಕ ಇರಲಿ ಅಥವಾ ರಷ್ಯ ಇರಲಿ, ಎಲ್ಲಾ ಮಕ್ಕಳು ಒಂದೇ ರೀತಿಯಾದ ಸಮವಸ್ತ್ರ ಒಂದೇ ರೀತಿ ಊಟ, ಒಂದೇ ರೀತಿ ತೊಡಿಗೆ ಇರಬೇಕೆಂದು ಇದೆ. ಇಲ್ಲದೆ ಹೋದರೆ ಮಕ್ಕಳ ಮನಸ್ಸಿನಲ್ಲಿ ಒಬ್ಬರ ಬಗ್ಗೆ ದ್ವೇಷ ಒಬ್ಬರ ಬಗ್ಗೆ ನಿಕೃಷ್ಟ ಭಾವನೆ ಬರುತ್ತದೆ. ಒಂದು ಶ್ರೀಮಂತ ಮಗು ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡಿದ್ದಾಗ ಪಕ್ಕದಲ್ಲಿ ಸಾಮಾನ್ಯ ಮಧ್ಯಮ ವರ್ಗದ ಮಗು ಹರಕಲು ಲಂಗ ಹಾಕಿಕೊಂಡಿದ್ದರೆ ಅದಕ್ಕೆ ಕೀಳು ಭಾವನೆ ಬರುತ್ತದೆ. ಅದು ಆಗಕೂಡದು ಎನ್ನುವ ದೃಷ್ಟಿಯಿಂದ ಈ ಒಂದು ಸಮವಸ್ತ್ರ ಹಂಚತಕ್ಕ ಕಾರ್ಯಕ್ರಮ ಇದರಲ್ಲಿದೆ. ಕನಿಷ್ಟ ಪಕ್ಷ ಆ ವಯಸ್ಸಿನಲ್ಲಿರತಕ್ಕ ಮಕ್ಕಳಿಗೆ ಬಡವ, ಶ್ರೀಮಂತ ಎನ್ನುವ ಭಾವನೆ ಬಾರದೇ ಇರಲಿ ಎನ್ನುವ ಉದ್ದೇಶದಿಂದ ಇದನ್ನು ಮಾಡಿದೆ.

ಶ್ರೀ ಬಿ. ಬಸವಲಿಂಗಪ್ಪ.—ಒಳ್ಳೆಯ ನಿರ್ಧಾರ, ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನು ತಾಳಿಯ ಭಾಗ್ಯ ಕಾರ್ಯಕ್ರಮ. ಇದರ ಬಗ್ಗೆ ಸದನದಲ್ಲಿ ಬೇಕಾದಷ್ಟು ವ್ಯಂಗ್ಯ ನಡೆಯಿತು. ಅದರ ಬಗ್ಗೆ ಟೀಕೆ ಕೂಡ ಬಂತು. ಶ್ರೀಮತಿ ನಾಗರತ್ನಮ್ಮನವರು ತಮ್ಮದೇ ಆದಂಥ ಭಾಷೆಯಲ್ಲಿ ಅದರ ಬಗ್ಗೆ ಟೀಕೆ ಮಾಡಿದರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸಮವಸ್ತ್ರಗಳ ಬಗ್ಗೆ ಟೀಕೆ ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ತಾಳಿಯ ಭಾಗ್ಯ ಕಾರ್ಯಕ್ರಮದ ಬಗ್ಗೆ ಹೇಳಿದ್ದು. ಇದಕ್ಕೆ ಕಾರಣ ಏನು ಗೊತ್ತೇ ? ನಾನು ಅಲ್ಲಿ ಕುಳಿತಂಥ ಮಾನ್ಯ ಸದಸ್ಯರಿಗೆ ನೆನಪು ಮಾಡಿಕೊಡಲಿಕ್ಕೆ ಬಯಸುತ್ತೇನೆ. ೧೯೮೦ರ ಲೋಕಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ (ಐ) ಪಕ್ಷದ ಮುಖಂಡರು ಮತ್ತು ಅವರ ಏಕಮಾತ್ರ ನೇತಾರರು ಆದಂಥ ಶ್ರೀಮತಿ ಇಂದಿರಾಗಾಂಧಿಯವರಿಂದ ಹಿಡಿದು ಕೆಳಗಿನವರೆಗೆ ಮಾಡಿರತಕ್ಕ ಪ್ರಚಾರ ಏನು ? ನೆನಪಿದೆಯೋ ಇಲ್ಲವೋ. ಉಳ್ಳಾಗಡ್ಡೆಯ ಧಾರಣೆ ಮೇಲೆ ಹೋಯಿತು, ೫ ರೂಪಾಯಿಗಳು ಆಗಿದೆ ಎಂದು ಹೇಳಿದರು. ಬಾಕಿ ಎಲ್ಲಾ ಪದಾರ್ಥಗಳ ಧಾರಣೆ ಕಡಿಮೆಯಾದದ್ದು ಅವರು ಹೇಳಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಈ ಮಾತನ್ನು ಹೇಳಿದ್ದಾರೆ. ಏನೆಂದರೆ, ನಾಳೆ ನಿಮ್ಮ ಹೆಣ್ಣು ಮಕ್ಕಳಿಗೆ ಮದುವೆ ಮಾಡಬೇಕಾದರೆ ನಿಮಗೆ ಒಂದು ಗುಂಜಿ ಚಿನ್ನ ಕೂಡ ಸಿಕ್ಕುವುದಿಲ್ಲ, ಖರೀದಿ ಮಾಡುವುದಕ್ಕಾಗುವುದಿಲ್ಲ ಎಂದು ಪ್ರತಿಯೊಂದು ಪ್ರಚಾರದಲ್ಲೂ ಹೇಳಿದ್ದಾರೆ. ಈಗ ಜನತಾ ಸರ್ಕಾರ ಅವರಿಗೆ ಅದನ್ನು ಕೊಡುತ್ತದೆ, ಗೊತ್ತಾಯಿತೇ ? ಆಗ ಅವರು ಕೊಡುತ್ತೇವೆಂದು ಹೇಳಿದರು, ಕೊಡಲಿಲ್ಲ, ಈಗ ಜನತಾ ಸರ್ಕಾರ ಕೊಡುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮತಿ ಇಂದಿರಾಗಾಂಧಿಯವರು ಯಾವ ಯಾವ ವಿಚಾರಗಳನ್ನು ಹೇಳಿದ್ದರೋ ಅದನ್ನೆಲ್ಲಾ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟು ಸಾಧ್ಯವೋ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾಳಿ ಬಗ್ಗೆ ಹೇಳಿದ್ದಕ್ಕೆ ತಾಳಿ ಕೊಡುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟು ಮಾಡುತ್ತೇನೆ. ಯಾರಾದರೂ ಹೋಗಿ ಯಾರ ಕೊರಳಿಗಾದರೂ ತಾಳಿ ಕಟ್ಟುವುದಿಲ್ಲ. ಯಾರು ಮದುವೆಯಾಗುತ್ತಾರೋ ಆ ಗಂಡಸಿಗೇ ತಾಳಿ ಕೊಡುತ್ತೇವೆ, ಇದರ ಬಗ್ಗೆ ಯಾರೂ ಸಂದೇಹ ಪಡಬೇಕಾದ್ದಿಲ್ಲ. ಸಾಮೂಹಿಕ ವಿವಾಹದ ಬಗ್ಗೆ ಧರ್ಮಸ್ಥಳದಲ್ಲಿ ಮಾನ್ಯ ವೀರೇಂದ್ರ ಹೆಗಡೆಯವರು ಪ್ರತಿವರ್ಷ ಒಂದು ದೊಡ್ಡ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ಅದೇ ರೀತಿ ಬೇರೆ ಬೇರೆ ಸಂಸ್ಥೆಯವರು ಮಾಡುತ್ತಾರೆ. ಮಾನ್ಯ ಬಂಗಾರಪ್ಪನವರೂ ಇಟ್ಟುಕೊಂಡಿದ್ದಾರೆಂದು ಕೇಳಿದೆ. ಈ ರೀತಿ ಒಂದು ಕಾರ್ಯಕ್ರಮ ಇದ್ದಾಗ ಎಲ್ಲೆಲ್ಲಿ ಸಾಮೂಹಿಕ ಮದುವೆಗಳು ಆಗುತ್ತದೆಯೋ ಅಲ್ಲಿ ನಾವು ಆ ಸಾಮೂಹಿಕ ಮದುವೆಗಳಿಗೆ ಪ್ರೋತ್ಸಾಹ ಕೊಡತಕ್ಕಂಥಾದ್ದು ಮತ್ತು ಯಾರಿಗೆ ಮದುವೆ ಆಗುವಾಗ ಯಾವ ವಸ್ತುಗಳು ಅತ್ಯಗತ್ಯವಾಗಿ ಬೇಕೋ ಆ ವಸ್ತುಗಳನ್ನು ಕೊಳ್ಳತಕ್ಕಂಥ ಆರ್ಥಿಕ ಚೈತನ್ಯವಿರುವುದಿಲ್ಲವೋ ಅಂತಹವರಿಗೆ ಅವುಗಳನ್ನು ಒದಗಿಸತಕ್ಕಂಥಾದ್ದು ಈ ಕಾರ್ಯಕ್ರಮ.

ಶ್ರೀ ಬಂಗಾರಪ್ಪ.—ಬಂಗಾರದ ತಾಳಿ ಕೊಡುತ್ತೀರೋ, ಯಾವ ತಾಳಿ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಬಂಗಾರಪ್ಪನವರೇ, ಬಂಗಾರದ್ದೇ ತಾಳಿ ಕೊಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಹರಿಶಿನದ ಬೇರು ಕೊಟ್ಟು ಕುತ್ತಿಗೆಗೆ ಕಟ್ಟಿಸಿದರೆ.

ಶ್ರೀ ರಾಮಕೃಷ್ಣ ಹೆಗಡೆ.—ತಾಳಿ ಕೊಟ್ಟ ಮೇಲೆ ಅಲ್ಲಿ ಹೋಗಿ ನೋಡಿ. ಮಾನ್ಯ ಅಧ್ಯಕ್ಷರೆ, ಅನೇಕ ಸದಸ್ಯರು ಯಾವಾಗ ಜಾರಿಗೆ ತರುವುದು, ಮತ್ತು ಜಾರಿಗೆ ತರಲಿಕ್ಕೆ ಸಾಧ್ಯವೇ ಎಂದು ಸಂದೇಹ ವ್ಯಕ್ತಮಾಡಿದರು. ಸಮವಸ್ತ್ರ, ತಾಳಿಭಾಗ್ಯ ಯೋಜನೆ ಇವೆರಡನ್ನೂ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ದಿವಸ ಅಂದರೆ ಆಗಸ್ಟ್ ೧೫ನೇ ತಾರೀಖಿನ ದಿವಸ ಜಾರಿಗೆ ತರುತ್ತೇವೆ. ಇನ್ನು ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡತಕ್ಕ ಕಾರ್ಯಕ್ರಮ ಇದೆ. ಈ ಯೋಜನೆಯನ್ನು ನಮ್ಮ ಕರ್ನಾಟಕ ಏಕೀಕರಣದ ದಿವಸ ಅಂದರೆ ಕರ್ನಾಟಕ ರಾಜ್ಯೋತ್ಸವದ ದಿವಸ ನವೆಂಬರ್ ಒಂದನೇ ತಾರೀಖಿನಿಂದ ಜಾರಿಗೆ ತರುತ್ತೇವೆ. ಇದು ಮುಂದಿನ ವರ್ಷ ಅಲ್ಲ, ಈ ವರ್ಷದಿಂದಲೇ ಜಾರಿಗೆ ತರುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ನಾವು ಅಧಿಕಾರಕ್ಕೆ ಬಂದ ಕೂಡಲೇ ಮಾಡುತ್ತೇವೆಂದು ಚುನಾವಣೆ ಕಾಲದಲ್ಲಿ ಹೇಳಿದ್ದೀರಿ. ವರ್ಷದಲ್ಲಿ ಅರ್ಧ ಕಾಲ ಕಳೆದು ಮುಂದಕ್ಕೆ ಹಾಕಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಖಾರೀಫ್ ಕ್ರಾಪ್ ನಮ್ಮ ಕೈಗೆ ಬರಬೇಕು. ಸಾಕಷ್ಟು ಸಂಗ್ರಹ ಇಟ್ಟುಕೊಳ್ಳದೇ ಅದು ಆಗುವುದಿಲ್ಲ. ಇದಕ್ಕೆ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ. ಅವರಿಗೆ ಐಡೆಂಟಿಟಿ ಕಾರ್ಡ್ ಕೊಡಬೇಕೋ, ರೇಷನ್ ಕಾರ್ಡ್ ಕೊಡಬೇಕೋ, ಅದನ್ನು ನೋಡಬೇಕಾಗುತ್ತದೆ. ಮತ್ತೆ ಡಿಸ್ಟ್ರಿಬ್ಯೂಷನ್ ಸೆಂಟರ್ ಮಾಡಬೇಕಾಗುತ್ತದೆ. ಯಾರೇ ಆದರೂ ಚುನಾವಣೆ ಆದ ಮರು ದಿವಸಕ್ಕೆ ಮಾಡಲಿಕ್ಕೆ ಆಗುವುದಿಲ್ಲ. ಈ ಯೋಜನೆಯನ್ನು ನವೆಂಬರ್ ಒಂದನೆಯ ತಾರೀಖಿನಿಂದ ಜಾರಿಗೆ ತರುತ್ತೇವೆಂದು ಹೇಳಲಿಕ್ಕೆ ಬಯಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಕ್ಕಿಯನ್ನು ಕೊಡತಕ್ಕ ಕಾರ್ಯಕ್ರಮ ಉತ್ತರ ಕನ್ನಡ, ದಕ್ಷಿಣ ಕನ್ನಡ ಭಾಗದವರಿಗೆ ಮಾತ್ರ ಅನುಕೂಲವಾಗುತ್ತದೆ. ಇದರಿಂದ, ಹೆಗಡೆಯವರು ಮತ್ತು ವೀರಪ್ಪಮೊಯಿಲಿಯವರ ಕಡೆಗೆ ಅನುಕೂಲ. ನಮ್ಮ ಕಡೆ ರಾಗಿ, ಜೋಳ ತಿನ್ನತಕ್ಕವರು. ಅಕ್ಕಿ ಅಂದರೆ ಹಬ್ಬದ ದಿವಸ ಮಾತ್ರ ತರುತ್ತಾರೆ. ಆದ್ದರಿಂದ ದಯವಿಟ್ಟು ಜವಾರ್ ಮತ್ತು ರಾಗಿ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರೆ ಒಳ್ಳೆಯದಾಗುತ್ತದೆ. ಅಕ್ಕಿ ಹೆಚ್ಚಿನ ರೀತಿಯಲ್ಲಿ ನಮ್ಮ ಕಡೆ

ಪ್ರಯೋಜನ ಆಗುವುದಿಲ್ಲ ಎನ್ನುವುದೂ ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆ. ಆದ್ದರಿಂದ, ಮಾನ್ಯ ಮುಖ್ಯ ಮಂತ್ರಿಗಳು ಜವಾರ್ ಮತ್ತು ರಾಗಿ ಬಗ್ಗೆ ಹೇಳಿದರೆ ಚೆನ್ನಾಗಿರುತ್ತದೆ.

ಒಬ್ಬ ಸದಸ್ಯರು.—ಮನೆಗೆ ಒಬ್ಬರಿಗೆ ಕೆಲಸ ಕೊಡುವ ಬಗ್ಗೆ ಹೇಳಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಗರೀಬಿಹಠಾವೋ ಬಗ್ಗೆ ೧೯೭೧ನೇ ಇಸವಿಯಲ್ಲಿ ಹೇಳಿದ್ದರು. ಪ್ರತಿಯೊಬ್ಬರಿಗೂ ಮನೆ, ಜಮೀನು, ಕೆಲಸ ಕೊಡತಕ್ಕದ್ದು ತಾವು ಮಾಡಿದ್ದೀರಾ ?

ಶ್ರೀ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಮುಖ್ಯ ಮಂತ್ರಿಗಳು ಎಲ್ಲವನ್ನೂ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಮಾನ್ಯ ಬೊಮ್ಮಾಯಿಯವರು ಏತಕ್ಕೆ ಇಲ್ಲ ಎಂದು ಹೇಳುತ್ತಿದ್ದಾರೆ !

ಶ್ರೀ ಎಸ್. ಆರ್. ಬೊಮ್ಮಾಯಿ.—ಗರೀಬಿ ಹಠಾವೋ ಮರೆತಿದ್ದುದನ್ನು ಜ್ಞಾಪಿಸುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ — ಮಾನ್ಯ ಮುಖ್ಯ ಮಂತ್ರಿಗಳು ಬಹಳ ಸ್ವಾರಸ್ಯವಾಗಿ ಇಂಥಿಂಥ ದಿವಸದಿಂದ ತಮ್ಮ ಯೋಜನೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಮಾತ ನಾಡುವಾಗ ಏನು ಹೇಳಿದ್ದೆ ಎಂದರೆ, ಈಗ ಖೋತಾ ಬಡ್ಜೆಟ್ ೬೦೦ ಕೋಟಿ ರೂಪಾಯಿಗಳು ಇದೆ. ಅದರ ಜೊತೆಗೆ ಈ ವ್ಯವಹಾರ ಮಾಡಬೇಕಾದರೆ ನನ್ನ ಅಂದಾಜು ಲೆಕ್ಕದ ಪ್ರಕಾರ ೨೨೪.೩೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದು ಯೋಜನೆಗೆ ಬಾಹಿರವಾಗಿರತಕ್ಕ ಖರ್ಚಿನಬಾಬು ಈ ಹಣವನ್ನು ಯಾವ ರೀತಿಯಲ್ಲಿ ತಂದು ಒದಗಿಸುತ್ತೀರಿ. ಈ ಖೋತಾ ಬಡ್ಜೆಟ್ ಏನಿದೆ ಅದನ್ನು ಹೇಗೆ ಸರಿದೂಗಿಸುತ್ತೀರಿ ಎಂದು ವಿವರಣೆಯನ್ನು ಕೇಳಿದ್ದನೆಯೇ ಹೊರತು ಇವುಗಳನ್ನೆಲ್ಲಾ ಮಾಡಬೇಡಿ ಎಂದು ಹೇಳಿಲ್ಲ. ಇನ್ನು ಮಾನ್ಯ ಬೊಮ್ಮಾಯಿಯವರು ಗರೀಬಿ ಹಠಾವೋ ಬಗ್ಗೆ ಹೇಳಿದರು, ಅದರ ಹೆಜ್ಜೆಯಲ್ಲಿ ನಾವು ಹೋಗಿದ್ದೇವೆ. ನಾನು ಮಂತ್ರಿಯಾಗಿದ್ದಾಗ ಏನೇನು ಮಾಡಿದ್ದೇನೆ ತಮಗೆ ಗೊತ್ತಿದೆ. ಮಾನ್ಯ ಬೊಮ್ಮಾಯಿಯವರು ಒಂದೊಂದು ತಿಂಗಳಿಗೆ ಒಂದೊಂದು ಸಾವಿರ ಕೈಗಾರಿಕೆ ಮಾಡುತ್ತೇವೆಂದು ಹೇಳಿದ್ದರೂ ಒಂದೂ ಆಗಲಿಲ್ಲ ಈಗ ತಾವು ಪ್ರತಿಯೊಂದು ಕುಟುಂಬಕ್ಕೂ ಉದ್ಯೋಗ ಕೊಡುತ್ತೀರಾ !

ಶ್ರೀಎಸ್. ಆರ್. ಬೊಮ್ಮಾಯಿ.—ನಾವು ಹೇಳಿದ ಪ್ರಕಾರ ಮಾಡಿದ್ದೇವೆ, ಚರ್ಚೆ ಬಂದಾಗ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಪ್ರತಿಯೊಂದು ಮನೆಗೂ ಉದ್ಯೋಗ ಕೊಡುತ್ತೇವೆಂದು ಹೇಳಿದ್ದೀರಿ. ಅದು ನಿಮ್ಮ ನಿಲುವು ಅಷ್ಟೆ, ನಿಮ್ಮ ಕೈಯಲ್ಲಿ ಆಗುವುದಿಲ್ಲ, ಅದನ್ನು ಮಾಡಿದರೆ ನಿಮಗೆ ಶಹಭಾಸ್‌ಗಿರಿ ಕೊಡುತ್ತೇನೆ.

ಶ್ರೀ ಆರ್, ವೆಂಕಟರಾಮಯ್ಯ.—ಈಗಾಗಲೇ ಕೆಲವು ಸೊಸೈಟಿಗಳಲ್ಲಿ ಎರಡು ರೂಪಾಯಿಗಳಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುತ್ತಿದ್ದಾರೆ. ತಾಳಿಯಭಾಗ, ನವೆಂಬರ್ ಒಂದನೆಯ ತಾರೀಖಿನಿಂದ ಪ್ರಾರಂಭ ಮಾಡಿ, ಈಗ ಬರಗಾಲ ಇರುವುದರಿಂದ, ಅಕ್ಕಿ ಕೊಡತಕ್ಕ ಕಾರ್ಯಕ್ರಮವನ್ನು ಆಗಸ್ಟ್ ೧೫ ರಿಂದಲೇ ಪ್ರಾರಂಭ ಮಾಡುವುದು ಒಳ್ಳೆಯದು. ಈಗಾಗಲೇ ಕೆಲವು ಸೊಸೈಟಿಗಳಲ್ಲಿ ಎರಡು ರೂಪಾಯಿಗಳಿಗೆ ಒಂದು ಕೆ. ಜಿ. ಅಕ್ಕಿ ಕೊಡತಕ್ಕದ್ದು ಇದೆ.

ಶ್ರೀ ರಾಮಕೃಷ್ಣ ಹೆಗಡೆ.— ಕೈಗಾರಿಕೆ ವಿಚಾರದಲ್ಲಿ ಮಾನ್ಯ ಸದಸ್ಯರು ತಿಳಿಸಿದರು ಅದಕ್ಕೆ ನಾನು ಅನಂತರ ಉತ್ತರ ಕೊಡುತ್ತೇನೆ. ನಾನು ಇಷ್ಟು ಮಾತ್ರ ಹೇಳಬಹುದು ಎರಡು ವರ್ಷಗಳಲ್ಲಿ ೧೮ ಸಾವಿರಕ್ಕಿಂತಲೂ ಹೆಚ್ಚು ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪನೆ ಮಾಡಿದ್ದೇವೆ. ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ಮಹತ್ವವಾದ ವಿಚಾರವನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ ಅದು ವಿಜಯನಗರ ಉಕ್ಕಿನ ಕಾರ್ಖಾನೆ ವಿಚಾರ. ಇದರಲ್ಲಿ ರಾಜಕೀಯವನ್ನು ಬೆರಸತಕ್ಕದ್ದು ಸೂಕ್ತ ಅಲ್ಲ. ಮತ್ತು ರಾಜಕೀಯವನ್ನು ಬೆರಸಕೂಡದು. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಲೇಟೆಸ್ಟ್ ಸ್ಟ್ಯಾಂಡ್ ಏನು ಎಂದರೆ ಮೊನ್ನೆ ಶ್ರೀಮಾನ್ ಸಾಠೆಯವರು ನಮ್ಮ ರಾಜ್ಯದ ಲೋಕ ಸಭೆಯ ಸದಸ್ಯರಾದ ಮಾನ್ಯ ಕೃಷ್ಣಯ್ಯರ್‌ರವರ ಪ್ರಶ್ನೆಗೆ ಉತ್ತರ ರೂಪವಾಗಿ ಕೊಟ್ಟಂತಹ ಸ್ಟೇಟ್ ಮೆಂಟ್ ಏನೆಂದರೆ, ಆದರಲ್ಲಿ ಅವರು ಬಾಕಿ ಎಲ್ಲಾ ವಿಚಾರಗಳನ್ನು ಕೇಳಿದ್ದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಅವರು ಕೊನೆಗೆ ಏನು ಹೇಳಿದರು ಎಂದರೆ ನೀವು ನಮಗೆ ಪವರ್ ಕೊಡುತ್ತೇವೆಂದು

ಹೇಳಿ, ನಾವು ನಿಮಗೆ ಸ್ಟೀಲ್ ಪ್ಲಾಂಟ್ ಕೊಡುತ್ತೇವೆ ಎಂದು ಉತ್ತರ ಹೇಳಿದ್ದಾರೆ. ಇದೊಂದು ದುರದೃಷ್ಟಕರ ಮಾತು ಎಂದು ನಾನು ಹೇಳಬಯಸುತ್ತೇನೆ. ಯಾವ ಧಾಟಿಯಲ್ಲಿ ಇದನ್ನು ಹೇಳಿದರೂ ಅದು ದುರದೃಷ್ಟಕರ. ಈಗ ನಮ್ಮ ಹತ್ತಿರ ರಿಸೋರಸಸ್ ಇಲ್ಲ, ವಯಾಬಿಲಿಟೀಸ್ ಇಲ್ಲ, ಅನ್‌ಎಕನಾಮಿಕ್ ಪ್ರಾಜೆಕ್ಟ್ ಎಂದು ಈ ತರಹ ಉತ್ತರ ಕೊಟ್ಟಿದ್ದರೆ ಅದು ಬೇರೆ. ಮಾನ್ಯ ಸಾಠೆಯವರಿಗೆ ಗೊತ್ತಿರಬೇಕು. ನಾವು ವಿದ್ಯುಚ್ಛಕ್ತಿ ಅಭಾವದಿಂದ ದೊಡ್ಡ ದೊಡ್ಡದಾಗಿ ವಿದ್ಯುಚ್ಛಕ್ತಿ ಬಳಸುವ ಕಾರ್ಖಾನೆಗಳಿಗೆ ಶೇಕಡಾ ೮೦ ರಷ್ಟು ವಿದ್ಯುಚ್ಛಕ್ತಿಯನ್ನು ಕಡಿಮೆ ಮಾಡಿದ್ದೇವೆ. ಇಂತಹ ಪರಿಸ್ಥಿತಿಯನ್ನು ನೋಡಿಕೊಂಡು ಕರ್ನಾಟಕ ಸರ್ಕಾರ ಇಂದು ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥ ಸ್ಥಿತಿಯಲ್ಲಿ ಇಲ್ಲ ಎಂದು ಗೊತ್ತಾದ ಮೇಲೆ ನಮ್ಮ ಸುಟ್ಟ ಗಾಯಕ್ಕೆ ಪುನಃ ಬರೆ ಹಾಕುವ ರೀತಿಯಲ್ಲಿ ನೀವು ವಿದ್ಯುಚ್ಛಕ್ತಿ ಕೊಟ್ಟರೆ ನಾಳೆ ವಿಜಯನಗರ ಉಕ್ಕಿನ ಕಾರ್ಖಾನೆ ಕೊಡುತ್ತೇವೆಂದು ಹೇಳಿದ್ದಾರೆ.

ಮಾನ್ಯ ಸಭಾಪತಿಗಳೇ, ಅವರ ಆಫರನ್ನು ನಾನು ಸ್ವೀಕಾರ ಮಾಡುತ್ತೇನೆ. ನಾಳೆಯಿಂದಲೇ ಅವರು ಎಷ್ಟು ವಿದ್ಯುತ್ ಬೇಕು ಎಂದು ಹೇಳಲಿ. ನಮ್ಮ ಹಕ್ಕಿನ ಪ್ರಕಾರ ರಾಮಗುಂಡಂನಿಂದ ಬರತಕ್ಕ ವಿದ್ಯುತ್, ರಾಯಚೂರು ಥರ್ಮಲ್ ಘಟಕದಿಂದ ಬರತಕ್ಕ ವಿದ್ಯುತ್ ಪೂರ್ಣವಾಗಿ ವಿಜಯನಗರ ಉಕ್ಕಿನ ಕಾರ್ಖಾನೆಗಾಗಿ ಮೀಸಲಿಡುತ್ತೇವೆ. ನಾನು ಪತ್ರಿಕೆಯಲ್ಲಿ ನೋಡಿದೆ, ನನಗೆ ಕೆಲವು ಪತ್ರಗಳು ಬರುತ್ತಿವೆ. ಅನೇಕ ಜನ ನಾಗರೀಕರು ಹಾಗೂ ಕೈಗಾರಿಕೆಗಳವರು ನಾವು ಉಪಯೋಗಿಸುವಂಥ ವಿದ್ಯುತ್ ಕಡಿಮೆ ಮಾಡಿಕೊಳ್ಳುತ್ತೇವೆ. ವಿಜಯನಗರ ಉಕ್ಕಿನ ಕಾರ್ಖಾನೆಗೆ ವಿದ್ಯುತ್ ಕೊಡಿ ಎಂದು ಹೇಳಿದ್ದಾರೆ. ಅದನ್ನು ಮಾಡಲಿಕ್ಕೆ ಕರ್ನಾಟಕ ಸರ್ಕಾರ ಸಿದ್ಧ ಇದೆ. ನಾನು ವಿಜಯನಗರ ಉಕ್ಕಿನ ಕಾರ್ಖಾನೆಗೆ ಸಂಬಂಧಪಟ್ಟಂತೆ ಮಾನ್ಯ ಉಕ್ಕು ಮಂತ್ರಿಯವರಿಗೆ ಪತ್ರ ಬರೆದಿದ್ದೇನೆ. ಮಾನ್ಯ ಸದಸ್ಯರ ತಿಳುವಳಿಕೆಗಾಗಿ ಇರಲಿ ಎಂದು ಅದನ್ನು ಸಭೆಯ ಮುಂದಿಟ್ಟಿದ್ದೇನೆ. ದಯವಿಟ್ಟು ಅದನ್ನು ತಾವುಗಳೆಲ್ಲರೂ ಓದಬೇಕು. ವಿಜಯನಗರ ಉಕ್ಕಿನ ಕಾರ್ಖಾನೆಗೆ ಸುಮಾರು ೨೦–೨೧ ವರ್ಷಗಳ ಇತಿಹಾಸ ಇದೆ. ಮೊಟ್ಟ ಮೊದಲು ೧೯೬೪ ನೇ ಇಸವಿಯಲ್ಲಿ ಬ್ರಿಟಿಷ್ ಇಂಡಿಯಾ ಕಂಪನಿಯವರಿಗೆ ಇದರ ಬಗ್ಗೆ ಬಡ್ಜೆಟ್ ತಯಾರು ಮಾಡುವುದಕ್ಕೆ ಸರ್ಕಾರ ಹೇಳಿತ್ತು. ಕೊನೆಗೆ ೧೯೭೧ ರಲ್ಲಿ ಒಂದು ಬಡ್ಜೆಟ್ ಸಿದ್ಧವಾಯಿತು, ಆಗ ೩.೧ ಮಿಲಿಯನ್ ಟನ್ ಉಕ್ಕು ಉತ್ಪಾದನೆಯ ಕ್ಯಾಪಾಸಿಟಿ ಇರತಕ್ಕ ಉಕ್ಕಿನ ಕಾರ್ಖಾನೆ ಮಾಡಬೇಕು. ಸುಮಾರು ೨೦.೦೦೦ ಜನರಿಗೆ ಉದ್ಯೋಗ ಸಿಗುವಂಥ ಅಂದಾಜಿನ ಪ್ರಾಜೆಕ್ಟ್ ತಯಾರು ಮಾಡಿದ ಮೇಲೆ ೭೧ ನೇ ಇಸವಿಯಲ್ಲಿ ಆಗಿನ ಪ್ರಧಾನಿಯವರಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಇದಕ್ಕೆ ಅಡಿಗಲ್ಲು ಹಾಕಿದರು. ಇದಾದ ಮೇಲೆ ಸೇಲಂನಲ್ಲಿ ಉಕ್ಕಿನ ಕಾರ್ಖಾನೆ ಆಯಿತು. ಒರಿಸ್ಸಾದಲ್ಲಿ ಆಯಿತು, ಆಂಧ್ರದಲ್ಲಿ ಆಯಿತು ಎಲ್ಲಾ ಭಾಗಕ್ಕಿಂತಲೂ ಉತ್ಕೃಷ್ಟವಾದ ಅದಿರು ಬಳ್ಳಾರಿಯಲ್ಲಿ ದೊರೆಯುತ್ತದೆ. ಶ್ರೀಮಾನ್ ಸಾಠೆಯವರು ಕುಂಟು ನೆಪವನ್ನು ಕೊಟ್ಟು ಮುಂದಕ್ಕೆ ಹಾಕದೇ ತಕ್ಷಣ ಉಕ್ಕು ಕಾರ್ಖಾನೆಯನ್ನು ಪ್ರಾರಂಭ ಮಾಡತಕ್ಕ ಕೆಲಸವನ್ನು ಮಾಡಲಿ ಎಂದು ಹೇಳುತ್ತೇನೆ. ನಾನು ಮತ್ತೊಮ್ಮೆ ನಾಗರೀಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ವಿದ್ಯುತ್ ಬಳಕೆ ಮಾಡುವವರು ೧೦೦ಕ್ಕೆ ೨೦ ಕ್ಕಿಂತ ಹೆಚ್ಚು ಖೋತಾ ಮಾಡಿ ವಿಜಯನಗರ ಉಕ್ಕಿನ ಕಾರ್ಖಾನೆಗೆ ಕೊಡುತ್ತೇನೆ. ಅವರು ಯಾವ ದಿವಸದಿಂದ ವಿದ್ಯುತ್ ಬೇಕೆಂಬುದನ್ನು ತಿಳಿಸಲಿ ಎಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧದ ಬಗ್ಗೆ ನಾನು ಮಾತನಾಡಿದರೆ ಸಾಕು ಕೇಂದ್ರದ ಜೊತೆಯಲ್ಲಿ ಕಾಲುಕೆರೆದು ಜಗಳ ಮಾಡುತ್ತಾರೆ. ಇವರಿಗೆ ಸಹಾಯ ಏನು ಮಾಡುತ್ತಾರೆ ಹೇಗೆ ಕೊಡುತ್ತಾರೆಂದು ಮಾನ್ಯ ಸದಸ್ಯರು ಕೆಲವರು ಹೇಳಿದ್ದಾರೆ. ನಾನು ಕರ್ನಾಟಕದ ಮುಖ್ಯ ಮಂತ್ರಿಯಾದಾಗಿನಿಂದಲೂ ನನ್ನ ಧೋರಣೆ ಒಂದೇ ಆಗಿದೆ. ಎರಡು ಸರ್ಕಾರಗಳ ಉದ್ದೇಶ ಒಂದೇ, ಗುರಿ ಒಂದೇ. ಆದರೆ, ದೃಷ್ಟಿ ಸ್ವಲ್ಪ ಮಟ್ಟಿಗೆ ವಿಭಿನ್ನವಾಗಿರಬಹುದು ಪ್ರಿಯಾರಿಟೀಸ್‌ನಲ್ಲಿ ವಿಭಿನ್ನವಾಗಿರಬಹುದು ಗುರಿ ಒಂದೇ ಆಗಿರುವಾಗ ಪರಸ್ಪರ ಸಹಕಾರದ ಆಧಾರದ ಮೇಲೆ, ಗೌರವದ ಆಧಾರದ ಮೇಲೆ ಕೆಲಸ ಮಾಡಬೇಕು. ಕೇಂದ್ರ ಸರ್ಕಾರದ ವಲಯದಲ್ಲಿ ಬರತಕ್ಕ ಜವಾಬ್ದಾರಿ, ಅದಕ್ಕೆ ಬೇಕಾದಂಥ ಸಂಪನ್ಮೂಲಗಳು ಕೇಂದ್ರ ಸರ್ಕಾರಕ್ಕೆ ಸಿಗಬೇಕು. ರಾಜ್ಯ ಸರ್ಕಾರದ ವಲಯದಲ್ಲಿ ಬರತಕ್ಕ ಜವಾಬ್ದಾರಿಗೆ ಅನುಗುಣವಾಗಿ ರಾಜ್ಯ ಸರ್ಕಾರಕ್ಕೆ ಸಂಪನ್ಮೂಗಳು ಸಿಗಬೇಕು. ನಾಳೆ ನಾವು ಸರ್ಕಾರಿಯಾ ಕಮೀಷನ್ ಮುಂದೆ ಮಂಡನೆ ಮಾಡುವಂಥ ವರದಿಯ ನಕಲುಗಳು ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಸಿಕ್ಕಿರಬೇಕು,

ಸಿಗದಿದ್ದರೆ ಕಳುಹಿಸಿಕೊಡುತ್ತೇನೆ, ಇನ್ನು ಮುಂದಾದರೂ ಇಂಥ ಟೀಕೆಗಳು ವಿರೋಧ ಪಕ್ಷದ ವತಿಯಿಂದ ಬರದೇ ಇರಲಿ ಎನ್ನುವ ಒಂದೇ ಉದ್ದೇಶದಿಂದ ೪ ನೇ ತಾರೀಖು ಹಿಂದೂಸ್ಥಾನ ಟೈಂಸ್ ಪತ್ರಿಕೆಯಲ್ಲಿ ಬಂದಿರುವಂಥ ಸಂಪಾದಕೀಯವನ್ನು ಓದುವುದಕ್ಕೆ ತಮ್ಮ ಅಪ್ಪಣೆ ಕೇಳುತ್ತೇನೆ. ಇದನ್ನು ಓದಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

A CONSENSUS POLITY

"After the Janata's splendid victory in Karnataka, Ramakrishna Hegde would have been excused had he adopted a haughty and cocky attitude towards the Centre and the Congress-I; instead he has suggested that it is time for both the ruling party and the Opposition to forgo partisanship. Following his own sensible advice, the Karnataka Chief Minister admits to having discovered that after the recent electoral battles, unavoidably cantankerous and partisan, Prime Minister Rajiv Gandhi was "back on the track again". Hegde is correct in asserting that the country need not be divided between the Congress and non-Congress-I States; and, because the process of development is essentially indivisible, it would be possible to find quicker and better solutions to national problems if all the Chief Ministers were consulted and taken into confidence. It may be added that Andhra Pradesh Chief Minister N.T. Rama Rao has also expressed his party's lack of interest in any gratuitous confrontation with the Centre.

It must be realised that in the last three or four years, our politicians overloaded the political system with their endless bickering. Consensus gave way to confrontation; abuse was substituted for discussion and disagreement; and, guns displaced dialogues. The result was that community was set against community, political institutions were needlessly devalued and debased, the country's territorial integrity was strained; and finally, the overall degeneration was heralded by the polities of assassination. It is about time, therefore, that the leaders of all the political parties understood that they cannot go on spending social energies and resources in non-productive political conflicts without seriously undermining the very attractiveness of a democratic polity. A party, whether it rules in Lucknow or Hyderabad or New Delhi, has been elected to speed up development and to create an egalitarian social order; it has not been voted to power to keep on waging guerrilla warfare on its political opponents.

In other words, what Ramakrishna Hegde is suggesting is that the national polity return to its earlier stance of "live and let live". For his party, the Prime Minister gave sufficient hint, in a recent interview, that his thinking was not very different from Hegde's; he has asserted that his Government is not interested in hunting alleged wrongdoers in previous governments; his government would rather concentrate on implementing honestly and sincerely its policies and priorities Rajiv Gandhi and Ramakrishna Hegde are two of the most decent politicians in this country, and it is an encouraging sign that the two seem equally keen to return to a polity based on consensus rather than confrontation".

ಈ ವಿಚಾರದಲ್ಲಿ ಎದುರುಗಡೆ ಕುಳಿತಿರತಕ್ಕ ಸದಸ್ಯರುಗಳು ಪುನಃ ಕೆದಕುವುದು ಬೇಡ. ರಾಜ್ಯದ ಹಿತದ ವಿರುದ್ಧವಾಗಿ ಯಾರ ಜೊತೆಗೂ ಜಗಳವಾಡುವುದಕ್ಕೆ ಬಯಸುವುದಿಲ್ಲ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಯಾರ ಜೊತೆಗಾದರೂ ಜಗಳವಾಡುವುದಕ್ಕೆ ಸಿದ್ಧನಿದ್ದೇನೆ.

10-30 A.M.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹೆಗಡೆಯವರು ಚುನಾವಣೆಯಲ್ಲಿ ಗೆದ್ದು ಪುನಃ ಸರ್ಕಾರ ರಚಿಸಿದ್ದಾರೆ ಸಂತೋಷ. ನಾನು ಮಾತನಾಡುವಾಗ ಅವರು ಇರಲಿಲ್ಲ. ಹಿಂದೆ ರಾಜ್ಯಭಾರ ಮಾಡಿದಾಗ ಹಲವಾರು ಕೆಲಸಗಳನ್ನು ಮಾಡಿದ್ದೇವೆ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದೇವೆ ನಾವು ಜನತೆಗೆ ವಾಗ್ದಾನ ಮಾಡಿದ್ದೇವೆ ಹಾಗೆಂದು ಹೇಳಿದ್ದಾರೆ. ಇವರು ಏನೇನು ಮಾಡಿದ್ದೇವೆಂದು ಹೇಳಿದ್ದಾರೆ ಅದನ್ನು ಹೇಳುತ್ತೇನೆ.

I will read from' Indian Express' dated 9th Jan' 84. It reads thus.

"A declaration was also made by the Government on Acts of corruption by officials. This was made by the Chief Minister, Sri Ramakrishna Hegde, a little over two months ago. He made it clear that the Government would change the service rules to provide for a minimum punishment of dismissal of an official indulging in corruption. Hardly any move seems to have been made in this direction."

Secondly, I will read another Statement. It reads thus:

"In the midst of these dark clouds, however there is a silver lining. It is the creation of an independent public grievances organisation by the Government for the first time in the country, under the direct control of a Cabinet Minister. The Unit has received as many as 40,000 grievances in the last six months but a large number of them relates to such matters as request for transfers and appointments which do not come under the category of public grievance."

How many genuine grievances were there? Kindly tell us. Then, thirdly, I will read another Statement. It says:

"...... After the Janata Government took over, a White Paper on Bangalore Development Authority was promised on its offences covering allotment of sites in civic, general and stray and civic amenities sites in particular........... To refresh ones memory as many as 2229 sites were distributed from October 1982 to January 15 and they included 30 amenities sites......"

I don't know what you have done but whoever he may be, whether he was appointed by the Congress Government or your Government, mistakes have been done and defaults are there. Have you rectified them?

The press report further says:

"Two issues on which people feel they have been let down are the Professional Tax, the supply of adequate drinking water. The major and first duty of the Government was to appoint a three Member Sub-Committee to suggest how the prices of essential commodities could be brought down. The Committee was set up on January 15, and given three days time to report but the exercise was too difficult to complete for the Committee......"

On January 11, 1984, he gave a Statement. It reads thus:

"The Chief Minister added that on the minimum needs programme itself which was meant exclusively for the weaker sections he would spend Rs. 160 Crores during the current year. Our problem has been that in certain areas, the commitment made by the previous Government is of such a staggering nature that it is difficult even to complete the works. He referred in this connection to the rural housing programme and said in 1981-82, there was a backlog of Rs. 15 Crores and in the subsequent years which was an election year, the district administration was told that sky was the limit and they can go ahead and the commitment was there in the order of Rs. 15 Crores"

Now, I want to know what has happened to all these items?

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟು ಮನೆಗಳನ್ನು ಪ್ರಾರಂಭ ಮಾಡಿದ್ದೇವೆ, ಎಷ್ಟು ಮನೆಗಳನ್ನು ಕಟ್ಟಿ ಮುಗಿಸಿದ್ದೇವೆ ಅದರ ಬಗ್ಗೆ ಬರುವ ಅಧಿವೇಶನದಲ್ಲಿ ಬೇಕಾದರೆ ಒಂದು ಹೇಳಿಕೆ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾನು ಹಲವಾರು ವಿಷಯಗಳ ಬಗ್ಗೆ ಹೇಳಿದ್ದೇನೆ ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಲಿಲ್ಲ. ಅಕ್ಕಿಯ ಬಗ್ಗೆ ಹೇಳಿದ್ದೇನೆ, ನಾನು ಕೇಳತಕ್ಕದ್ದು

ಇಷ್ಟೆ, ಸುಮಾರು ೭೦-೮೦ ಪರ್ಸೆಂಟ್ ಜನ ರಾಗಿ ಮತ್ತು ಜೋಳ ಊಟ ಮಾಡತಕ್ಕವರು ಇದ್ದಾರೆ, ಅವರ ಬಗ್ಗೆ ಏನು ಯೋಚನೆ ಮಾಡಿದ್ದೀರಿ? ಇವೊತ್ತು ಆಂಧ್ರದಲ್ಲಿ ಎನ್.ಟಿ, ರಾಮರಾವ್ ರವರು ಆ ಯೋಜನೆಯನ್ನು ಜಾರಿಗೆ ತಂದಿದ್ದಾರೆಂದು ಇಲ್ಲೂ ತರುವುದಾದರೆ, ಆಂಧ್ರಪ್ರದೇಶದಲ್ಲಿ ಅಕ್ಕಿ ಮೇನ್ ಫುಡ್ ಇರಬಹುದು. ಆದರೆ ನಮ್ಮಲ್ಲಿ ಜನಗಳು ಯಾವ ಪದಾರ್ಥಗಳನ್ನು ಜಾಸ್ತಿ ಉಪಯೋಗಿಸುತ್ತಾರೆಂಬುದನ್ನು ನೋಡಿಕೊಂಡು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಜೋಳ ಮತ್ತು ರಾಗಿ ಅದನ್ನು ಕೂಡ ವಿಸ್ತರಣೆ ಮಾಡುವ ಯೋಜನೆ ಇದೆ. ಅದನ್ನು ವರ್ಕ್‌ಔಟ್ ಮಾಡುತ್ತಿದ್ದೇವೆ. ಅದನ್ನು ಮಾಡುವುದಿಲ್ಲವೆಂದು ಹೇಳುವುದಿಲ್ಲ, ಆದರೆ ಅದರಲ್ಲಿ ಒಂದು ತೊಂದರೆ ಬರುತ್ತದೆ. ನಮ್ಮಲ್ಲಿ ರಾಗಿ ಮತ್ತು ಜೋಳ ಸರ್‌ಪ್ಲಸ್ ಎಷ್ಟಿದೆ ಎಂಬುದನ್ನು ನೋಡಬೇಕಾಗಿದೆ. ಜೋಳವನ್ನು ಮಹಾರಾಷ್ಟ್ರ ಮತ್ತು ನಮ್ಮಲ್ಲಿ ಬೆಳೆಯಲಾಗುತ್ತದೆ. ಮಹಾರಾಷ್ಟ್ರದಲ್ಲಿ ಜೋಳದ ಕೊರತೆಯಿರುವುದರಿಂದ ನಮ್ಮಲ್ಲಿನ ಜೋಳ ಅಲ್ಲಿಗೆ ಹೋಗುತ್ತದೆ. ಅದರ ಬಗ್ಗೆ ವರ್ಕ್‌ಔಟ್ ಮಾಡುತ್ತಿದ್ದೇವೆ ಅದರ ಬಗ್ಗೆ ಕೆಲವು ದಿವಸಗಳಲ್ಲಿ ಹೇಳಿಕೆ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ರಾಜ್ಯಪಾಲರ ಭಾಷಣಕ್ಕೆ ಸಂಪೂರ್ಣವಾಗಿ ಉತ್ತರ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ, ಕೇವಲ ಒಂದೆರಡು ವಿಚಾರಗಳ ಬಗ್ಗೆ ಮಾತ್ರ ಉತ್ತರ ನೀಡಲಾಯಿತು. ಈಗ ತಾಲ್ಲೂಕು ಬೋರ್ಡ್‌ಗಳಿಗೆ ತಾಲ್ಲೂಕು ಬೋರ್ಡ್ ಅಡ್ವೈಸರಿ ಕಮಿಟಿ ಎಂದು ಮಾಡಿ ತಮ್ಮ ಪಕ್ಷದವರನ್ನೇ ನೇಮಿಸತಕ್ಕ ಕೆಲಸ ನಡೆಯುತ್ತಿದೆ, ಅಸಿಸ್ಟೆಂಟ್ ಕಮಿಷನರ್ ಅವರನ್ನು ಛೇರ್ಮನ್ ಆಗಿ ಮಾಡುತ್ತಾರೆಂದು ನಾನು ಕೇಳಿದ್ದೇನೆ. ನಾನು ಅನೇಕ ವಿಷಯಗಳನ್ನು ಹೇಳಿದ್ದೇನೆ. ಷೆಡ್ಯೂಲ್ಡ್ ಕಾಸ್ಟ್ ರಿಸರ್ವೇಷನ್ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಹುದ್ದೆಗಳಿಗೆ ಡೈರೆಕ್ಟಾಗಿ ನೇಮಕ ಮಾಡುತ್ತೇವೆಂದು ಎರಡು ವರ್ಷಗಳ ಹಿಂದೆ ಹೇಳಿದ್ದರು, ಅದನ್ನು ಇನ್ನೂ ಲೋಕಸೇವಾ ಆಯೋಗದ ಮುಖಾಂತರ ಇಂಪ್ಲಿಮೆಂಟ್ ಮಾಡಲಿಲ್ಲ. ನಾವು ಮಾತನಾಡಿದಂತಹ ವಿಷಯಗಳ ಬಗ್ಗೆ ಸಮಂಜಸವಾದಂತಹ ಉತ್ತರ ಬರಲಿಲ್ಲ. ಹೊಸ ಶಾಸನದ ಮೇರೆಗೆ ರಚಿತವಾಗತಕ್ಕ ಪ್ರತಿಯೊಂದು ಮಂಡಲ್ ಪಂಚಾಯಿತ್ ಪ್ರದೇಶದಲ್ಲಿ ಕನಿಷ್ಠ ೨೫೦ ಎಕರೆಯಷ್ಟು ಜಮೀನು ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆ ಸಮಂಜಸವಾದ ಉತ್ತರ ಬರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವಂತಹ ಎಲ್ಲಾ ವಿಚಾರಗಳ ಬಗ್ಗೆ ಇವತ್ತು ವಿವರವಾಗಿ ಉತ್ತರ ಕೊಡಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಮತ್ತೊಂದು ಅವಕಾಶ ಸಂದರ್ಭ ಸಿಗುತ್ತದೆ. ಬೇರೆ ಬೇರೆ ಇಲಾಖೆಗಳ ಡಿಮಾಂಡ್‌ಗಳು ಸಭೆಯ ಮುಂದೆ ಬಂದಾಗ ಅತ್ಯಂತ ವಿವರವಾದ ಪ್ರಶ್ನೆಗಳನ್ನು ಕೇಳಬಹುದು, ಅತ್ಯಂತ ವಿವರವಾದ ಉತ್ತರ ಕೊಡಬಹುದು. ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಸಮಯದ ಅಭಾವವಿರುವುದರಿಂದ ಸಾಧ್ಯವಾಗಿಲ್ಲವೆಂದು ವಿಷಾದಪಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳು ಉತ್ತರ ಕೊಡುವಾಗ ೩೭ ಲಕ್ಷ ಸಂಸಾರಗಳಿಗೆ ಮಾತ್ರ ಅಕ್ಕಿ ಕೊಡುವ ಯೋಜನೆ ಸೀಮಿತವಾಗಿರುತ್ತದೆಂದು ಹೇಳಿದರು. ಐ.ಆರ್.ಡಿ.ಪಿ. ಕಾರ್ಯಕ್ರಮದ ಅನ್ವಯ ಅದನ್ನು ಮಾಡಬೇಕಾಗಿಲ್ಲ. ಆಂಧ್ರಪ್ರದೇಶದಲ್ಲೂ ಕೂಡ ಇದೇ ಪದ್ಧತಿಯನ್ನು ಅನುಸರಿಸಿ ಅಕ್ಕಿಯನ್ನು ಕೊಟ್ಟಾಗ ಅದರಿಂದ ೧೦ ಪರ್ಸೆಂಟ್ ಜನಗಳಿಗೂ ಕವರ್ ಆಗುವುದಿಲ್ಲ. ಈ ರೀತಿ ಅನುಸರಿಸತಕ್ಕ ನೀತಿ ಸರಿಯಲ್ಲವೆಂದು ಗಲಾಟೆ ನಡೆಯುತ್ತಿದೆ. ವಾರ್ಷಿಕ ವರಮಾನ ೬೪೦೦ ರೂಪಾಯಿಗಳಿಗಿಂತ ಯಾರಿಗೆ ಕಡಿಮೆ ಇದೆ ಅವರಿಗೆ ಈ ಯೋಜನೆಯಿಂದ ಅನುಕೂಲ ವಾಗಬೇಕು, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು.

ಈ ರೀತಿ ಕೊಟ್ಟರೆ ೧೦ ಪರ್ಸೆಂಟ್ ಕವರ್ ಆಗುವುದಿಲ್ಲ, ಮತ್ತು ಹೆಚ್ಚು ಉಪಯೋಗವಾಗು ವುದಿಲ್ಲ. ೩೭ ಲಕ್ಷ ಜನರಿಗೆ ಕವರ್ ಆಗುತ್ತದೆ ಎಂದು ಪತ್ರಿಕೆಯಲ್ಲಿ ಬಂದಿದೆ. ೩೭ ಲಕ್ಷ ಕುಟುಂಬವೋ ಅಥವಾ ಸಂಸಾರವೋ ಎನ್ನುವುದು ಗೊತ್ತಾಗಲಿಲ್ಲ. ಎರಡನೆಯದಾಗಿ, ಫಾರೆಸ್ಟ್ ಬೆಳೆಯುವವರು ರೋಟರಿ ಕ್ಲಬ್‌ನವರಾಗಲೀ ಅಥವಾ ಯಾರಾದರಾಗಲೀ ಅವರಿಗೆ ಒಂದು ಸಾವಿರ ರೂಪಾಯಿ ಸಬ್ಸಿಡಿ ಏನಾದರೂ ಕೊಡುವುದು ಉಂಟೇ! ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಜೀವಿಜಯರವರು ಕೂಡ ಇದನ್ನು ಹೇಳಿದರು, ಕೋಲಾರ ಜಿಲ್ಲೆಯಲ್ಲಿ ಗೋಮಾಳ ಇದ್ದರೂ ಇದು ಸಿ ಅಂಡ್ ಡಿ ಲ್ಯಾಂಡ್‌ಗೆ ಬರುವುದಿಲ್ಲ ಕೆರೆಯ ಅಂಗಳದಲ್ಲಿ ಜಾಲಿ ಮತ್ತು ಯುಕ್ಲಿಪ್ಟಸ್ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸುಮಾರು ೧೦–೨೦ ವರ್ಷದಿಂದ ಅಲ್ಲಿನ ನಿವಾಸಿಗಳು ಆ ಜಮೀನನ್ನು ಉಕ್ಕ ಸಾಗುವಳಿ ಮಾಡುತ್ತಿದ್ದಾರೆ. ಅವರಿಗೆ ತೊಂದರೆ ಕೊಡಬಾರದೆಂದು ನಾನು ಅರಣ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಡಾ. ಬಹುಗುಣ ಅಂಥ ರಿಟೈರ್ ಸೆಂಟ್ರಲ್ ಗವರ್ನ್‌ಮೆಂಟ್ ಫಾರೆಸ್ಟ್ ಅಧಿಕಾರಿಯವರು ಹೇಳಿದ್ದಾರೆ. ಯುಕ್ಲಿಪ್ಟಸ್‌ನಿಂದ ಪೂರ್ತಿ ಪ್ರಯೋಜನ ಇಲ್ಲವೆಂದು ತಿಳಿಸುತ್ತಾರೆ, ತಮಿಳುನಾಡು ಸರ್ಕಾರದವರು ಅಗ್ರಿಕಲ್ಚರ್ ಲೇಬರ್‌ನ್ನು ಅವಾಯಿಡ್ ಮಾಡುವುದ ಕ್ಕೋಸ್ಕರ, ಮಧ್ಯಮ ವರ್ಗದವರು ಕೂಲಿಯನ್ನು ಜಾಸ್ತಿ ಕೇಳುತ್ತಾರೆ ಎನ್ನುವ ಒಂದೇ ಒಂದು ಉದ್ದೇಶದಿಂದ ಯುಕ್ಲಿಪ್ಟಸ್‌ನ್ನು ಬೆಳೆಯುತ್ತಿದ್ದಾರೆ. ನನ್ನದು ಸ್ವಂತ ೧೦ ಎಕರೆ ಜಮೀನಿಗೆ ಕೂಡ ಇದನ್ನು ಹಾಕಿದ್ದೆ. ನಮ್ಮ ಸೋಷಿಯಲ್ ಫಾರೆಸ್ಟ್‌ನವರು ಗೋಮಾಳವನ್ನು ಕೆರೆಯ ಅಂಗಳದಲ್ಲಿ ಸೇರಿಸಿಕೊಳ್ಳಬಾರದು ಬೇಕಾದಷ್ಟು ಜಮೀನು ಫಾರೆಸ್ಟ್ ಇಲಾಖೆಯದು ಇರುವಾಗ ಈ ಅಲ್ಪಸ್ವಲ್ಪ ಜಮೀನನ್ನು ಫಾರೆಸ್ಟ್ ಇಲಾಖೆಗೆ ಸೇರಿಸಿಕೊಳ್ಳಬಾರದೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಯೋಜನೆ ಎಷ್ಟು ಕುಟುಂಬಗಳಿಗೆ ಅನ್ವಯವಾಗುತ್ತದೆ. ಎನ್ನುವುದನ್ನು ಖಚಿತವಾಗಿ ಹೇಳಲಾರೆ. ಇದನ್ನು ನಾವು ಐಡೆಂಟಿಫೈ ಮಾಡಬೇಕು. ಅದಕ್ಕೆ ಸಮಯ ಬೇಕಾಗುತ್ತದೆ. ಅಂದಾಜು ೨೫ ಲಕ್ಷ ೩೦ ಲಕ್ಷ ಎಂದು ಈಗ ಖಚಿತವಾಗಿ ಹೇಳಲಾರೆ, ಎರಡನೆಯದಾಗಿ ಗೋಮಾಳದಲ್ಲಿ ಮತ್ತು ಕೆರೆಯ ಅಂಗಳದಲ್ಲಿ ಜನರು ಏನಾದರೂ ಅತಿಕ್ರಮಣ ಮಾಡಿಕೊಂಡು ಸಾಗುವಳಿ ಮಾಡಿದ್ದರೆ, ಅದು ಅರಣ್ಯ ಖಾತೆಯ ಜಮೀನು ಆಗಿದ್ದರೆ ಅದು ಬೇರೆ. ಇವತ್ತಿನವರೆಗೆ ನಾವು ಒತ್ತಾಯದಿಂದ ಅವರನ್ನು ಬಿಡಿಸಿ ಯುಕ್ಲಿಪ್ಟಸ್ ಪ್ಲಾಂಟೇಷನ್ ಮಾಡುವಂತಹ ಯಾವುದೇ ಉದಾಹರಣೆ ಇಲ್ಲ.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರು ಹೇಳಿದ ಹಾಗೆ ಎಲ್ಲಾ ಸದಸ್ಯರಿಗೂ ಎಲ್ಲಾ ಪ್ರಶ್ನೆಗೂ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನನ್ನ ಭಾಷಣದಲ್ಲಿ ಹೇಳಿದಂತೆ, ಎಂಟು ತಾಲ್ಲೂಕುಗಳಿಗೆ ಅಪ್ಪರ್ ತುಂಗಾ ಒಡ್ಡಿನ ಯೋಜನೆಯಿಂದ ನೀರಾವರಿ ಆಗತಕ್ಕ ವಿಚಾರವನ್ನು ಹೇಳಿದ್ದೆ. ಇದರಿಂದ ಎರಡು ತಾಲ್ಲೂಕುಗಳಿಗೆ ನೀರಾವರಿಯ ಸೌಲಭ್ಯ ಒದಗಿ, ಅಲ್ಲಿನ ಕ್ಷಾಮ ಕೂಡ ಪರಿಹಾರವಾಗುತ್ತದೆ. ಧಾರವಾಡದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಿದರೆ ಒಕ್ಕಲಿಗರ ಮಕ್ಕಳಿಗೆ ಆ ವಿದ್ಯಾಭ್ಯಾಸದಿಂದ ಬಹಳ ಅನುಕೂಲವಾಗುತ್ತದೆ. ಮತ್ತು ರಾಣೆಬೆನ್ನೂರಿನಲ್ಲಿ ಲಾ ಕಾಲೇಜಿನ ಅವಶ್ಯಕತೆ ಇದೆ ಇದರ ಬಗ್ಗೆಯೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಅಪ್ಪರ್‌ತುಂಗಾ ವಿಚಾರದಲ್ಲಿ ನೀರಾವರಿ ಖಾತೆಯ ಮಂತ್ರಿಗಳು ಅದರ ಬಗ್ಗೆ ಡಿಮ್ಯಾಂಡ್ ಬಂದಾಗ ಖಚಿತವಾದ ನಿರ್ಣಯವನ್ನು ಕೊಡುತ್ತಾರೆ. ಏಕೆಂದರೆ ೭ನೇ ಪಂಚವಾರ್ಷಿಕ ಯೋಜನೆಯ ಗಾತ್ರ ನಮಗೆ ಇನ್ನು ಗೊತ್ತಿಲ್ಲ. ಅದರ ಬಗ್ಗೆ ಚರ್ಚೆಗೆ ಈ ತಿಂಗಳ ಕೊನೆಗೆ ದಿಲ್ಲಿಗೆ ಹೋಗಬೇಕಾಗಿದೆ. ರಾಣೆಬೆನ್ನೂರು ಲಾ ಕಾಲೇಜ್‌ಗೆ ಗ್ರ್ಯಾಂಟ್ ಕೊಡಲು ಐದು ವರ್ಷ ಮಾಡಿದ್ದಾರೆ, ಅದು ನಿಮಗೆ ಬೇಕೇ ?

ಶ್ರೀ ಎಸ್. ಬಂಗಾರಪ್ಪ.—ಎಲ್ಲರಿಗೂ ಯಾವ ರೀತಿ ಇದೆ, ಅದೇ ರೀತಿ ಅವರಿಗೂ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ಅವರಿಗೂ ಗೊತ್ತಿದೆಯೋ ಇಲ್ಲವೋ ಎಂದು ಕೇಳಿದೆ.

ಶ್ರೀ ಕೆ. ಬಿ. ಕೋಳಿವಾಡ್.—ನಮಗೂ ಕೂಡ ಗೊತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಆಯಿತು ಕೊಡೋಣ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದರು, ಉತ್ತರ ಕನ್ನಡ ಜಿಲ್ಲೆಯಲ್ಲಿ ನೀಲಗಿರಿ ಬೆಳೆಯುವುದಕ್ಕೆ ವಿರೋಧಿಸಿದ್ದೇವೆ ಎಂದು ಅವರು ಯಾವಾಗ ವಿರೋಧ ಮಾಡಿದ್ದಾರೆ ಎನ್ನುವುದು ಗೊತ್ತಾಗಲಿಲ್ಲ. ಅವರು ಹೇಳಿದಹಾಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಹಜವಾಗಿ ನೀಲಗಿರಿ ಹಾಕುವಂತಹ ಅವಶ್ಯಕತೆ ಇರಲಿಲ್ಲ. ತಾವು ಎರಡು ವರ್ಷದಲ್ಲಿ ಅಧಿಕಾರಕ್ಕೆ ಬಂದಮೇಲೆ ಉತ್ತರ ಕನ್ನಡ ಜಿಲ್ಲೆಯಲ್ಲಿ ನೀಲಗಿರಿ ಮರಗಳನ್ನು ಬೆಳೆಯುವುದಕ್ಕೆ ಅವಕಾಶವಿಲ್ಲವೆಂದು ಏನಾದರೂ ಆದೇಶ ಹೊರಡಿಸಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಉತ್ತರ ಕನ್ನಡ ಜಿಲ್ಲೆ ಅಲ್ಲ, ದಕ್ಷಿಣ ಕನ್ನಡ ಜಿಲ್ಲೆ ಅಲ್ಲ, ಎಲ್ಲಿ ೬೦ ಇಂಚಿಗಿಂತ ಹೆಚ್ಚು ಮಳೆ ಬೀಳುತ್ತಿತ್ತು, ಅಲ್ಲಿ ನೀಲಗಿರಿ ಮರಗಳನ್ನು ನೆಡಬಾರದು ಎಂದು ಸರ್ಕಾರದ ನೀತಿ ಇದೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮದು ಒಂದು ವಿಚಾರ ಇದೆ. ಆಂಧ್ರಕ್ಕೆ ಕುಡಿಯುವ ನೀರನ್ನು ತುಂಗಭದ್ರಾ ಜಲಾಶಯದಿಂದ ಕೊಡುತ್ತಿದ್ದಾರೆ. ನಮ್ಮ ಬಳ್ಳಾರಿಯಲ್ಲೂ ಕೂಡ ಒಂದು ತಿಂಗಳಿಂದ ನೀರು ಇಲ್ಲ. ರಿಸರ್‌ವಾಯರ್‌ನಲ್ಲೂ ಕೂಡ ನೀರು ಇಲ್ಲ. ನಮಗೆ ಕುಡಿಯುವ ನೀರನ್ನು ಜಲಾಶಯದಿಂದ ಒದಗಿಸಿಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅವಶ್ಯವಾಗಿ ಕೊಡುತ್ತೇವೆ. ಹೋದ ವರ್ಷವೂ ಕೂಡ ರಾಮಪ್ಪ ನವರು ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಅದರಂತೆ ನೀರನ್ನು ಕೊಟ್ಟಿದ್ದೇವೆ, ಈ ವರ್ಷವೂ ಕೂಡ ನೀರಿನ ಬವಣೆಯನ್ನು ಕಡಿಮೆ ಮಾಡುತ್ತೇವೆ.

ಶ್ರೀ ಎಂ. ರಾಮಪ್ಪ.—ಪೋಸ್ಟ್‌ಗ್ರಾಜುಯೇಟ್ ಸೆಂಟರ್ ಬಗ್ಗೆ ಏನೂ ರಿಪ್ಲೈ ಬರಲಿಲ್ಲ. ಮಾನ್ಯ ವಿದ್ಯಾಮಂತ್ರಿಗಳು ಉತ್ತರ ಕೊಡುತ್ತಾರೇನೋ. ಆದರೆ ಇನ್ನೊಂದು ವಿಚಾರ, ಬಳ್ಳಾರಿಯಲ್ಲಿ ಮತ್ತು ಎಲ್ಲಾ ಮುನಿಸಿಪಾಲಿಟಿಗಳ ಬಗ್ಗೆ ನಮ್ಮ ಮುಖ್ಯಮಂತ್ರಿಯವರ ನಿಲುವು ಏನು ? ನಮ್ಮಲ್ಲಿ ರಸ್ತೆಗಳು ಇಲ್ಲ, ಹೆಚ್ಚು ಕಡಿಮೆ ರಸ್ತೆಗಳೇ ಇಲ್ಲವೆಂದು ಹೇಳಬಹುದು. ಕೆಲವರು ರೋಡ್ ಕಂಟ್ರಾಕ್ಟ ರನ್ನು ಜನತಾ ಪಾರ್ಟಿಯವರೇ ತೆಗೆದುಕೊಳ್ಳಬೇಕು. ಜನತಾ ಪಾರ್ಟಿಯವರೇ ಕೆಲಸ ಮಾಡಿಸಬೇಕೆಂದು ಏನಾದರೂ ತಾವು ಆದೇಶ ಕೊಟ್ಟಿದ್ದಿರೋ ಎನ್ನುವುದನ್ನು ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಪುರಸಭೆಗಳ ಆರ್ಥಿಕ ಸ್ಥಿತಿಯ ಬಗ್ಗೆ ಒಂದು ಕಮಿಟಿಯನ್ನು ನೇಮಿಸಿದ್ದೇವೆ. ಅದರ ತಾತ್ಕಾಲಿಕ ವರದಿ ಬಂದಿದೆ. ಪೂರ್ಣ ವರದಿ ಬಂದಮೇಲೆ ಸರ್ಕಾರ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತದೆ.

ಶ್ರೀ ಪಿ. ರತ್ನಾಕರ್.—ತೀರ್ಥಹಳ್ಳಿಯಲ್ಲಿ ಸುಮಾರು ೧೫ ಲಕ್ಷ ರೂಪಾಯಿಗಳ ಕುಡಿಯುವ ನೀರಿನ ಯೋಜನೆಯೊಂದನ್ನು ಕಳೆದ ವರ್ಷವೇ ಸರ್ಕಾರದವರು ಮಾಡುತ್ತೇವೆಂದು ಹೇಳಿದ್ದರು. ಆದ್ದರಿಂದ ಮಾನ್ಯ ಮಂತ್ರಿಗಳು ಈ ಸಲದ ಬಜೆಟ್‌ನಲ್ಲಿ ಈ ಯೋಜನೆಯನ್ನು ಸೇರಿಸಿ ತೀರ್ಥಹಳ್ಳಿಗೆ ಕುಡಿಯುವ ನೀರಿನ ಯೋಜನೆಯನ್ನು ಕೂಡಲೇ ಮಂಜೂರು ಮಾಡಬೇಕು. ಜೊತೆಗೆ ವಾರಾಹಿ ಯೋಜನೆಯಲ್ಲಿ ಬಹಳಷ್ಟು ಜಮೀನು ಮುಳುಗಡೆಯಾಗಿರುವುದರಿಂದ ಮುಳುಗಡೆ ಹಂತದಲ್ಲಿರುವ ರೈತರಿಗೆ ಪರಿಹಾರ ಸಿಕ್ಕುತ್ತಿಲ್ಲ. ಮೊನ್ನೆ ಆ ಮುಳುಗಡೆ ಪ್ರದೇಶದಲ್ಲಿರತಕ್ಕಂತಹ ರೈತರಿಗೆ ಕೆಂಪು ನೋಟೀಸ್‌ನ್ನು ಕೊಟ್ಟಿದ್ದಾರೆ, ಅಂತಹ ರೈತರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ಗಮನ ಹರಿಸಿ ಸೂಕ್ತ ನೆರವನ್ನು ಕೊಡುವ ಬಗ್ಗೆ ನಿಗಾ ವಹಿಸಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—೨ ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆ ಎಂದು ಏನು ಹೇಳಿದ್ದಾರೆ. ಆ ಬಗ್ಗೆ ಸಂತೋಷ ಪಡುತ್ತೇನೆ. ಈಗಾಗಲೇ ಒಂದು ಕೆ.ಜಿ. ಅಕ್ಕಿಗೆ ೧-೯೦ ರೂಪಾಯಿಗೆ, ೨-೦೦ ಹಾಗೂ ೨-೩೦ಕ್ಕೆ ರೇಷನ್ ಷಾಪ್ ಮೂಲಕ ಕೊಡುತ್ತಿದ್ದಾರೆ. ಆದರೆ ಒಳ್ಳೆಯ ಅಕ್ಕಿ ರೇಷನ್ ಕಾರ್ಡ್ ಮೂಲಕ ಸಿಕ್ಕುತ್ತಿಲ್ಲ. ಅಲ್ಲಿ ಅವ್ಯವಹಾರ ನಡೆಯುತ್ತಿದೆ. ಸರ್ಕಾರದವರು ಕೋಟ್ಯಾಂತರ ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟರೂ ಸಹ ಒಳ್ಳೆಯ ಅಕ್ಕಿ ಗ್ರಾಹಕರಿಗೆ ಸಿಕ್ಕುತ್ತಿಲ್ಲ. ಮತ್ತೆ ಸರ್ಕಾರ ಪ್ರತಿಯೊಂದು ಕುಟುಂಬದಲ್ಲೂ ಒಬ್ಬರಿಗೆ ಉದ್ಯೋಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದರಿಂದ ಯುವರು ಸರ್ಕಾರವನ್ನು ಎದುರು ನೋಡುತ್ತಿದ್ದಾರೆ. ಈ ಕಾರ್ಯಕ್ರಮದ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಏನು ಷಹರದಲ್ಲಿ ಏನು ರೇಷನಿಂಗ್ ಪದ್ಧತಿ ಇದೆ ಅದರಲ್ಲಿ ಒಂದು ಕೆ.ಜಿ. ಅಕ್ಕಿಗೆ ೧-೯೦, ೨-೨೦ ಹಾಗೂ ೨-೧೦ ರೂಪಾಯಿಗಳಿಗೆ ಸಿಗುವಂತಹ ವ್ಯವಸ್ಥೆಯನ್ನು ಹೋದ ವರ್ಷ ಎಂದರೆ ೧೯೮೩ನೇ ಇಸವಿಯಲ್ಲಿ ಜಾರಿಗೆ ತಂದಿದ್ದು. ಅದು ಈಗ ಜಾರಿಯಲ್ಲಿದೆ.

ಮಾನ್ಯ ಸದಸ್ಯರು ಆದರಿಂದ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆ ಎಂಬುದಾಗಿ ಹೇಳಿದ್ದಾರೆ. ಅದರ ಬಗ್ಗೆ ವಿವರಗಳನ್ನು ಮಾನ್ಯ ಆಹಾರ ಖಾತೆಯ ಮಂತ್ರಿಗಳಿಗೆ ತಿಳಿಸಿದರೆ ಅವರು ಅದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಮತ್ತೆ ಒಂದು ಕುಟುಂಬಕ್ಕೆ ಒಂದು ಉದ್ಯೋಗದ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಇದರಲ್ಲಿ ಎರಡು ಭಾಗಗಳನ್ನಾಗಿ ನಾವು ಮಾಡಬೇಕಾಗುತ್ತದೆ. ಒಂದು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡತಕ್ಕಂತಹದ್ದು. ಮತ್ತೊಂದು ಶಹರದಲ್ಲಿರತಕ್ಕ ಸುಶಿಕ್ಷಿತ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡತಕ್ಕಂತಹದ್ದು. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ನಿರುದ್ಯೋಗಿಗಳ ಬಗ್ಗೆ ಉದ್ಯೋಗ ಭರವಸೆ ಯೋಜನೆಯನ್ನು ಕಳೆದ ವರ್ಷವೇ ಪ್ರಾರಂಭ ಮಾಡಿದ್ದೇವೆ. ಈಗಾಗಲೇ ತುಸು ಹೆಚ್ಚು ಕಡಿಮೆ ಅರ್ಧಕ್ಕಿಂತ ಹೆಚ್ಚು ನಮ್ಮ ರಾಜ್ಯದಲ್ಲಿ ಅದು ಜಾರಿಯಲ್ಲಿ ಬಂದಿರಬೇಕು. ನಾನು ಅದಕ್ಕಾಗಿಯೇ ತುಸು ಹೆಚ್ಚು ಕಡಿಮೆ ಎಂದು ಹೇಳಿದ್ದೇನೆ. ಎಷ್ಟು ತಾಲ್ಲೂಕುಗಳು ಎಂಬುದಾಗಿ ನಿರ್ದಿಷ್ಟವಾಗಿ ಹೇಳುವುದಕ್ಕೆ ನನಗೆ ನೆನಪು ಇಲ್ಲ. ಇದನ್ನು ಹಂತ ಹಂತವಾಗಿ ವಿಸ್ತರ ಮಾಡಿಕೊಂಡು ಹೋಗುತ್ತಿದ್ದೇವೆ. ಆದ್ದರಿಂದ ಎಲ್ಲಿ ಈ ಯೋಜನೆಯ ಅನುಸಾರವಾಗಿ ಯಾರಿಗೆ ಉದ್ಯೋಗ ಬೇಕೋ ಅವರು ಪಂಚಾಯಿತಿ ಆಫೀಸಿನಲ್ಲಿ ನೋಂದಣಿ ಮಾಡಿದರೆ, ೧೫ ದಿವಸಗಳೊಳಗಾಗಿ ಅವರಿಗೆ ಉದ್ಯೋಗವನ್ನು ಕೊಡತಕ್ಕಂತಹ ಜವಾಬ್ದಾರಿಯನ್ನು ಹೊತ್ತಿದ್ದೇವೆ. ಈಗ ಶಹರದಲ್ಲಿರತಕ್ಕ ಸುಶಿಕ್ಷಿತ ನಿರುದ್ಯೋಗಿಗಳಿಗೆ ಬೇರೆ ರೀತಿಯ ಸ್ಕೀಂನ್ನು ತಯಾರು ಮಾಡುತ್ತಿದ್ದೇವೆ. ಎಂದರೆ ಎಲ್ಲರಿಗೂ ಸರ್ಕಾರಿ ನೌಕರಿಯನ್ನು ಕೊಡತಕ್ಕಂತಹದ್ದು ನಮ್ಮ ಉದ್ದೇಶ ಅಲ್ಲ. ಅದು ಸಾಧ್ಯವೂ ಅಲ್ಲ. ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಮತ್ತು ಸ್ವಯಂ ಉದ್ಯೋಗ ಕೊಡತಕ್ಕಂತಹ ಯೋಜನೆ ಏನಿದೆ, ಅದನ್ನು ವಿಸ್ತಾರ ಮಾಡತಕ್ಕಂತಹದ್ದು. ಅದೇ ರೀತಿ ಇನ್ನೂ ಅನೇಕ ವಿಚಾರಗಳು ನಮ್ಮ ಯೋಜನೆಯಲ್ಲಿವೆ. ಅದರ ಬಗ್ಗೆ ಒಂದು ಸ್ಕೀಂ ಸಿದ್ಧವಾಗುತ್ತಿದೆ. ಇಷ್ಟನ್ನು ಮಾತ್ರ ನಾನು ಹೇಳುವುದಕ್ಕೆ ಬಯಸುತ್ತೇನೆ.

SRI MOHAMMED LAIKUDDI .—Mr. Speaker Sir, in Bidar district there is only one irrigation project i.e., Karanja Project. It was promised that two canals would be completed and an area of 32,000 hectares would be brought under irrigation. But, neither the work on dam is completed nor the canals on either side of the dam are completed. It was promised by the Government that an area of 32,738 hectares in Bhalki taluka and an additional area of 4,470 hectares in Bidar taluka will be brought under irrigation in 1983 itself. But, though we are now in 1985, the work of Karanja Project itself has not been completed. Another point which I would like to mention is sir, the total area which has been acquired under Karanja Project is 13,902 hectares. The compensation paid to the farmers is between Rs. 2,000 to Rs. 3,000. Sir, in other parts of the State, the Government has awarded compensation between Rs. 9,000 to 12,000. In Bidar the Government is taking the land at the rate of Rs. 15,000 per acre in an Industrial area. Why the farmers should be denied the due compensation for their fertile land acquired by the Government under the Karanja Project? Further I would like to bring to the notice of the Government that there is an acute scarcity of drinking water in Bidar City. At present, only 3-5 gallons of water from Manjara River which has also gone dry. During April and May, there will be no water available to city. The Government has taken up the work of a reservior 6 months

back itself but it has not been completed. The Bidar city is facing acute shortage of drinking water. I would request the Government to complete the same at the earliest which would immediately provide drinking water to the Bidar City.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಮೂರು ಪ್ರಶ್ನೆಗಳನ್ನು ಕೇಳಿದ್ದಾರೆ. ಮಾನ್ಯ ಸದಸ್ಯರಿಗೆ ಕನ್ನಡ ಅರ್ಥವಾಗುತ್ತದೆಯೋ ?

ಶ್ರೀ ಎಂ.ರಾಮಪ್ಪ.—ಇದೇ ಭಾಷೆಯಲ್ಲಿ ಮಾತನಾಡಬೇಕೆಂದು ಸದಸ್ಯರನ್ನು ಒತ್ತಾಯ ಮಾಡುವುದು ಸರಿಯಲ್ಲ. ನಮ್ಮ ಭಾಷೆಯಲ್ಲಿ ಹೇಳುವುದಕ್ಕೆ ಬಯಸಿದರೆ, ಅದಕ್ಕೆ ಇಲ್ಲಿ ಅಧಿಕಾರ ಇಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಜಗಳ ಮಾಡುವಂತಹ ವಿಷಯ ಏನೂ ಇಲ್ಲ. ಕನ್ನಡದಲ್ಲಿ ಮಾತನಾಡಬೇಕೆಂದು ಹೇಳಿದ್ದಾರೆ ಅಷ್ಟೆ,

ಶ್ರೀ ಎಂ. ರಾಮಪ್ಪ —ಮೈನಾರಿಟೀಸ್‌ಗೆ ಅವರ ಭಾಷೆಯಲ್ಲಿ ಹೇಳುವಂತಹ ಹಕ್ಕು ಇದೆ. ಅವರ ರೈಟ್ಸ್ ಇರಬೇಕೆಂಬ ಹೇಳಿಕೆಯನ್ನು ತಾವು ಕೊಟ್ಟಿದ್ದನ್ನೂ ನಾನು ನೋಡಿದ್ದೇನೆ. ಆದರೆ ಇಲ್ಲಿ ಒಬ್ಬ ಸದಸ್ಯರು ಮಾತನಾಡುವಾಗ ಇಂತಹ ಭಾಷೆಯಲ್ಲೇ ಮಾತನಾಡಬೇಕು ಎಂದರೆ ಹೇಗೆ? ಅದನ್ನು ನಿಮ್ಮ ಎದುರಿಗೆ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ನಿಮಗೆ ರಕ್ಷಣೆಯನ್ನು ಕೊಡುವುದಕ್ಕೆ ನಾನು ಇದ್ದೇನೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳಿದಂತಹ ಪ್ರಶ್ನೆಯನ್ನು ಮಾನ್ಯ ಸದಸ್ಯರು ತಿಳಿದುಕೊಂಡಿದ್ದರೆ, ಬಹುಶಃ ಆ ಮಾತನ್ನು ಅವರು ಹೇಳತಕ್ಕಂತಹ ಅಗತ್ಯ ಇರಲಿಲ್ಲ. ಮಾನ್ಯ ಸದಸ್ಯರಿಗೆ ಕನ್ನಡ ಮಾತನಾಡಿದರೆ ಅರ್ಥವಾಗುತ್ತದೆಯೋ ಎಂದು ನಾನು ಕೇಳಿದುದ್ದು. ಒಂದು ವೇಳೆ ಅದು ಅವರಿಗೆ ಅರ್ಥವಾಗದಿದ್ದರೆ ಇಂಗ್ಲೀಷ್‌ನಲ್ಲೇ ಉತ್ತರವನ್ನು ಕೊಡಬೇಕೆಂಬ ಉದ್ದೇಶದಿಂದ ಹೇಳಿದ ಮಾತು ಅಷ್ಟೆ.

ಶ್ರೀ ಎಂ. ರಾಮಪ್ಪ.—ನಿಮ್ಮನ್ನು ಕುರಿತು ಹೇಳಿದ್ದಲ್ಲ. ಶ್ರೀಮಾನ್ ನಾರಾಯಣಕುಮಾರ್ ರವರು ಹೇಳಿದ್ದ ಮಾತಿಗೆ ಆ ರೀತಿ ಹೇಳಬೇಕಾಯಿತು ಅಷ್ಟೆ.

ಶ್ರೀ ಪಿ. ರತ್ನಾಕರ್.—ಅವರು ಕೆಲವೇ ಸದಸ್ಯರನ್ನು ಸೀಮಿತವಾಗಿಟ್ಟುಕೊಂಡು ಚಾರ್ಜ್ ಮಾಡುತ್ತಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.—ನಾವು ಹೇಳುತ್ತಲೇ ಇದ್ದರೂ, ನೀವು ಮಾತ್ರ ಕನ್ನಡ ಮಾತ್ರ ಕಲಿಯಬೇಕು.

೧೧-೦೦. ಎ. ಎಂ.

SRI R. S. MANE.—Mr. Speaker, I object to this. There are three M. L. As. who are from M. E. S. and who do not know Kannada. I know Eniglish, but the other Members can speak only in Marathi. I therefore request you to kindly make arrangements for recording their speeches.

ಶ್ರೀ ರಾಮಕೃಷ್ಣ ಹೆಗಡೆ —ಅಧ್ಯಕ್ಷರೇ, ಮೊದಲನೆಯದು, ಕಾರಂಜ ಪ್ರಾಜೆಕ್ಟ್, ಇದು ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಈಗ ಎರಡು ವರ್ಷಗಳಿಂದ ಹೆಚ್ಚು ಹಣ ಕೊಟ್ಟು ಅದನ್ನು ಚುರುಕು ಮಾಡಿದ್ದೇವೆ. ಒಟ್ಟು ೫ ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದೇವೆ. ಈ ವರ್ಷ ಏನಾಯಿತೆಂದರೆ, ಆಕಸ್ಮಾತ್ತಾಗಿ ಅದರ ಒಂದು ಭಾಗ ಒಡೆದು ಹೋಗಿದೆ. ಅದರ ರಿಪೇರಿ ಮಾಡಬೇಕು. ಇನ್ನು ಎರಡನೆಯ ಪ್ರಶ್ನೆ ಏನೆಂದರೆ, ಅಲ್ಲಿನ ರೈತರಿಗೆ ಕಾಂಪನ್‌ಸೇಷನ್ ಕಡಿಮೆ ಕೊಟ್ಟಿದ್ದೀರಿ ಬೇರೆ ಕಡೆ ಹೆಚ್ಚು ಕೊಟ್ಟಿದ್ದೀರಿ ಎಂದು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ೨-೩ ಸಾವಿರ ಕೊಟ್ಟಿದ್ದೀರೆಂದು

ನನ್ನ ಸ್ನೇಹಿತರು ಹೇಳಿದರು. ನಿನ್ನೆ ನಾನು ಸಂಚರಿಸಿದ ಭಾಗಕ್ಕೆ ಕಾರಂಜ ಪ್ರಾಜೆಕ್ಟ್ ಹತ್ತಿರ, ಅಲ್ಲಿನ ರೈತರು ನನ್ನನ್ನು ಭೇಟಿ ಮಾಡಿ ನಮಗೆ ಕೊಡುವಂತಹ ಪರಿಹಾರ ಸಾಲದು, ಅದನ್ನು ಪರಿಶೀಲನೆ ಮಾಡಬೇಕೆಂದು ತಿಳಿಸಿದರು. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ ಬೇರೆಯವರಿಗೆ ಹೆಚ್ಚು ಕೊಟ್ಟು, ಅವರಿಗೆ ಕಡಿಮೆ ಕೊಟ್ಟಿದ್ದರೆ ಈ ಅನ್ಯಾಯವನ್ನು ದುರಸ್ತು ಮಾಡುತ್ತೇನೆಂದು ತಿಳಿಸಿದೆ. ಮೂರನೆಯದಾಗಿ ಮಂಚಾಗ್ರ ಕುಡಿಯುವ ನೀರಿನ ವಿಚಾರದಲ್ಲಿ ಇಷ್ಟೆ ಹೇಳಲಿಕ್ಕೆ ಬಯಸುತ್ತೇನೆ. ಅದರ ಹೆಚ್ಚಿಗೆ ಡೀಟೈಲ್ಸ್ ನನ್ನ ಹತ್ತಿರ ಇಲ್ಲ. ಬೀದರ್ ಷಹರಿಗೆ ಕುಡಿಯುವ ನೀರಿನ ತೊಂದರೆ ಆಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆಂದು ತಿಳಿಸುತ್ತೇನೆ.

ಶ್ರೀ ಮದನಗೋಪಾಲ ನಾಯಕ್.—ಸನ್ಮಾನ್ಯ ಅಧ್ಯಕ್ಷರೆ, ಪ್ರತಿ ತಾಲ್ಲೂಕಿನಲ್ಲಿ ಇರತಕ್ಕಂತಹ ಬಿ. ಡಿ. ಓ. ಆಫೀಸರ್ ಆಗಲಿ, ತಹಸೀಲ್ದಾರ್ ಆಗಲಿ, ಪಿ. ಡಬ್ಲ್ಯು. ಡಿ. ಇಂಜಿನಿಯರ್ ಆಗಲಿ, ವಾಹನ ಸೌಕರ್ಯ ಇದೆ ವಿದ್ಯಾ ರಂಗದಲ್ಲಿ ಅನಕ್ಷರಸ್ಥರನ್ನಾಗಿ ಮಾಡುವ ಮತ್ತು ಪ್ರೈಮರಿ ಎಜುಕೇಷನ್ ಬಗ್ಗೆ ಸರ್ಕಾರ ಗಮನ ಕೊಡುತ್ತಿಲ್ಲ. ಎ. ಇ. ಓ. ಗಳಿಗೆ ಇವತ್ತಿನವರೆಗೂ ವಾಹನ ಸೌಕರ್ಯ ಇಲ್ಲ. ಅವರು ಸ್ಕೂಲ್‌ಗಳನ್ನು ವಿಜಿಟ್ ಮಾಡಲು ಬಸ್ಸಿನಲ್ಲಿ ಹೋಗಬೇಕಾದರೆ, ದಿನವೊಂದಕ್ಕೆ ೧ ಅಥವಾ ೨ ಸ್ಕೂಲ್‌ಗಳನ್ನು ವಿಜಿಟ್ ಮಾಡಬಹುದು. ದೂರದ ಹಳ್ಳಿಗಳಲ್ಲಿ ಇರತಕ್ಕಂತಹ ಶಾಲೆಗಳಲ್ಲಿ ಶಿಕ್ಷಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎ. ಇ. ಓ. ಗಳಿಗೆ ವಾಹನ ಇಲ್ಲದೆ ಬಹಳ ತೊಂದರೆಯಾಗಿದೆ. ಈ ಸೌಕರ್ಯವನ್ನು ಸರ್ಕಾರ ಮಾಡಿಕೊಡುತ್ತದೆಯೋ ಎಂದು ನಾನು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಲ್ಲಿ ಕೆಲವರು ಇದೇ ಮನೆಯಲ್ಲಿ ದೂರನ್ನು ಕೊಟ್ಟರು. ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. ಇದರಿಂದ ವಾಹನಗಳ ಮೇಲೆ ಖರ್ಚು ಹೆಚ್ಚಾಗುತ್ತಿದೆ. ಆದ್ದರಿಂದ ಯೋಜನೆಗಳ ಮೇಲೆ ಖರ್ಚು ಕಡಿಮೆಯಾಗುತ್ತಿದೆಯೆಂದು ತಿಳಿಸಿದರು. ನಿನ್ನೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಹಾ. ಮಾ. ನಾಯಕ್, ರವರು ಒಂದು ಮಾತನ್ನು ಹೇಳಿದರು. ನನಗೆ ಆಶ್ಚರ್ಯವಾಯಿತು. ಅದು ನಿಜವಾದರೆ ತಕ್ಷಣ ಎನ್‌ಕ್ವಯರಿ ಮಾಡಿಸುತ್ತೇನೆಂದು ಹೇಳಿದ್ದೇನೆ ಲೈಬ್ರರಿಯಲ್ಲಿ ಪುಸ್ತಕ ಕೊಳ್ಳಲಿಕೆ ಸರ್ಕಾರದವರು ಹಣವನ್ನು ಒದಗಿಸಿದರೆ, ಆ ಡಿಪಾರ್ಟ್‌ಮೆಂಟ್‌ನವರು ಪುಸ್ತಕದ ಬದಲಾಗಿ ಜೀಪುಗಳನ್ನು ಕೊಂಡಿದ್ದಾರೆಂದು ಹೇಳಿದರು. ಇದು ನಿಜವೇ ಆದರೆ ನಾನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಣ ಲ್ಯಾಪ್ಸ್ ಆಗುತ್ತದೆ ಎಂದು ಖರ್ಚು ಮಾಡಿದರೋ ಏನೋ ಗೊತ್ತಿಲ್ಲ. ಯಾವುದಕ್ಕೆ ಖರ್ಚು ಮಾಡಬೇಕೋ ಅದಕ್ಕೇ ಖರ್ಚು ಮಾಡಬೇಕು. ಹಿಂದೆ ೧೫–೨೦ ವರ್ಷಗಳಿಂದ ಜೀಪು ಎಲ್ಲಿತ್ತು ? ಎಲ್ಲರೂ ಬಸ್ಸಿನಲ್ಲಿ, ಸೈಕಲ್ ಮೇಲೆ ಹೋಗುತ್ತಿದ್ದರು. ಎ. ಇ. ಓ. ಗಳಿಗೆ ಜೀಪು ಕೊಟ್ಟರೆ, ಶಿರಸ್ತೇದಾರರಿಗೂ, ಶಾನುಭೋಗರಿಗೂ ಜೀಪು ಬೇಕು ಎಂದು ಮುಂದೆ ಕೇಳಬಹುದು. ಅವರವರ ಜವಾಬ್ದಾರಿಯನ್ನು ಗಣನೆಗೆ ತೆಗೆದುಕೊಂಡು ನಾವು ಹಣವನ್ನು ಖರ್ಚು ಮಾಡುತ್ತಿದ್ದೇವೆ.

ಶ್ರೀ ಹೆಚ್.ಡಿ. ಚೌಡಯ್ಯ.—ಅಧ್ಯಕ್ಷರೇ, ತಾಲ್ಲೂಕಿನಲ್ಲಿ ನೂರಾರು ಶಾಲೆಗಳಿವೆ.

ಶ್ರೀ ರಾಮಕೃಷ್ಣ ಹೆಗಡೆ.—ನೂರಾರು ಶಾಲೆಗಳಿದ್ದರೆ, ಅದರ ಕಾರ್ಯ ಕ್ಷೇತ್ರದ ವಿಸ್ತಾರವನ್ನು ವ್ಯಾಪಕವಾಗಿ ನೋಡಿಕೊಂಡು ಹಣವನ್ನು ನಾವು ಖರ್ಚು ಮಾಡಬೇಕಾಗುತ್ತದೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೈಗಾರಿಕೆಗಳ ಮುಷ್ಕರಗಳು ಕಡಿಮೆಯಾಗಿದೆಯೆಂದು ಹೇಳಿದ್ದಾರೆ. ಅದು ನಿಜ. ಮುಷ್ಕರಗಳು ಆಗಿಲ್ಲ. ಆದರೆ ಕೆಲವು ಕೈಗಾರಿಕೆಗಳು ಮುಚ್ಚಿ ಹೋಗಿವೆ. ಉದಾಹರಣೆಗೆ ಹೇಳಬೇಕಾದರೆ, ನಮ್ಮ ರಾಜ್ಯದಲ್ಲಿರತಕ್ಕ ಕೈಗಾರಿಕೆಗಳಲ್ಲಿ ಬಿಜಾಪುರದ ಕೋ–ಆಪರೇಟಿವ್ ಮಿಲ್ಸ್, ದಾವಣಗೆರೆಯ ಶಂಕರ್ ಟೆಕ್ಸ್‌ಟೈಲ್, ಮೈಸೂರಿನ ಕೆ.ಆರ್. ಮಿಲ್ ಬಳ್ಳಾರಿಯ ಸ್ಪಿನ್ನಿಂಗ್ ಮಿಲ್, ಮತ್ತು ನರಗುಂದದಲ್ಲಿನ ಮಿಲ್, ಇವುಗಳು ಮುಚ್ಚಿ ಹೋಗಿವೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಕಾರ್ಮಿಕ ಮಂತ್ರಿಯವರನ್ನು ಕರೆಸಿದ್ದೆವು. ಅವರು ಅಲ್ಲಿಗೆ ಬಂದರೂ ಸರಿಯಾದ ಉತ್ತರ ಕೊಡಲಿಲ್ಲ. ಮುಚ್ಚಿ ಹೋಗಿರುವ ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಯೋಚನೆ ಮಾಡುತ್ತೇವೆಂದು ಹೇಳಿದರೆ ಸಾಲದು. ಇದರಿಂದ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಮಾನ್ಯ ಕಾರ್ಮಿಕ ಮಂತ್ರಿಯವರು ಎಷ್ಟೇ ಪ್ರಯತ್ನ ಮಾಡಿದರೂ ಅದು ಪರಿಣಾಮಕಾರಿಯಾಗಿಲ್ಲ ಕೈಗಾರಿಕೆಗಳು ಬಂದ್ ಆಗಿರತಕ್ಕಂತಹ ಅಥವಾ ಆಡಳಿತ ವರ್ಗದವರು ಮುಚ್ಚಿರತಕ್ಕಂತಹ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೆ ಸರ್ಕಾರದವರು ಏನು ಕ್ರಮ

ಕೈಗೊಳ್ಳುತ್ತಾರೆ ? ಮತ್ತು ಕನಿಷ್ಠ ಕೂಲಿಯ ಬಗ್ಗೆ, ಕೈಗಾರಿಕೆಗಳ ಬಗ್ಗೆ ೧೯೮೨ರಲ್ಲಿ ಒಂದು ನೋಟಿಫಿಕೇಷನ್ ಆಗಿತ್ತು. ಹೈಕೋರ್ಟಿನಲ್ಲಿ ಒಂದು ಸರ್ಕಾರದ ಅಪೀಲ್ ಇತ್ತು. ಸರ್ಕಾರದವರು ಅದನ್ನು ವಾಪಸ್ ಪಡೆದಿದ್ದಾರೆ. ಏನು ಕಾರಣವೋ ಗೊತ್ತಿಲ್ಲ ಇದರ ಬಗ್ಗೆ ಕೂಡಲೇ ಮುಖ್ಯ ಮಂತ್ರಿಗಳು ಗಮನಹರಿಸಬೇಕು. ಕನಿಷ್ಠ ಕೂಲಿ, ತುಟ್ಟಿ ಭತ್ಯವನ್ನು ಹೆಚ್ಚಿಸುವುದಕ್ಕೋಸ್ಕರ ಅಪೀಲ್ ಹೋಗಿದ್ದರು. ಕನಿಷ್ಠ ಕೂಲಿ ಬಗ್ಗೆ ಸರ್ಕಾರಕ್ಕೆ ಒಳ್ಳೆಯ ಭಾವನೆ ಇದ್ದರೆ, ಹೈಕೋರ್ಟ ನಲ್ಲಿದ್ದಂತಹ ಅಪೀಲನ್ನು ಏತಕ್ಕೆ ವಾಪಸ್ ಪಡೆದರು ? ಇದರ ಬಗ್ಗೆ ಆದಷ್ಟು ಜಾಗ್ರತೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಕೈಗಾರಿಕೆಗಳನ್ನು ಆದಷ್ಟು ಬೇಗ ಪ್ರಾರಂಭಿಸಿ, ನಿರುದ್ಯೋಗದಲ್ಲಿರುವ ಕೆಲಸಗಾರರಿಗೆ ಉದ್ಯೋಗ ಒದಗಿಸುವುದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನ್ಯಾಷನಲ್ ಟೆಕ್ಸ್‌ಟೈಲ್‌ಗೆ ಸಂಬಂಧಪಟ್ಟಂತೆ ಯಾವ ಟೆಕ್ಸ್‌ಟೈಲ್ ಮಿಲ್ ಕೂಡ ಇವೊತ್ತು ಬಂದ್ ಆಗಿಲ್ಲ. ಕೆಲವು ಖಾಸಗಿ ಮತ್ತು ಸಹಕಾರಿ ಟೆಕ್ಸ್‌ಟೈಲ್ ಮಿಲ್‌ಗಳು ಬಂದ್ ಆಗಿರತಕ್ಕಂಥಾದ್ದು ನಿಜ. ಬಿಜಾಪುರದಲ್ಲಿನ ಮಿಲ್ ಕಳೆದ ಅನೇಕ ತಿಂಗಳಿಂದ ಮುಚ್ಚಿ ಹೋಗಿದೆ. ಅಲ್ಲಿನ ಕಾರ್ಮಿಕ ಮುಖಂಡರು ನನ್ನನ್ನು ಭೇಟಿ ಮಾಡಿದ್ದರು, ಮೊನ್ನೆ ಕೂಡ ಬಂದಿದ್ದರು. ಇದಕ್ಕೆ ಬಂಡವಾಳ ಕೊಡಬೇಕೆಂದು ಸಚಿವ ಸಂಪುಟದಲ್ಲಿ ಡಿಸಿಷನ್ ಆಗಿದೆ. ದುಡ್ಡನ್ನು ಅಪೆಕ್ಸ್ ಬ್ಯಾಂಕ್‌ನಿಂದ ಒದಗಿಸಬೇಕೋ ಅಥವಾ ಬೇರೆ ಬ್ಯಾಂಕ್‌ನಿಂದ ದುಡ್ಡು ಕೊಡಿಸಬೇಕೋ ಎಂಬುದನ್ನು ಚರ್ಚೆ ಮಾಡಿ, ಈಗ ಸದ್ಯಕ್ಕೆ ೧ ಕೋಟಿ ರೂಪಾಯಿಗಳನ್ನು ಕೂಡ ಬೇಕೆಂದು ತೀರ್ಮಾನ ಮಾಡಿದ್ದೇವೆ. ನಾನು ಬೀದರ್‌ಗೆ ಹೋಗುವುದಕ್ಕಿಂತ ಮೊದಲು ಈ ಕಾರ್ಮಿಕರೆಲ್ಲಾ ನನ್ನನ್ನು ಭೇಟಿ ಮಾಡಿದ್ದರು. ಅವರಿಗೆ ಆಶ್ವಾಸನೆಗಳನ್ನು ಕೊಟ್ಟಿದ್ದೇನೆ.

ಇನ್ನು ನರಗುಂದದ ವಿಚಾರ. ಮಾನ್ಯ ಪಂಪಾಪತಿಯವರು ಅಲ್ಲಿ ಉಪವಾಸ ಕುಳಿತಿದ್ದರು. ಉಪವಾಸ ಕುಳಿತುಕೊಳ್ಳುವುದು ಬೇಡವೆಂದು ನಾವೇ ಎಬ್ಬಿಸಿದ್ದೆವು. ಕಾರ್ಮಿಕ ಸಂಘ ಮತ್ತು ಮ್ಯಾನೇಜ್‌ಮೆಂಟ್ ಈ ಇಬ್ಬರೂ ಒಮ್ಮತಕ್ಕೆ ಬಂದಿರತಕ್ಕಂಥಾದ್ದನ್ನು ಜಾರಿಗೆ ಕೊಡುತ್ತಿಲ್ಲ. ಮ್ಯಾನೇಜ್‌ಮೆಂಟಿನವರು ಒಂದಲ್ಲ ಒಂದು ನಿಯಮ ಹೇಳುತ್ತಿದ್ದಾರೆ. ಮ್ಯಾನೇಜ್‌ಮೆಂಟಿನವರ ಜೊತೆ ಮಾತನಾಡಿ ಇಂಪ್ಲಿಮೆಂಟ್ ಮಾಡಲೇಬೇಕೆಂದು ಮಾನ್ಯ ಶ್ರಮ ಖಾತೆ ಮಂತ್ರಿಯವರಿಗೆ ಹೇಳಿದ್ದೇನೆ. ಇನ್ನು ಮೈಸೂರಿನ ಕೃಷ್ಣರಾಜ ಮಿಲ್ಲಿನ ಬಗ್ಗೆ, ಇದು ಬಹಳ ದಿವಸಗಳಿಂದ ಮುಚ್ಚಿ ಹೋಗಿದೆ. ಈಗ ನಾನು ಮಾನ್ಯ ಕಾರ್ಮಿಕ ಮಂತ್ರಿಯವರ ಮುಖಾಂತರವಾಗಿ ಆ ಮಿಲ್ಲಿನ ಮಾಲೀಕರನ್ನು ಕರೆಯಿಸಿ ಒಂದೂವರೆ, ಎರಡು ತಿಂಗಳಿಂದ ಸಾಕಷ್ಟು ವಿವರವಾಗಿ ಚರ್ಚೆ ಮಾಡಿ, ಒಂದು ಒಪ್ಪಂದಕ್ಕೆ ಬಂದಿದ್ದೇವೆ.

ನಮ್ಮ ಒಪ್ಪಂದ ಏನೆಂದರೆ, ಯಾರು ಎಷ್ಟು ಕೆಲಸ ಮಾಡಬೇಕೆಂಬುದನ್ನು ನಿಗದಿ ಮಾಡಬೇಕೆಂಬುದು. ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಸಂಸ್ಥೆ ಇದೆ. ಅದರಲ್ಲಿರತಕ್ಕ ಎಕ್ಸ್‌ಪರ್ಟ್ಸ್ ಅನ್ನು ಕರೆಯಿಸಿ ಮಾಡಬೇಕೆಂದು ಮಾಡಿದ್ದೇವೆ. ಇನ್ನು ದಾವಣಗೆರೆ ಶಂಕರ ಟೆಕ್ಸ್‌ಟೈಲ್ ಮಿಲ್ಲಿನದು ತೊಂದರೆ ಇದೆ ಎಂದು ಹೇಳಿದ್ದಾರೆ. ಅದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಂಪಾಪತಿ.—ಸ್ವಾಮಿ ಅಧ್ಯಕ್ಷರೆ,

ಅಧ್ಯಕ್ಷರು.— ನಿಮಗೆ ಒಬ್ಬರಿಗೆ ಟೈಂ ಕೊಟ್ಟರೆ ಆಗುವುದಿಲ್ಲ, ಇನ್ನೂ ಬಹಳ ಜನ ಪ್ರಶ್ನೆ ಕೇಳುವವರಿದ್ದಾರೆ. ನಿಮಗೆ ಇನ್ನೊಂದು ಸಾರಿ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಂಪಾಪತಿ.—ಕನ್ನಡ ಆಡಳಿತ ಭಾಷೆ ಆಗಬೇಕೆಂಬುದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆದರೆ ಅಷ್ಟೊಂದು ಸಮರ್ಪಕವಾಗಿ ಕನ್ನಡ ಆಡಳಿತ ಭಾಷೆ ಆಗುವುದಕ್ಕೆ ಸರಿಯಾದ ವ್ಯವಸ್ಥೆ ಆಗಿಲ್ಲ. ಅದರ ಬಗ್ಗೆ ಸರ್ಕಾರ ಕೂಡಲೇ ಗಮನ ಹರಿಸಬೇಕು. ಕಾವಲು ಸಮಿತಿ ಒಂದು ಮಾಡಿದ್ದೀರಿ. ಆ ಸಮಿತಿ ಇದ್ದ ಹಾಗೆ ಕಾಣುವುದಿಲ್ಲ. ಕನ್ನಡ ಎಲ್ಲಾ ಹಂತಗಳಲ್ಲೂ ಆಡಳಿತ ಭಾಷೆ ಆಗಬೇಕು. ಇಂಗ್ಲೀಷ್ ಬರುವುದಿಲ್ಲವೆಂದರೆ ಹೇಗೆ ಕಲಿಯುತ್ತಾರೋ ಹಾಗೆ

ಹೊರಗಡೆಯಿಂದ ಬರತಕ್ಕ ಐ. ಎ. ಎಸ್. ಅಧಿಕಾರಿಗಳು ಕನ್ನಡ ಕಲಿಯುತ್ತಾರೆ. ನಮ್ಮಲ್ಲಿ ಅನೇಕ ಜನರಿಗೆ ಕನ್ನಡ ಕಲಿಯಲು ಅಭಿರುಚಿ ಇಲ್ಲದೆ ಇಂಗ್ಲೀಷ್ ವ್ಯಾಮೋಹ ಹೆಚ್ಚಾಗುತ್ತಿದೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಪಂಪಾಪತಿ.—ತಾವು ಇಷ್ಟು ಅವಸರ ಮಾಡುತ್ತೀರಲ್ಲ.

ಅಧ್ಯಕ್ಷರು,—ನಿಮಗೆ ಒಬ್ಬರಿಗೆ ಇಷ್ಟು ಅವಕಾಶ ಕೊಟ್ಟರೆ ಹೇಗೆ?

ಶ್ರೀ ಪಂಪಾಪತಿ.—ಕನ್ನಡ ಎಲ್ಲಾ ಹಂತಗಳಲ್ಲೂ ಆಡಳಿತ ಭಾಷೆ ಆಗುವುದಕ್ಕೆ ಮತ್ತು ವ್ಯವಹಾರ ನಡೆಸುವುದಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಕ್ರಮ ಕೈಗೊಂಡಿದ್ದೇವೆ. ಕನ್ನಡವನ್ನು ಆಡಳಿತ ಭಾಷೆ ಮಾಡಲು ಯಾವ ಯಾವ ಕ್ರಮ ಕೈಗೊಳ್ಳಬೇಕೋ ಆ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದೇವೆ. ಕಾವಲು ಸಮಿತಿಯನ್ನು ನೇಮಿಸಿದ್ದೇವೆ, ಅದು ಚೆನ್ನಾಗಿ ಕೆಲಸ ಮಾಡುತ್ತಿದೆ. ಕಾವಲು ಸಮಿತಿಯವರು ಯಾವ ಯಾವ ಸೂಚನೆಗಳನ್ನು ಮಾಡುತ್ತಾ ಬಂದರೋ ಅವೆಲ್ಲವನ್ನು ಒಪ್ಪಿಕೊಂಡಿದ್ದೇವೆ. ಒಂದು ಮಾತನ್ನು ಹೇಳುವುದಾದರೆ, ಸದಸ್ಯರು ಯಾರೂ ತಪ್ಪು ಅರ್ಥ ಮಾಡಿಕೊಳ್ಳಬಾರದು. ಕನ್ನಡವೇ ಸರ್ಕಾರದ ಆಡಳಿತ ಭಾಷೆ ಎಂದು ನಾವು ಅಧಿಕಾರಕ್ಕೆ ಬಂದ ಒಂದು ತಿಂಗಳು ಐದು ದಿನಗಳಲ್ಲಿ ಎಂದರೆ ೧೦ನೇ ಜನವರಿ ೧೯೮೩ರಲ್ಲೇ ಘೋಷಣೆ ಮಾಡಿದ್ದೇವೆ. ಸರ್ಕಾರ ಅಸ್ತಿತ್ವಕ್ಕೆ ಬಂದ ವರ್ಷ ಫೆಬ್ರುವರಿ ೧೪ರಿಂದಲೇ ಅದನ್ನು ಜಾರಿಗೆ ತಂದೆವು. ಕನ್ನಡ ಟೈಪ್‌ರೈಟರ್ ಇಲ್ಲವೆಂದರು, ಅವನ್ನು ಕೊಟ್ಟಿದ್ದೇವೆ. ಇಂಗ್ಲೀಷ್ ಟೈಪ್ ರೈಟರ್‌ಗಳನ್ನು ವಾಪಸ್ಸು ತರಿಸಿದ್ದೇವೆ. ಕನ್ನಡ ಆಡಳಿತ ಭಾಷೆ ಕೇವಲ ಸರ್ಕಾರದ ಒಂದು ಕ್ರಮದಿಂದ ಆಗುವುದಿಲ್ಲ. ಸರ್ಕಾರದ ನೀತಿಯನ್ನು ಜಾರಿಗೆ ತರದ ಅಧಿಕಾರಿಗಳು ಯಾರಿದ್ದಾರೆ ಅವರ ಮೇಲೆ ಎಷ್ಟು ಉಗ್ರ ಕ್ರಮ ಕೈಗೊಳ್ಳ ಬೇಕೋ ಅಷ್ಟು ಉಗ್ರವಾದ ಕ್ರಮವನ್ನು ನಾವು ಕೈಗೊಳ್ಳುತ್ತೇವೆ. ನಿಮಗೆ ಒಂದು ಉದಾಹರಣೆ ಹೇಳುವುದಾದರೆ, ನಾನು ಪ್ರವಾಸ ಹೋದಾಗ ಪ್ರತಿ ದಿವಸ ಬೆಳಿಗ್ಗೆ ೬ರಿಂದ ೮ರವರೆಗೆ ಜನರು ಅರ್ಜಿಗಳನ್ನು ತರುತ್ತಾರೆ. ಅದರಲ್ಲಿ ನೂರಕ್ಕೆ ಎಂಭತ್ತು ಭಾಗ ಅರ್ಜಿಗಳು ಇಂಗ್ಲೀಷಿನಲ್ಲಿರುತ್ತವೆ. ನಾನು ಅದರಿಗೆ ಎಷ್ಟೋ ಸಾರಿ ಇದೇ ಮಾತನ್ನು ಹೇಳಿದ್ದೇನೆ. ಜನರೇ ಇಂಗ್ಲೀಷ್ ವ್ಯವಹಾರ ಬಿಡದಿದ್ದರೆ ನಾವು ನೂರಕ್ಕೆ ನೂರು ತಕ್ಷಣ ಜಾರಿಗೆ ತರುತ್ತೇವೆಂದು ಹೇಗೆ ಹೇಳಬೇಕು? ಅದರ ಅರ್ಥ ಜನರನ್ನು ದೂರುತ್ತೇನೆಂದು ಅಲ್ಲ. ಅವರಲ್ಲಿ ಒಂದು ರೀತಿಯ ಅಭ್ಯಾಸ ಬಂದುಬಿಟ್ಟಿದೆ. ಅವರು ಇಂಗ್ಲೀಷ್ ಬಲ್ಲವರ ಹತ್ತಿರವೇ ಹೋಗಿ ಇಂಗ್ಲೀಷಿನಲ್ಲಿ ಅರ್ಜಿ ಬರೆಸಿ ಟೈಪ್ ಮಾಡಿಸಿಕೊಂಡು ಬರುತ್ತಾರೆ. ಕನ್ನಡ ಬಲ್ಲವರ ಹತ್ತಿರ ಹೋಗುವುದಿಲ್ಲ. ಬಹುಶಃ ಅವರ ಮನಸ್ಸಿನಲ್ಲಿ ಈ ರೀತಿ ಇರಬಹುದು, ಇಂಗ್ಲೀಷಿನಲ್ಲಿ ಅರ್ಜಿ ಕೊಡದೆ ಇದ್ದರೆ ಅಧಿಕಾರಿಗಳು ನೋಡುವುದಿಲ್ಲ, ಮಂತ್ರಿಗಳು ನೋಡುವುದಿಲ್ಲ ಎಂದು. ಆ ಭ್ರಮೆ ಹೋಗಬೇಕು. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಸ್ಪಷ್ಟಪಡಿಸಬಯಸುತ್ತೇನೆ. ಕನ್ನಡದಲ್ಲಿ ಯಾರು ಅರ್ಜಿ ಕೊಡುತ್ತಾರೋ ಅವರಿಗೆ ಕನ್ನಡದಲ್ಲೇ ಉತ್ತರ ಕೊಡಲೇಬೇಕು. ಅವರು ಇಂಗ್ಲೀಷಿನಲ್ಲಿ ಕೊಟ್ಟರೂ ಕನ್ನಡ ಬಲ್ಲವರಾಗಿದ್ದರೆ, ಕನ್ನಡ ಭಾಷೆ ಬರುತ್ತದೆಂದು ಗೊತ್ತಿದ್ದರೆ ಕನ್ನಡದಲ್ಲೇ ಉತ್ತರ ಕೊಡಬೇಕೆಂದು ಮಾಡಿದ್ದೇವೆ. ಬಹುಶಃ ಎಲ್ಲಾ ಮಂತ್ರಿಗಳು ಕೂಡ ತಮ್ಮ ತಮ್ಮ ಫೈಲುಗಳಲ್ಲಿ ಕನ್ನಡದಲ್ಲೇ ಟಿಪ್ಪಣಿ ಬರೆಯುತ್ತಾರೆಂದು ತಿಳಿದುಕೊಂಡಿದ್ದೇನೆ, ಕೆಲವು ಸಾರಿ ಅದೂ ಕೂಡ ಕಷ್ಟವಾಗುತ್ತದೆ. ಏಕೆಂದರೆ ಇಂಗ್ಲೀಷಿನಲ್ಲಿ ಅರ್ಜಿ ಬಂದಿದ್ದರೆ ತನ್ನಷ್ಟಕ್ಕೆ ತಾನೆ ಅದಕ್ಕೆ ಉತ್ತರವನ್ನು ಇಂಗ್ಲೀಷಿನಲ್ಲಿ ಬರೆಯುವ ಪರಿಪಾಠ ಬಂದುಬಿಡುತ್ತದೆ. ಅದನ್ನು ನಾನು ಸ್ವತಃ ತಿದ್ದಿಕೊಂಡಿದ್ದೇನೆ. ಇಂಗ್ಲೀಷಿನಲ್ಲಿ ಬಂದರೂ ಕನ್ನಡದಲ್ಲಿ ಬರೆಯುವುದನ್ನು ಸ್ವಲ್ಪ ವಿಚಾರ ಮಾಡಿ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಸಾರ್ವಜನಿಕರು ಮತ್ತು ಮಾನ್ಯ ಸದಸ್ಯರು ಸಹಕರಿಸಬೇಕು. ಜನಜಾಗೃತಿ ಆಗಬೇಕು. ಆ ರೀತಿ ವ್ಯವಸ್ಥೆ ಎಲ್ಲಾ ಕಡೆ ಆಗಬೇಕು. ನಾವು ಹೋದಹೋದಲ್ಲಿ ಕನ್ನಡಲ್ಲೇ ಅರ್ಜಿ ಬರೆಯಿರಿ ಎಂದು ಹೇಳಬೇಕು ಮತ್ತು ನೀವು ಏತಕ್ಕ ಬರೆಯುವುದಿಲ್ಲವೆಂದು ಕೇಳಬೇಕು. ಮಾನ್ಯ ಖರ್ಗೆಯವರು ಬಹಳ ಗಹನವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಪಂಪಾಪತಿಯವರು ಕನ್ನಡದಲ್ಲಿ ಸಹಿ ಮಾಡುವುದಿಲ್ಲ.

ಶ್ರೀ ಪಂಪಾಪತಿ.—ಯಾರು ಹೇಳಿದ್ದು ನಿಮಗೆ? ಹಾಗೇನಾದರೂ ಇದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ ನೀವು ಕೊಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಬೇಡ, ಬೇಡ.

(ಗೊಂದಲ)

ಅಧ್ಯಕ್ಷರು.—ಸಮಾಧಾನವಾಗಿ ಹೇಳಿ, ಅವರ ಬಗ್ಗೆ ಸೀರಿಯಸ್ ಆಗಬೇಡಿ.

ಶ್ರೀ ಪಂಪಾಪತಿ.—ಬನ್ನಿ, ನಾವು–ನೀವು ಇಬ್ಬರು ಹೊರಗಡೆ ಹೋಗೋಣ.

ಶ್ರೀ ರಾಮಕೃಷ್ಣ ಹೆಗಡೆ.—ಜನತಾ ಮನೆಗಳ ವಿಚಾರದಲ್ಲಿ ಮಾನ್ಯ ಬಾರ್ಗೆಯವರು ಪ್ರಶ್ನೆ ಕೇಳಿದರು. ಆ ಬಗ್ಗೆ ನನಗೆ ತಕ್ಷಣ ಮಾಹಿತಿ ಸಿಕ್ಕಿದ್ದರಿಂದ ಕೊಡಬಯಸುತ್ತೇನೆ. ೧೯೮೨-೮೩ರಲ್ಲಿ ಸರ್ಕಾರದ ವತಿಯಿಂದ ಒಂದು ಲಕ್ಷದ ಎರಡು ಸಾವಿರ ಮನೆಗಳನ್ನು ತೆಗೆದುಕೊಳ್ಳಿ ಎಂದು ಆಜ್ಞೆ ಹೋಯಿತು. ಆದರೆ ಅದಕ್ಕೆ ಯಾವುದೆ ರೀತಿಯ ಬಡ್ಜೆಟ್ಟರಿ ಪ್ರಾವಿಷನ್ ಇರಲಿಲ್ಲ. ಕೆಲಸದ ಅಂದಾಜು ಪ್ರಾರಂಭದಲ್ಲಿ ಏನಿತ್ತೋ ಅದಕ್ಕಿಂತ ಹೆಚ್ಚಿಗೆ ಆದರೆ ಅದಕ್ಕೆ ಬಡ್ಜೆಟ್ಟರಿ ಪ್ರಾವಿಷನ್ ಇರಲಿಲ್ಲ. ಆದುದರಿಂದ ೧೯೮೩-೮೪ರಲ್ಲಿ ಹೊಸದಾಗಿ ಕೇವಲ ೫೮ ಸಾವಿರ ಮನೆಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದೆವು. ಏತಕ್ಕೆಂದರೆ ಹಳೆಯದನ್ನು ಮುಗಿಸಬೇಕೆಂದು. ಒಂದು ಲಕ್ಷದ ಎರಡು ಸಾವಿರ ಮನೆಗಳ ಪೈಕಿ ೫೮ ಸಾವಿರ ಮನೆಗಳನ್ನು ಮಾತ್ರ ತೆಗೆದುಕೊಂಡು ಅದನ್ನು ಮಾಡಿ ಮುಗಿಸಬೇಕೆಂದು ನಾವು ೧೯೮೩-೮೪ರಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡೆವು. ೧೯೮೨-೮೩ಕ್ಕೆ ಮೊದಲು ಎಂದರೆ ೧೯೮೧-೮೨ರಲ್ಲಿ ಪ್ರಾರಂಭಿಸಿದ ಮನೆಗಳು ಪೂರ್ತಿಯಾಗಿರಲಿಲ್ಲ. ಬಹುಶಃ ಅವು ಹೆಚ್ಚು ಕಡಿಮೆ ಲಕ್ಷಾಂತರ ಮನೆಗಳು ಇರಬೇಕು. ಅದಕ್ಕೆ ಖರ್ಚು ಮಾಡಿದ ಹಣ ೧೧ ಕೋಟಿ ೬೦ ಲಕ್ಷ ರೂಪಾಯಿಗಳು. ೧೯೮೩-೮೪ರಲ್ಲಿ ಒಟ್ಟು ಮನೆಗಳು ಪೂರ್ತಿಯಾದದ್ದು ೬೮೦೫೦, ೧೯೮೪-೮೫ರಲ್ಲಿ ಬಾಕಿ ಒಂದು ಲಕ್ಷದ ಎರಡು ಸಾವಿರ ಮನೆಗಳನ್ನು ಮಾಡಬೇಕೆಂದು ಏನು ಹೇಳಿದ್ದೆವು ಅದರಲ್ಲಿ ೪೪ ಸಾವಿರ ಮನೆಗಳನ್ನು ಮುಗಿಸಬೇಕೆಂದು ಮತ್ತು ಹೊಸದಾಗಿ ೩೧ ಸಾವಿರ ಮನೆಗಳನ್ನು ತೆಗೆದುಕೊಳ್ಳಬೇಕೆಂದು ನಾವು ಕಾರ್ಯಕ್ರಮವನ್ನು ಹಾಕಿಕೊಂಡೆವು. ಇದಕ್ಕೆ ಬಡ್ಜೆಟ್ಟರಿ ಪ್ರಾವಿಷನ್ ೧೩ ಕೋಟಿ ೪೦ ಲಕ್ಷ ಇತ್ತು. ಅಷ್ಟು ಹಣವನ್ನು ಖರ್ಚು ಮಾಡುವುದಷ್ಟೇ ಅಲ್ಲ ಇನ್ನೂ ೩ ಕೋಟಿ ಹೆಚ್ಚಿನ ಹಣವನ್ನು ಖರ್ಚು ಮಾಡಿದೆವು.

ಶ್ರೀ ಡಿ. ಎ. ಚಿನ್ನಪ್ಪ.—ಶಾಲೆಗಳಲ್ಲಿ ಸಾಧ್ಯವಾದಷ್ಟು ಹೆಚ್ಚು ಹೆಚ್ಚು ಕನ್ನಡವನ್ನು ಕಲಿಸತಕ್ಕ ಏರ್ಪಾಡು ಮಾಡಬೇಕು. ಚಿಕ್ಕ ಮಕ್ಕಳು ಕನ್ನಡವನ್ನು ಕಲಿತರೆ ಕನ್ನಡ ಹೆಚ್ಚಾಗಿ ಬಳಕೆಯಲ್ಲಿ ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಪರ್ಮಿಷನ್ ಕೊಡುವುದನ್ನು ನಿಲ್ಲಿಸಿ ಹೆಚ್ಚೆಚ್ಚು ಕನ್ನಡ ಶಾಲೆಗಳನ್ನು ತೆರೆಯಲು ಅವಕಾಶ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಎಷ್ಟೋ ಪ್ರಶ್ನೆಗಳಿಗೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನೀವು ಎದ್ದಿದ್ದೇ ನೋಡಲಿಲ್ಲ. ನೀವು ಕುಳಿತುಕೊಂಡು ರಾಚಯ್ಯನವರಿಗೆ ಏನೋ ಹೇಳುತ್ತಿದ್ದಿರಿ ಎಂದು ನಾವು ತಿಳಿದುಕೊಂಡಿದ್ದೆವು.

ಶ್ರೀ ಎಂ. ಎಸ್. ರಾಣೆ.—ನೌಕಾ ವಿಭಾಗದ ವೈಸ್ ಅಡ್ಮಿರಲ್ ನಗರಕ್ಕೆ ಭೇಟಿ ನೀಡಿದಾಗ ಕಾರವಾರದ ಹತ್ತಿರ ನೌಕಾ ನೆಲೆಯನ್ನು ಸ್ಥಾಪಿಸಲಾಗುತ್ತದೆ, ಇದರ ಬಗ್ಗೆ ಕೆಲವೇ ದಿನಗಳಲ್ಲಿ ನಿರ್ಣಯ ಕೈಗೊಳ್ಳಲಾಗುತ್ತದೆ, ಅದಕ್ಕೆ ಅವಶ್ಯವಿರುವ ಜಮೀನನ್ನು ರಾಜ್ಯ ಸರ್ಕಾರ ಈಗಾಗಲೇ ವಶಪಡಿಸಿಕೊಂಡು ಸಹಕಾರ ನೀಡಿದೆ ಎಂದು ಹೇಳಿದ್ದಾರೆ. ವಶಪಡಿಸಿಕೊಂಡ ಜಮೀನು ಕಾರವಾರದ ಅಂಕೋಲ ಭಾಗದಲ್ಲಿ ಎಷ್ಟು ಎಕರೆ ಇದೆ? ಜಮೀನನ್ನು ಕಳೆದುಕೊಂಡವರ ಪುನರ್ವಸತಿ ಬಗ್ಗೆ ಸರ್ಕಾರ ಏನು ಯೋಜನೆ ಹಾಕಿಕೊಂಡಿದೆ? ಈ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನೌಕಾ ನೆಲೆ ಬಗ್ಗೆ ಸಂಪೂರ್ಣವಾದ ವಿವರವನ್ನು ಕೊಡುವುದಕ್ಕೆ ಈಗ ಸಾಧ್ಯವಿಲ್ಲ. ಕೊಡುವುದು ಸೂಕ್ತವೂ ಅಲ್ಲ. ಇದು ಕೇಂದ್ರ ಸರ್ಕಾರದವರು ಕೈಗೊಂಡ ಬೃಹತ್ ಯೋಜನೆ. ನಾವು ಅವರಿಗೆ ಬೇಕಾಗುವಷ್ಟು ಜಮೀನನ್ನು ಕೊಡುತ್ತೇವೆಂದು ಹೇಳಿದ್ದೇವೆ. ಅದರಲ್ಲಿ ಬಹುತೇಕವಾಗಿ ಅರಣ್ಯ ಖಾತೆಗೆ ಸಂಬಂಧಿಸಿದ ಜಮೀನು ಇದೆ. ಸಾಗುವಳಿಗೆ ಇದ್ದ ಜಮೀನು ಸ್ವಲ್ಪ ಮಟ್ಟಿಗೆ ಇದೆ. ಸಾಗುವಳಿ ಜಮೀನನ್ನು ಈ ಕಾರಣಕ್ಕೆ ನಾವು ತೆಗೆದುಕೊಂಡರೆ ಸಾಕಷ್ಟು ಪ್ರಮಾಣದಲ್ಲಿ ಪರಿಹಾರ ಕೊಡುವುದು ಮತ್ತು ಆ ಜನರಿಗೆ ಬೇರೆ ಕಡೆಗಳಲ್ಲಿ ಪುನರ್ವಸತಿ ಕಲ್ಪಿಸಿಕೊಡುವುದು ಮಾಡಬೇಕಾದ್ದು ಅಗತ್ಯ. ಅದನ್ನು ಮಾಡೇ ಮಾಡುತ್ತೇವೆ. ಯಾರಿಗೂ ತೊಂದರೆಯಾಗದಂಥ ರೀತಿಯಲ್ಲಿ ಅನ್ಯಾಯವಾಗದಂಥ ರೀತಿಯಲ್ಲಿ ಮಾಡುತ್ತೇವೆ. ತೊಂದರೆ ಸ್ವಲ್ಪಮಟ್ಟಿಗೆ ಆದರೂ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇವೆ. ಮೊನ್ನೆ ತಾನೇ ದಕ್ಷಿಣ ಭಾರತಕ್ಕೆ ಸಂಬಂಧಪಟ್ಟ ಹಿರಿಯ ನೌಕಾಧಿಕಾರಿಯವರು ನನ್ನನ್ನು ಭೇಟಿಯಾಗಿದ್ದರು. ಅವರು ಹೇಳಿದಂತೆ ಅಲ್ಲಿ ನೌಕಾ ನೆಲೆ ಪ್ರಾರಂಭವಾದರೆ ಅದು ಇಡೀ ಹಿಂದೂಸ್ಥಾನದಲ್ಲೇ ಉತ್ಕೃಷ್ಟವಾದ ನೌಕಾ ನೆಲೆಯಾಗಿರುತ್ತದೆ ಎಂದು. ಇದಕ್ಕಿಂತ ಹೆಚ್ಚಿನ ವಿಚಾರ ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ. ಏಕೆಂದರೆ ಇದು ರಕ್ಷಣೆಗೆ ಸಂಬಂಧಪಟ್ಟಿದ್ದು. ಒಟ್ಟಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಚಿತ್ರವೇ ಇದರಿಂದ ಬದಲಾಗಬಹುದು ಅಷ್ಟು ವ್ಯಾಪಕವಾದ ರೀತಿಯಿಂದ ಪ್ರಯೋಜನ ನಮಗೆ ಸಿಗಬಹುದು ಎಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಶಿವಮೊಗ್ಗ ಜಿಲ್ಲೆಯಲ್ಲಿ ಮುಳುಗಡೆಯಾದ ರೈತರು, ಭೂಹೀನರು ಮತ್ತು ನಿರ್ಗತಿಕರು ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡು ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಇತ್ತೀಚೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಬಲಾತ್ಕಾರವಾಗಿ ಮನೆ ಬಿಡಿಸುವುದು, ರೈತರಿಗೆ ಹಿಂಸೆ ಕೊಡುವುದು ನಡೆಯುತ್ತಿದೆ. ಹತ್ತಾರು ವರ್ಷಗಳಿಂದ ಆ ಜನರು ಅಡಿಕೆ, ತೆಂಗು ಮುಂತಾದ ಗಿಡಗಳನ್ನು ಹಾಕಿಕೊಂಡು ಬೆಳೆ ಬೆಳೆಯುತ್ತಿದ್ದಾರೆ. ಇಂಥ ಜನರಿಗೆ ಅಧಿಕಾರಿಗಳು ತೊಂದರೆ ಕೊಡುತ್ತಿದ್ದಾರೆ. ಮನೆ ಸುಟ್ಟಿರುವುದಕ್ಕೆ ರುಜುವಾತಿದೆ. ನಾನು ಈ ಬಗ್ಗೆ ನೋಟೀಸ್ ಕೂಡ ಕೊಟ್ಟಿದ್ದೆ. ಅದಕ್ಕೆ ರೆವಿನ್ಯೂ ಮಂತ್ರಿಗಳು ಉತ್ತರ ಕೊಡಲಿಲ್ಲ. ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಮೊದಲ ಬಾರಿಗೆ ಆಯ್ಕೆಯಾಗಿದ್ದಾಗ ಆಶ್ವಾಸನೆ ಕೊಟ್ಟಿದ್ದರು. ಪ್ರತಿದಿವಸ ಶಿವಮೊಗ್ಗದ ಜನ ಏನಾಯಿತು ಎಂದು ನಮ್ಮನ್ನು ಕೇಳುತ್ತಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಸಹ್ಯಾದ್ರಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುತ್ತೇವೆ ಎಂದು ನಿರ್ದಿಷ್ಟವಾದ ಆಶ್ವಾಸನೆ ಕೊಟ್ಟಿರಲಿಲ್ಲ. ಮಾಡತಕ್ಕ ಅಗತ್ಯ ಇದೆ ಎಂದು ಹೇಳಿದ್ದೆ.

ಶ್ರೀ ಬಿ. ಸ್ವಾಮಿರಾವ್.—ತಾವು ನೀಡಿದ ಪತ್ರಿಕಾ ಹೇಳಿಕೆ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ತೋರಿಸಿ. ನಾನು ನಿರ್ದಿಷ್ಟವಾದ ಆಶ್ವಾಸನೆಯನ್ನು ಕೊಟ್ಟಿಲ್ಲ. ನಾನು ಏತಕ್ಕೆ ಕೊಡಲಿಲ್ಲ ಎಂದರೆ ಅದು ನಮ್ಮ ಕೈಯಲ್ಲಿಲ್ಲ. ಜೆ. ಎಚ್. ಪಟೇಲರು ಈ ವಿಷಯದಲ್ಲಿ ಒತ್ತಾಯ ಮಾಡಿದರು. ನಾವೂ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಕೇಂದ್ರ ಸರ್ಕಾರದ ಮನವೊಲಿಸುವ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇವೆ. ಇದು ಆಗಬೇಕಾದ ಅಗತ್ಯ ಇದೆ. ಈಗಾಗಲೇ ಗುಲ್ಬರ್ಗ ಮತ್ತು ಮಂಗಳೂರು-ಎರಡು ವಿಶ್ವವಿದ್ಯಾನಿಲಯಗಳನ್ನು ನಾವು ಸ್ಥಾಪನೆ ಮಾಡಿದ್ದೇವೆ. ಇದುವರೆಗೆ ಸುಮಾರು ೬-೭ ಕೋಟಿ ರೂಪಾಯಿಗಳನ್ನು ಒಂದೊಂದು ವಿಶ್ವವಿದ್ಯಾನಿಲಯದ ಮೇಲೆ ಖರ್ಚು ಮಾಡಿದ್ದೇವೆ. ಯು.ಜಿ.ಸಿ. ರೂಲ್ಸ್ ಪ್ರಕಾರ ಮೂರು ಕೋಟಿ ರೂಪಾಯಿವರೆಗೆ ಖರ್ಚು ಮಾಡಿದರೆ ಆಗ ಆ ವಿಶ್ವವಿದ್ಯಾನಿಲಯ ಗ್ರಾಂಟಿಗೆ ಅರ್ಹವಾಗುತ್ತದೆ ಎಂದಿದೆ. ಇದರ ಬಗ್ಗೆ ಪ್ರಯತ್ನ ಮಾಡಿ ಮಾಡಿ ಸಾಕಾಯಿತು. ಮೊನ್ನೆ ನಾನು ದೆಹಲಿಗೆ ಹೋದಾಗ ಕೇಂದ್ರದ ಮಂತ್ರಿಗಳನ್ನು ಭೇಟಿಮಾಡಿದ್ದೆ. ಆಗ ಅವರು ಯೂನಿವರ್ಸಿಟಿ ಆಕ್ಟ್ ಬದಲಾಯಿಸಬೇಕಾಗಿದೆ ಎಂದು ಹೇಳಿದರು. "...during the pleasure of the Chancellor" ಎಂದು ಇದೆ. ಅದರ ಅರ್ಥ ಏನೆಂದರೆ ಯಾವಾಗ ಬೇಕಾದರೂ ತೆಗೆಯಬಹುದು ಎಂದು. ಆಕ್ಟ್ ಮಾಡಿದಾಗ ಈ ರೀತಿ ಯಾವ ಕಾರಣದಿಂದ ಮಾಡಿದರೋ ಈಗ ಹೇಳುವುದು ಕಷ್ಟ. ಈ ನಿಯಮವನ್ನು ತೆಗೆಯಬೇಕು. ಇದನ್ನು ತೆಗೆದು ಅವರಿಗೆ ಇಂತಿಷ್ಟು ಅವಧಿ ಎಂದು ಟರ್ಮ್ ಫಿಕ್ಸ್ ಮಾಡಬೇಕೆಂದು ಹೇಳಿದ್ದಾರೆ. ಎರಡನೆಯದಾಗಿ, ವಿಶ್ವವಿದ್ಯಾನಿಲಯದ

ರಿಜಿಸ್ಟ್ರಾರ್ ಮತ್ತು ಇನ್ನಿತರ ಕೆಲವು ಹಿರಿಯ ಅಧಿಕಾರಿಗಳ ನೇಮಕ ಸರ್ಕಾರದಿಂದ, ಎಂದರೆ ಛಾನ್ಸಲರ್ ಅವರಿಂದ ಆಗಬಾರದು, ಸಿಂಡಿಕೇಟಿನಿಂದ ಆಗಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ತಿದ್ದುಪಡಿ ಮಾಡಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಅಲ್ಲಿ ವಿಶ್ವವಿದ್ಯಾನಿಲಯವನ್ನು ಮಾಡಲೇಬೇಕು ಎಂಬ ಆಗ್ರಹ ಇದೆ. ಆದಕ್ಕಾಗಿ ಹಣ ಬಿಡುಗಡೆ ಮಾಡಿ ಎಂದು ಹೇಳಿದ್ದೇವೆ. ಪತ್ರ ಕೂಡ ಕೇಂದ್ರಸರ್ಕಾರಕ್ಕೆ ಬರೆದಿದ್ದೇವೆ. ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಕೇಂದ್ರ ಸರ್ಕಾರದವರು ಒಪ್ಪುವ ತನಕ ಮಾಡು ವುದಕ್ಕಾಗುವುದಿಲ್ಲ ಮಾನ್ಯ ರಾಮಪ್ಪನವರು ಬಳ್ಳಾರಿಯಲ್ಲಿ ಮಾಡಿ ಎಂದು ಹೇಳಿದರು. ಪೋಸ್ಟ್ ಗ್ರಾಜುಯೇಟ್ ಸೆಂಟರ್ ಮಾಡುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಬಿಜಾಪುರದಲ್ಲಿ ಅವನ್ನು ಮಾಡಬೇಕೆಂದು ಹೇಳಿದ್ದಾರೆ. ಬೀದರ್‌ನಲ್ಲಿ ಒಂದು ಮಾಡಿದ್ದೇವೆ. ಶಿವಮೊಗ್ಗ ಜಿಲ್ಲೆಯಲ್ಲಿ ಮಾಡಿ ರುವುದಕ್ಕೆ ಯು.ಜಿ.ಸಿ.ಯಿಂದ ಸಹಾಯ ಸಿಕ್ಕಿಲ್ಲ. ಪುನ: ಪತ್ರ ಬರೆದು ನೆನಪು ಮಾಡುತ್ತಿದ್ದೇವೆ. ಹೊಸ ಕಾರ್ಯಕ್ರಮ ಮಾಡಬೇಕು ಎಂದು ಸದಸ್ಯರು ಹೇಳಿದ್ದಾರೆ. ಅವರು ಹೇಳುವುದು ನಿಜ. ಆದರೆ ಕೇಂದ್ರ ಸರ್ಕಾರದ ಹತ್ತಿರ ಹಣ ಇಟ್ಟುಕೊಂಡಿರುವುದರಿಂದ ಅವರ ಹತ್ತಿರ ನಾವು ಹೋಗಬೇಕು. ಅಲ್ಲಿ ಹೋಗಬೇಕಾದ ಅಗತ್ಯ ಇಲ್ಲದಿದ್ದರೆ ನಾವೇ ಮಾಡಬಹುದಾಗಿತ್ತು. ಅತಿಕ್ರಮಣವಾಗಿ ಸಾಗುವಳಿ ಮಾಡುತ್ತಿರತಕ್ಕ ಜಮೀನಿನ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಇಲ್ಲ. ಬೀದರ್‌ನಿಂದ ಕೊಳ್ಳೇಗಾಲದವರೆಗೆ ಎಲ್ಲಾ ಕಡೆಯೂ ಈ ರೀತಿ ಜಮೀನು ಇದೆ. ಅತಿಕ್ರಮಣದಲ್ಲಿ ಎರಡು ತರಹ ಇದೆ. ಒಂದು ಅರಣ್ಯ ಜಮೀನಿನ ಅಕ್ರಮ ಸಾಗುವಳಿ. ಇನ್ನೊಂದು ರೆವಿನ್ಯೂ ಲ್ಯಾಂಡ್‌ನಲ್ಲಿ ಅಕ್ರಮ ಸಾಗುವಳಿ ಮಾಡುವುದು. ರೆವಿನ್ಯೂ ಲ್ಯಾಂಡ್ ಎಂದರೆ ಗ್ರಾಮಠಾಣ ಇರಬಹುದು, ಗೋಮಾಳ ಇರಬಹುದು, ಹುಲ್ಲುಗಾವಲು ಇರಬಹುದು. ಇದರ ಬಗ್ಗೆ ಸರ್ಕಾರ ಒಂದು ವರ್ಷದ ಹಿಂದೆಯೇ ತೀರ್ಮಾನ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿತ್ತು. ಆದರೆ ಆಚರಣೆಗೆ ತಂದಿರಲಿಲ್ಲ. ನಂತರ ಕೆಲವರು ಇದರಿಂದ ದೊಡ್ಡ ದೊಡ್ಡ ಜನರಿಗೆ ಅನುಕೂಲವಾಗುತ್ತದೆ, ಕಾಫಿ ಪ್ಲಾಂಟರ್‌ಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೀರಿ ಎಂದು ಆರೋಪ ಮಾಡಿದರು. ಅದಕ್ಕಾಗಿ ನಾವು ಕೊನೆಯ ತೀರ್ಮಾನವನ್ನು ತೆಗೆದುಕೊಂಡಿರಲಿಲ್ಲ.

೧೧-೩೦ ಎ.ಎಂ.

ಖಾಸಗಿ ಜಮೀನಿನ ಪಕ್ಕದಲ್ಲಿಯ ಒಂದು ಪ್ರದೇಶ ಎನ್‌ಕ್ರೋಚ್ ಆಗಿರುತ್ತದೆ. ಅದನ್ನು ಹಾಗೆ ಬಿಡುವುದು ಸರಿಹೋಗುವುದಿಲ್ಲ. ಆ ಜಮೀನನ್ನು ಯಾರು ಮಾಡುತ್ತಿದ್ದಾರೆ ಎಂದು ನೋಡಿ ಅದನ್ನು ಅವರಿಗೇ ಕೊಡುವುದು ಸೂಕ್ತವೇ ಇಲ್ಲವೇ ಎಂಬುದನ್ನೆಲ್ಲಾ ನೋಡಬೇಕಾಗುತ್ತದೆ. ಯಾರು ಜಮೀನನ್ನು ಇಟ್ಟುಕೊಂಡು ಎನ್‌ಕ್ರೋಚ್ ಮಾಡಿದ್ದಾರೆ. ಅವರಿಂದ ಎಷ್ಟೇ ಕಷ್ಟವಾದರೂ ಬಿಡಿಸ ಬೇಕಾಗುತ್ತದೆ. ಯಾರು ದೊಡ್ಡ ದೊಡ್ಡ ಶ್ರೀಮಂತರು ಪ್ಲಾಂಟೇಷನ್ ಮಾಡಿದ್ದಾರೆ ಅಂಥವರು ಏನು ಒಂದು ಅಥವಾ ಎರಡು ಎಕರೆಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಅವರಿಗೆ ಅತಿ ಹೆಚ್ಚಿನ ಪೆನಾಲ್ಟಿ ಹಾಕಿ ಅವರಿಗೆ ಕೊಡಬೇಕೆನ್ನುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಮಾನ್ಯ ವಿ.ಎಲ್. ಪಾಟೀಲ್ ಅವರು ಸಂಬಂಧಪಟ್ಟ ಮಂತ್ರಿ ಗಳಾಗಿದ್ದಾಗ ಈ ವಿವಾದ ಬಂದಿತ್ತು. ಆಗ ಭೂಮಿ ಇಲ್ಲದೇ ಇರುವವರು ಯಾರು ಆಕ್ರಮಣ ಮಾಡಿ ದ್ದಾರೆ ಅವರಿಗೆ ಮಂಜೂರು ಮಾಡುವುದು ಅಗತ್ಯವಾಗಿದೆಯೆಂದು ಹೇಳಿದ್ದಾರೆ. ಹಾಗೂ ಭೂಮಿ ಇದ್ದೂ ಯಾರು ಅತಿಕ್ರಮಣ ಮಾಡಿದ್ದಾರೆ ಅವರಿಂದ ಆಕ್ರಮಣವಾದ ಜಮೀನನ್ನು ಬಿಡಿಸಬೇಕೆಂದು ಹೇಳಿದ್ದೆವು ಮತ್ತು ಯಾರು ೩೦೦ ಎಕರೆ ೪೦೦ ಎಕರೆ, ೧೦೦೦ ಎಕರೆ ಕಾಫಿ ತೋಟ ಇಟ್ಟು ಕೊಂಡಿದ್ದೂ ಅತಿಕ್ರಮಣ ಮಾಡಿದ್ದಾರೆ ಅವರಿಗೆ ಅದನ್ನು ಮಂಜೂರು ಮಾಡಬೇಕು ಎಂದು ಬಂದಾಗ ಅದು ಬೇಡ ಎಂದು ನಾವು ಹಟ ಮಾಡಿದಾಗ ಅದಕ್ಕೆ ನೀವೂ ಒಪ್ಪಿದಿರಿ. ಯಾರು ಕಾಫೀ ತೋಟ ಇದ್ದೂ ಸಹಾ ಅತಿಕ್ರಮಣ ಮಾಡಿದ್ದಾರೆ ಅವರಿಂದ ಹೆಚ್ಚು ಪೆನಾಲ್ಟಿ ತೆಗೆದುಕೊಳ್ಳುವುದೂ ಬೇಡ ಎಂದು ನಾವು ವಿರೋಧ ಮಾಡಿದ್ದೇವೆ. ಅದೇ ಖಾಯಂ ಆಗಿ ಯಾರೂ ಅಲ್ಲಿ ೨೦-೩೦ ವರ್ಷಗಳಿಂದ ಕೂಲಿ ಮಾಡು ತ್ತಿದ್ದಾರೆ, ಅವರಲ್ಲಿ ಯಾರು ಹರಿಜನಗಿರಿಜನರು, ಹಿಂದುಳಿದವರ್ಗದವರು, ಬಡವರು ಇದ್ದಾರೆ ಅವರಿಗೆ ಈ ೨ ಎಕರೆ, ೩ ಎಕರೆ ಜಾಗವನ್ನು ಏಕೆ ಕೊಡಬಾರದು ? ಆ ಅತಿಕ್ರಮಣ ಜಮೀನನ್ನು ಅವರಿಂದ ಪಡೆದುಕೊಂಡು ಇಂತಹವರಿಗೆ ಕೊಟ್ಟು ಅವರಿಂದ ಆ ಜಮೀನಿನ ಬಗ್ಗೆ ಎಷ್ಟು ಹಣ ನಿಗದಿ ಮಾಡುತ್ತೀರಿ ಅದನ್ನು ಪಡೆದುಕೊಳ್ಳಿ ಎಂದು ಹೇಳಿದ್ದೇನೆ. ಆಗ ಕೂಡ ಅವರಿಂದ ಬಿಡಿಸುವ ಬಗ್ಗೆ ಮಾನ್ಯ

ಮಂತ್ರಿಗಳು ಹೇಳಿದ್ದರು. ಆದರೆ ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳುವ ಪ್ರಕಾರ, ಇವತ್ತು ಪ್ಲಾಂಟರ್ಸ್‌ನಿಂದ ಬಿಡಿಸಿಕೊಂಡು ಮತ್ತೆ ಅವರಿಗೇ ಮಂಜೂರು ಮಾಡುವ ಅರ್ಥದಲ್ಲಿ ಹೇಳಿದ್ದಾರೆ. ಈ ಎರಡು ರೀತಿಯು ವಾದ ಒಳ್ಳೆಯದಲ್ಲ. ಆಗ ಮಾನ್ಯ ವಿ ಎಲ್. ಪಾಟೀಲರು ಒತ್ತುಡಕ್ಕೆ ಮಣಿದು ಆ ರೀತಿ ಉತ್ತರ ಕೊಟ್ಟಿದ್ದಾರೆಯೇ ? ಚುನಾವಣೆಗಿಂತಲೂ ಮೊದಲು ಇದನ್ನು ಹೇಳಿದ್ದುದು. ಈಗ ಚುನಾವಣೆ ಮುಗಿದಿದೆ. ಆದುದರಿಂದ ಪೆನಾಲ್ಟಿ ವಸೂಲಿ ಮಾಡಿ ಅವರಿಗೇ ಮಂಜೂರು ಮಾಡುವುದು ಒಂದು ಒಳ್ಳೆಯ ನೀತಿಯಾಗುವುದಿಲ್ಲ ಭೂಹೀನರ ಬಗ್ಗೆ ಮಾತನಾಡುವ ನೀವು ಅವರ ಬಗ್ಗೆ ಪ್ರತಿಪಾದನೆ ಮಾಡುವ ನೀವು ಅವರಿಗೆ ಅದನ್ನು ಹಂಚಿಕೆ ಮಾಡುವುದು ಒಳ್ಳೆಯದಲ್ಲವೇ ಎಂದು ನಾನು ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಈಗ ಅದು ಅಷ್ಟು ಸುಲಭವಲ್ಲ. ಈಗ ಒಂದು ಕಡೆ ದೊಡ್ಡ ಕಾಫಿ ಪ್ಲಾಂಟೇಷನ್ ಇರುತ್ತದೆ ಅದರ ಪಕ್ಕದಲ್ಲಿ ೨ ಅಥವಾ ೩ ಎಕರೆ ಜಾಗ ಇರುತ್ತದೆ. ಅದನ್ನು ಇವರು ಅತಿಕ್ರಮಣ ಮಾಡಿಕೊಂಡಿರುತ್ತಾರೆ. ಆದರೆ ಅದಕ್ಕೆ ಹೋಗುವುದಕ್ಕೆ ದಾರಿ ಎಲ್ಲಿ ? ಏನು ಹೆಲಿಕಾಪ್ಟರ್‌ನಲ್ಲಿ ಹೋಗಿ ಅಲ್ಲಿ ಇಳಿಯುವುದಕ್ಕಾಗುತ್ತದೆಯೇ ? ಇದನ್ನೆಲ್ಲಾ ನಾವು ವ್ಯವಹಾರಿಕವಾಗಿ ನೋಡಬೇಕಾಗುತ್ತದೆ. ಈ ೨–೩ ಎಕರೆಗೆ ಹೋಗುವುದಕ್ಕೆ ಪ್ರತ್ಯೇಕ ದಾರಿ ಬೇಕೋ ಬೇಡವೋ ? ಅಲ್ಲಿರುವ ಪ್ಲಾಂಟೇಷನ್ ಮುಖಾಂತರ ಹೋಗುವುದಕ್ಕೆ ಆಗುವುದಿಲ್ಲ. ಕಾರಣ ಅದು ಖಾಸಗೀ ಸ್ವತ್ತು. ಇಂಥ ಕೇಸ್‌ಗಳು ಏನಿವೆ ಎಂಬುದನ್ನು ನೋಡಿ ಸಕ್ರಮ ಮಾಡಬೇಕಾಗುತ್ತದೆ. ಯಾರು ದೊಡ್ಡದೊಡ್ಡ ಶ್ರೀಮಂತರು ಅತಿಕ್ರಮಣ ಮಾಡಿದ್ದಾರೆ ಅವರಿಗೇ ಕೊಟ್ಟು ಬಿಡಬೇಕೆಂದು ಹೇಳುವುದಿಲ್ಲ. ಆಯಾಯ ಪರಿಸ್ಥಿತಿಯನ್ನು ನೋಡಿಕೊಂಡು ಎಲ್ಲಿ ಸಾಧ್ಯವೋ ಅಲ್ಲಿ ಬಡವರಿಗೇ ಕೊಡೋಣ. ಈಗ ಅಸೆಸ್‌ಮೆಂಟ್ ನಡೆಯುತ್ತಿದೆ. ನಾವು ಒಂದು ತುಂಡು ಭೂಮಿಯನ್ನು ಇನ್ನು ಯಾರಿಗೂ ಕೊಟ್ಟಿಲ್ಲ. ಎಲ್ಲವನ್ನೂ ನೋಡಿ ನಂತರ ಅದನ್ನು ಯಾರು ಯಾರಿಗೆ ಕೊಡಬೇಕೋ ಅಂತಹವರಿಗೆ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಚಿಕ್ಕಮಗಳೂರು ಜಿಲ್ಲೆ ಇರಬಹುದು, ಸಕಲೇಶಪುರ ಇರಬಹುದು ಅಥವಾ ಕೊಡಗು ಇರಬಹುದು ಒಂದು ಪ್ಲಾಂಟೇಷನ್‌ಗೆ ಹೋಗತಕ್ಕ ದಾರಿಯಲ್ಲಿ ಒಂದು ಕಾಫೀ ತೋಟಕ್ಕೆ ಹೋಗತಕ್ಕ ದಾರಿಯಲ್ಲಿ ಸರ್ಕಾರಿ ಭೂಮಿ ಇದ್ದು ಅದಕ್ಕೆ ದಾರಿ ಇಲ್ಲದೇ ಇದ್ದರೆ ಅಂತಹ ಪಕ್ಷದಲ್ಲಿ ನೀವು ಅವರಿಗೆ ಮಂಜೂರು ಮಾಡಿ. ಆದರೆ ದಾರಿ ಇಲ್ಲ ಎಂಬ ಹೆಸರಿನಲ್ಲಿ ೫೦ ಎಕರೆ, ೨೦೦ ಎಕರೆ ಒಬ್ಬೊಬ್ಬರೇ ಪ್ಲಾಂಟೇಷನ್ ಹೋನರ್ಸ್ ಅತಿಕ್ರಮಣ ಮಾಡಿರತಕ್ಕ ದಾಖಲೆಗಳು ಈಗಾಗಲೇ ಇರುವುದು ಗೊತ್ತಿಗೆ. ಈ ದಾರಿಯ ಹೆಸರಿನಲ್ಲಿ ಕಾಫೀ ತೋಟದ ಮಾಲೀಕರಿಗೆ ದಾರಿಯ ಪಕ್ಕದಲ್ಲಿ ಇರುವ ಜಾಗವನ್ನು ಮಂಜೂರು ಮಾಡಿದರೆ ಒಳ್ಳೆಯದಾಗುವುದಿಲ್ಲ. ಇವತ್ತು ಬಡವರು ಯಾರಿದ್ದಾರೆ, ಕೂಲಿ ಮಾಡುವವರು ಯಾರಿದ್ದಾರೆ ಅವರು ಇಂಥ ಕೆಲಸವನ್ನು ಪ್ರತಿಭಟನೆ ಮಾಡಬೇಕಾಗುತ್ತದೆ. ಇವೊತ್ತು ಯಾರು ಅತಿಕ್ರಮಣ ಮಾಡಿದ್ದಾರೆ ಅವರಿಂದ ಅವನ್ನು ಬಿಡಿಸತಕ್ಕ ಶಕ್ತಿ ನಿಮಗೆ ಇದೆ. ಏಕೆಂದರೆ, ಅತಿಕ್ರಮಣ ಮಾಡಿದಂತಹ ಮನೆಗಳನ್ನು ಬುಲ್ಡೋಜರ್ ತಂದು ಉರುಳಿಸಿದಂತಹ ಸರ್ಕಾರ ನಿಮ್ಮದು. ಆದ್ದರಿಂದ ಇಂತಹ ಪ್ಲಾಂಟೇಷನ್‌ಗಳಿಂದ ಆ ಜಾಗವನ್ನು ಏಕೆ ಬಿಡಿಸುವುದಕ್ಕಾಗುವುದಿಲ್ಲ ? ಇಲ್ಲದಿದ್ದರೆ ಇವರಿಗೆ ಪೋಲೀಸರ ಬಳಕೆಯನ್ನು ಮಾಡುವುದಕ್ಕೆ ಬರುವುದಿಲ್ಲವೆಂಬ ಶಂಕೆ ಜನರಲ್ಲಿ ಬರುತ್ತದೆ. ಇವರನ್ನು ಬಿಡಿಸತಕ್ಕ ಕಾರ್ಯಕ್ರಮ ಹಾಕಿಕೊಂಡು, ಅದನ್ನು ಬಡವರಿಗೆ ಮಂಜೂರು ಮಾಡಿ.

ಶ್ರೀ ರಾಮಕೃಷ್ಣ ಹೆಗ್ಡೆ.—ವಿರೋಧ ಪಕ್ಷದ ನಾಯಕರನ್ನು ನಾನು ಕೇಳುತ್ತೇನೆ, ಅವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಎಷ್ಟು ಜನರಿಂದ ಈ ರೀತಿ ಬಿಡಿಸಿದ್ದಾರೆ ?

ಶ್ರೀ ಎಸ್. ಬಂಗಾರಪ್ಪ.—ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ..

ಶ್ರೀ ರಾಮಕೃಷ್ಣ ಹೆಗ್ಡೆ.—ಶ್ರೀಮಂತರಿಂದ ಎಷ್ಟು ಆಕ್ರಮಣವಾದ ಜಮೀನನ್ನು ಬಿಡಿಸಿದ್ದೀರಿ ?

ಶ್ರೀ ಎಸ್ ಬಂಗಾರಪ್ಪ.—ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ ೧೯೮೦–೮೧ ರಲ್ಲಿ ನಾನು ಅಧಿಕಾರದಿಂದ ಹೊರಬರುವುದಕ್ಕಿಂಥ ಮೊದಲು ಏನು ಮಾಡಿದೆ ಎಂಬುದು ರೆಕಾರ್ಡ್‌ನಲ್ಲಿ ಇದೆ. ಅದನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ತೆಗೆದುನೋಡಲಿ. ಒಂದೊಂದು ಗ್ರಾಮದಲ್ಲಿ ಒಂದೊಂದು ಯೂನಿಟ್‌ನ್ನು ತೆಗೆದುಕೊಂಡು ಸರ್ವೇ ಮಾಡಬೇಕೆಂದು ಎಷ್ಟು ಜನ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿದ್ದಾರೆ ಎಂಬುದರ ಬಗ್ಗೆ ನೋಡಬೇಕೆಂದು ಹೇಳಿದ್ದೆ. ಹಾಗೂ ಆ ಬಗ್ಗೆ ರೆಕಾರ್ಡ್

ನಲ್ಲಿ ಬರೆಯುವಾಗ ಯಾರು ಕೂಲಿ ಮಾಡುತ್ತಿದ್ದಾರೆ ಯಾರು ಕಷ್ಟದಲ್ಲಿದ್ದಾರೆ ಅವರಿಗೆ ಈ ಒತ್ತುವರಿ ಜಮೀನನ್ನು ಕಾಫೀ ಪ್ಲಾಂಟರ್ಸ್‌ನಿಂದ ಬಿಡಿಸಿ ಇವರಿಗೆ ಮಂಜೂರು ಮಾಡಬೇಕೆಂದು ಹೇಳಿದ್ದೇನೆ. ನಾನು ಸಚಿವನಾಗಿದ್ದಾಗ ಇದನ್ನು ಬರೆದಿದ್ದೇನೆ. ಉದಾಹರಣೆಗೆ ಒಂದು ಗ್ರಾಮದಲ್ಲಿ ೭೦೦-೮೦೦ ಎಕರೆ ಅತಿಕ್ರಮಣ ಮಾಡಿದ ಜಮೀನು ಸಿಗಬಹುದು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಗ ಸ್ಪೆಷಲ್ ಡೆಪ್ಯುಟಿ ಕಮೀಷನರ್ ಆಗಿದ್ದ ಹನುಮಂತರಾಜು ಅವರಿಗೂ ಕೂಡಾ ಅಂತಹ ಅತಿಕ್ರಮಣ ಜಾಗದಿಂದ ಅವರನ್ನು ಬಿಡಿಸಬೇಕೆಂಬ ವಿಚಾರವನ್ನು ಹೇಳಿದ್ದೆ. ಹಾಗೂ ಬಡವರಿಗೆ ಅದು ಮಂಜೂರು ಆಗಬೇಕೆಂದು ಆದೇಶವನ್ನು ವಿಶೇಷ ಜಿಲ್ಲಾಧಿಕಾರಿಗಳವರಿಗೆ ಕೊಟ್ಟಿದ್ದೆ. ನಾನು ಕೆಲಸ ಪ್ರಾರಂಭ ಮಾಡಿಸಿದ ಮೇಲೆ ಕೆಲವೊಂದು ಕಾರಣಗಳಿಂದ ರಾಜೀನಾಮೆ ಕೊಟ್ಟು ಹೊರಬಂದೆ. ಆದ್ದರಿಂದ ಈ ಒಂದು ನೀತಿಯನ್ನು ನಾನು ಪದೇಪದೇ ಇಲ್ಲಿ ಪ್ರತಿಪಾದನೆ ಮಾಡುತ್ತಿದ್ದೇನೆ. ನಾನು ಮಂತ್ರಿಯಾಗಿದ್ದಾಗ ಎಷ್ಟು ಜನರಿಂದ ಬಿಡಿಸಿದೆ ಎಂಬ ಪ್ರಶ್ನೆಯನ್ನು ಅವರು ನನಗೆ ಕೇಳುವುದು ಬೇಡ. ನಾನು ಏನೇನು ಒಳ್ಳೆಯದನ್ನು ಮಾಡಬೇಕೆಂದಿದ್ದೆ ಅದು ನನಗೆ ಗೊತ್ತಿದೆ. ನಾನು ಏನು ಬಡವರಿಗೆ ಒಳ್ಳೆಯದನ್ನು ಮಾಡಿದೆ ಅದನ್ನು ತಾವೂ ಮುಂದುವರಿಸುತ್ತೀರೆಂದು ನಾನು ನಂಬಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಭೂಮಿಯನ್ನು ಸಾಗುವಳಿ ಮಾಡತಕ್ಕ ಬಗ್ಗೆ ವಿಶಿಷ್ಟ ಸಮಸ್ಯೆ ಇದೆ. ಅಲ್ಲಿ ವಿದ್ಯುತ್ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಮುಳುಗಡೆ ಆದ ರೈತರಿಗೆ ಬೇರೆ ಭೂಮಿ ಒದಗಿಸಿ ಕೊಡಲು ಒಂದು ಹೈ ಪವರ್ ಕಮಿಟಿ ಇತ್ತು. ಅದರಲ್ಲಿ ಅರಣ್ಯ ಇಲಾಖೆಯ ರೆವಿನ್ಯೂ ಇಲಾಖೆಯ ಹಾಗೂ ಲೋಕೋಪಯೋಗಿ ಇಲಾಖೆಯ ಪ್ರತಿನಿಧಿಗಳು ಇದ್ದರು. ಆಗ ಸ್ಥಳಾಂತರವನ್ನು ತುರ್ತಾಗಿ ಮಾಡಬೇಕಾಗಿದ್ದುದರಿಂದ ಈ ಸಮಿತಿಯ ತೀರ್ಮಾನದ ಪ್ರಕಾರ ಜಾಗ ತೋರಿಸಿ ಅರಣ್ಯ ಭೂಮಿಯನ್ನು ಅವರಿಗೆ ತೋರಿಸಿ ನಿಮ್ಮ ಅಧಿಕಾರಿಗಳು ಅವರನ್ನು ಅಲ್ಲಿ ತಂದು ಕೂಡಿಸಿದ್ದಾರೆ. ಇಲ್ಲಿ ನೀವು ಸಾಗುವಳಿ ಮಾಡಿ, ಮನೆ ಕಟ್ಟಿ ಇದನ್ನು ಮಂಜೂರು ಮಾಡುತ್ತೇವೆನ್ನುವ ಭರವಸೆಯನ್ನು ಅವರು ಕೊಟ್ಟಮೇಲೆ ಅವರು ಅಲ್ಲಿ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಆದರೆ ಕಾಲಾನಂತರ ಏನಾಯಿತು ಎಂದರೆ, ಧಾಖಲೆಗಳನ್ನು ಸಂಪಡಿಸದೇ ಮುಂದೆ ಬಂದ ಅಧಿಕಾರಿಗಳು ಈ ಬಗ್ಗೆ ಗಮನವನ್ನು ಕೊಡದೇ ಇದ್ದುದರಿಂದ ಈಗಿರತಕ್ಕ ಅಧಿಕಾರಿಗಳ ದೃಷ್ಟಿಯಲ್ಲಿ ಇವರೆಲ್ಲಾ ಅಕ್ರಮ ಸಾಗುವಳಿದಾರರೆಂದು ಹೇಳಿ ಇವರನ್ನೆಲ್ಲಾ ಉಚ್ಚಾಟನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಕಳೆದ ಹತ್ತಾರು ವರ್ಷಗಳಿಂದ ಈ ಜಾಗ ತಮಗೇ ಮಂಜೂರಾಗುತ್ತದೆಂದು ನಂಬಿ ವಾಸ ಮಾಡುತ್ತಿದ್ದವರನ್ನು ಉಚ್ಚಾಟನೆ ಮಾಡುವಂತಹ ವಿಶಿಷ್ಟ ಪರಿಸ್ಥಿತಿ ಶಿವಮೊಗ್ಗ ಜಿಲ್ಲೆಯಲ್ಲಿ ತಲೆದೋರಿದೆ. ಈ ಸಮಸ್ಯೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಗಮನಹರಿಸುತ್ತೇವೆ. ವರಾಹಿ ಮತ್ತು ಶರಾವತಿ ಯೋಜನೆಯ ಅಡಿಯಲ್ಲಿ ಯಾವ ಯಾವ ಪ್ರದೇಶಗಳು ಮುಳುಗಡೆಯಾಗಿವೆ ಅಲ್ಲಿಯ ಜನರಿಗೆ ಅನುಕೂಲಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ ಶಿವಮೊಗ್ಗಾದಲ್ಲಿ ೨-೩ ಸಾರಿ ಸಭೆಗಳನ್ನು ಮಾಡಿಸಿದ್ದೇವೆ. ಆಗ ಮಾನ್ಯ ಚಂದ್ರೇಗೌಡರು ಇದರಲ್ಲಿ ಬಹಳ ಆಸ್ಥೆಯನ್ನು ವಹಿಸಿದ್ದರು. ಅಲ್ಲಿಯ ಜನರೆಲ್ಲರಿಗೂ ತೃಪ್ತಿಕರವಾದ ರೀತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿದ್ದೇವೆ. ಹಿಂದಿನ ಯಾವ ಸರ್ಕಾರದಲ್ಲೂ ಇಷ್ಟರಮಟ್ಟಿಗೆ ಅನುಕೂಲಗಳನ್ನು ಒದಗಿಸಿಕೊಟ್ಟಿರಲಿಲ್ಲವೆಂದು ಅವರು ಬಹಳ ಸಂತೋಷದಿಂದ ಹೇಳಿದಾರೆ.

ಶ್ರೀ ಎಸ್. ಬಂಗಾರಪ್ಪ.—ಅಂತಿಮವಾದ ತೀರ್ಮಾನವಾಗುವವರೆಗೆ ಅಲ್ಲಿರುವ ಯಾವ ಜನರನ್ನೂ ಬಿಡಿಸುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಸೂಕ್ತ ಗಮನಹರಿಸುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಆಶ್ವಾಸನೆಯನ್ನು ತಾವು ಕೊಟ್ಟಿದ್ದೀರಿ....

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅದರ ಬಗ್ಗೆ ಗಮನ ಹರಿಸುತ್ತೇವೆ, ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಕೇಳಿದ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ನೀವು ಮತ್ತೆ ಅವರ ಪ್ರಶ್ನೆಯನ್ನೇ ಏತಕ್ಕೆ ಕೇಳುತ್ತಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಸ್ಪಷ್ಟ ವಿವರಣೆ ಬೇಕು. ಹಾಗಾದರೆ ಅವರು ಕೇಳಿದ ಪ್ರಶ್ನೆಯನ್ನು ನಾವು ಕೇಳಬಾರದೆ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಪ್ರಶ್ನೆ ಕೇಳಿದ್ದರು, ಉತ್ತರ ಹೇಳಿದ್ದೇನೆ. ನಿಮಗೆ ಉತ್ತರ ಬೇಕಾದರೆ ಬೇರೆ ಪ್ರಶ್ನೆಯನ್ನು ಕೇಳಿ. ಎಲ್ಲಾ ಕೇಸುಗಳನ್ನೂ ಒಂದೇರೀತಿ ಪರಿಗಣಿಸುವುದಕ್ಕಾಗವುದಿಲ್ಲ. ಯಾವ ಯಾವ ಕೇಸು ಯಾವ ಯಾವ ರೀತಿ ಇದೆ ಎಂಬುದನ್ನು ಪರಿಶೀಲಿಸಿ ನೋಡಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ತೊಂದರೆಗೊಳಗಾದ ಜನರಿಗೆ ಅವರು ಮಾಡುತ್ತಿರುವ ಜಮೀನನ್ನು ಅವರಿಗೇ ಕೊಡಿಸುತ್ತೇನೆ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದೊಂದೇ ಕೇಸ್ ಅಲ್ಲ. ನಿಮ್ಮ ಅಧಿಕಾರಿಗಳು ಆ ಬಡ ಜನರನ್ನು "ನಿಮ್ಮ ದಾಖಲೆ ಎಲ್ಲಿ" ! ಎಂದು ಕೇಳುತ್ತಿದ್ದಾರೆ. ಅವರಲ್ಲಿ ಯಾವುದೇ ದಾಖಲೆಗಳೂ ಇಲ್ಲ. ಏಕೆಂದರೆ ಅಧಿಕಾರಿಗಳೇ ಅವರನ್ನು ಅಲ್ಲಿ ಕರೆದು ಕೊಂಡು ಹೋಗಿ ಕೂಡಿಸಿದ್ದಾರೆ. ಅವೊತ್ತು ಅವರಿಗೆ ಯಾವುದೇ ದಾಖಲೆಯನ್ನೂ ಕೊಟ್ಟಿಲ್ಲ. ಇವೊತ್ತು ನೀವು ದಾಖಲೆಯನ್ನು ಕೊಡದಿದ್ದರೆ ನಿಮ್ಮನ್ನು ಉಚ್ಚಾಟನೆ ಮಾಡುತ್ತೇವೆಂದು ಮಾಡುತ್ತಿದ್ದಾರೆ. ಆದ್ದರಿಂದ ಆ ಜನರನ್ನು ಅಲ್ಲಿಂದ ಉಚ್ಚಾಟನೆ ಮಾಡುವುದಿಲ್ಲವೆಂದು ತಾವು ಸ್ಪಷ್ಟವಾದ ಭರವಸೆಯನ್ನು ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೆ. ಆದರೆ ನನ್ನ ತಿಳುವಳಿಕೆ ವ್ಯತಾಸವಾಗುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ರೆವಿನ್ಯೂ ಸಚಿವರಿಂದ ಮಾಹಿತಿಯನ್ನು ತರಿಸಿಕೊಂಡು ನೋಡುತ್ತೇನೆ ತಾವು ಹೇಳುವ ರೀತಿಯಲ್ಲಿ ವರಾಹಿ ಮತ್ತು, ಶರಾವತಿ ಯೋಜನೆಗಳ ಅಡಿಯಲ್ಲಿ ಮುಳುಗಡೆಯಾದ ಪ್ರದೇಶದ ಜನರು ಯಾರಿದ್ದಾರೆ ಅವರೇ ಅಕ್ರಮವಾಗಿ ಈ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದರೆ ಅವರನ್ನು ಬಿಡಿಸುವುದಿಲ್ಲ.

ಶ್ರೀ ಎನ್. ಟಿ. ಬೊಮ್ಮಣ್ಣ.—ಸ್ವಾಮಿ, ಕೂಡ್ಲಿಗಿ ತಾಲ್ಲೂಕಿನಲ್ಲಿ ಪ್ರತಿವರ್ಷವೂ ಕೂಡ ಮಳೆಗಾಲದಲ್ಲಿ ಮಳೆ ಬಾರದೆ ಅಲ್ಲಿನ ಜನ ಜಾನುವಾರುಗಳಿಗೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತಿದೆ...

ಅಧ್ಯಕ್ಷರು.—ತಾವು ಸೂಕ್ಷ್ಮವಾಗಿ ಕೇಳಿ. ಅದುಬಿಟ್ಟು ಉದ್ದನೆಯ ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎನ್. ಟಿ. ಬೊಮ್ಮಣ್ಣ.—ಸ್ವಾಮಿ, ಸುಮಾರು ೮-೧೦ ಸಾವಿರ ಜನರು ಪ್ರತಿವರ್ಷವೂ ತಿನ್ನಲು ಅನ್ನವಿಲ್ಲದೆ, ಕುಡಿಯಲು ನೀರಿಲ್ಲದೆ ಬೇರೆ ದೂರದ ಊರುಗಳಿಗೆ ವಲಸೆ ಹೋಗಿ ಜೀವನ ಮಾಡಿಕೊಂಡು ಆ ಮೇಲೆ ಬರುತ್ತಿದ್ದಾರೆ. ಅಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗೆ ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ದಯವಿಟ್ಟು ಹೇಳಬೇಕು. ಅಲ್ಲದೆ ನಮ್ಮ ತಾಲ್ಲೂಕಿನಲ್ಲಿರುವ ಆಸ್ಪತ್ರೆಯಲ್ಲಿ ರೋಗಿಗಳಿಗೆ ಬೇಕಾದ ಔಷಧಿಗಳಾಗಲಿ, ವೈದ್ಯರಾಗಲಿ ಇಲ್ಲ....

ಅಧ್ಯಕ್ಷರು,—ಮತ್ತೆ ದೊಡ್ಡ ಭಾಷಣವನ್ನೆ ಮಾಡುತ್ತಿದ್ದೀರಿ.. ಬಂಗಾರಪ್ಪನವರೇ ಸಮಯ ಬಹಳ ಕಡಿಮೆ ಇರುವುದರಿಂದ ತಮ್ಮ ಪಕ್ಷದ ಸದಸ್ಯರಿಗೆ ಹೇಳಿ ಅವರನ್ನು ಕೂಡಿಸಬೇಕು.

ಶ್ರೀ ಬಿ. ರಾಚಯ್ಯ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಯಾರು ಯಾರು ಭಾಷಣ ಮಾಡಿದ್ದು, ತಮ್ಮ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿಲ್ಲದಿದ ರೆ ಅಂಥವರು ಕೇವಲ ಒಂದೆರಡು ವಿವರಣೆಗಳನ್ನು ಕೇಳಿ ಮುಖ್ಯ ಮಂತ್ರಿಯವರಿಂದ ಉತ್ತರವನು ನಿರೀಕ್ಷಣೆ ಮಾಡಬಹುದು. ಆದರೆ ಭಾಷಣ ಮಾಡಿದವರಿಗಿಂತಲೂ ಕ್ಲಾರಿಫಿಕೇಷನ್ ಕೇಳುವ ಸದಸ್ಯರ ಸಂಖ್ಯೆಯೇ ಜಾಸ್ತಿಯಾಗಿದೆ. ಇದರಿಂದಾಗಿ ಸಭೆಯ ಇತರೆ ಕಾರ್ಯಕಲಾಪಗಳನ್ನು ನಡೆಸಲು ತುಂಬಾ ಕಷ್ಟವಾಗುತ್ತದೆ.

ಅಧ್ಯಕ್ಷರು,— ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ

ಶ್ರೀ ಕೆ. ಬಿ. ತಾಣಪ್ಪ.— ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರ ಕೊಡಬೇಕು,

ಅಧ್ಯಕ್ಷರು.--ದಯವಿಟ್ಟು ತಾವು ಕೂಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.-- ಮಾನ್ಯ ಅಧ್ಯಕ್ಷರೇ ನಮ್ಮ ಪಕ್ಷದ ಎಲ್ಲಾ ಮಾನ್ಯ ಸದಸ್ಯರೂ ಕೂಡ ಇಲ್ಲಿ ಭಾಷಣ ಮಾಡಲು ಕಾಲಾವಕಾಶ ಸಿಕ್ಕದೇ ಹೋದುದರಿಂದ ಅಂಥವರು ಕ್ಲಾರೀಫಿಕೇಷನ್‌ನ್ನು ಕೇಳುವುದಕ್ಕಾದರೂ ತಾವು ಅವಕಾಶವನ್ನು ಮಾಡಿ ಕೊಡಬೇಕು. ತಾವು ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಆದರೂ ಅದೂ ಸಾಲದೇ ಇದ್ದುದರಿಂದ ಕ್ಲಾರೀಫಿಕೇಷನ್ ಕೇಳುತ್ತಿದ್ದಾರೆ.

ಅಧ್ಯಕ್ಷರು.-- ಹೊಸ ಸದಸ್ಯರಿಗೂ ನಾವು ಅವಕಾಶವನ್ನು ಕೊಟ್ಟಿದೇವೆ. ಇಲ್ಲಿ ಯಾವರೀತಿ ಸಭೆಯನ್ನು ನಡೆಸಬೇಕೆಂದು ನನಗೆ ಅರಿವಿದೆ. ಈಗ ಕಾಲಾವಕಾಶ ಇಲ್ಲದಿರುವುದರಿಂದ ನಾನು ಏನು ಮಾಡಬೇಕೆಂಬ ಬಗ್ಗೆ ತಾವು ಸಲಹೆ ಕೂಡಿ.

ಶ್ರೀ ಎಸ್. ಬಂಗಾರಪ್ಪ.-- ಸ್ವಾಮಿ, ತಮ್ಮ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ಎಲ್ಲ ಸದಸ್ಯರೂ ಆ ಒಂದು ಗೌರವ ಭಾವನೆಯನ್ನು ಹೊಂದಿದ್ದಾರೆ. ಮಾತನಾಡಲು ಅವಕಾಶ ಸಿಕ್ಕದಿರುವ ಸದಸ್ಯರು ಮಾತ್ರ ಕ್ಲಾರಿಫಿಕೇಷನ್ ಕೇಳುತ್ತಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ.-- ಸ್ವಾಮಿ, ಗಂಟ್ಲಗ್ರಾಮದ ಸರ್ವೆ ನಂ. ೭೦ರಲ್ಲಿ ಸುಮಾರು ೩೦೦ ಎಕರೆ ಜಮೀನನ್ನು ಬಡ ರೈತರು ಕಳೆದ ೧೫-೨೦ ವರ್ಷಗಳಿಂದಲೂ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಈಗ ಆ ಪ್ರದೇಶವನ್ನು ಅರಣ್ಯ ಇಲಾಖೆಯವರೂ ಇದು ಅರಣ್ಯ ಭೂಮಿ ಎಂದು ಘೋಷಣೆ ಮಾಡಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ಪರಿಶೀಲಿಸಿ ಆ ಜನರಿಗೇ ಅವರು ಮಾಡುತ್ತಿರುವ ಜಮೀನನ್ನು ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಡೆ.-- ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ಸೂಕ್ತ ಗಮನ ಹರಿಸುತ್ತಾರೆ.

(ಗೊಂದಲ)

ಅಧ್ಯಕ್ಷರು.--ಮಾನ್ಯ ಬಂಗಾರಪ್ಪನವರೇ, ತಾವು ವಿರೋಧ ಪಕ್ಷದ ನಾಯಕರು. ನಿಮ್ಮ ಎಲ್ಲಾ ಸದಸ್ಯರ ಪರವಾಗಿ ವಿವರಣೆಯನ್ನು ಕೂಡಿ.

ಶ್ರೀ ಬಿ. ಹೆಚ್. ಯಂಕನಾಯಕ್.-- ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಕುಡಿಯಲು ನೀರಿಲ್ಲ ಎನ್ನುವ ಬಗ್ಗೆ ಕಳೆದ ೨೮-೯ರಂದು ಜನರು ಉಪವಾಸ ಸತ್ಯಾಗ್ರಹ ಕುಳಿತಿದ್ದಾಗ ಮಾನ್ಯ ಸಚಿವರು ಬಂದು ನಾಳೆ, ನಾಡಿದ್ದರಲ್ಲಿ ಅಲ್ಲಿ ರಿಗ್ ಹಾಕಿಸುತ್ತೇನೆಂದು ಹೇಳಿದ್ದರು. ಆದರೆ ಇವತ್ತಿನವರೆಗೂ ಹಾಕಿಸಲಿಲ್ಲ. ಈಗಲಾದರೂ ನನ್ನ ಕ್ಷೇತ್ರದ ಜನರಿಗೆ ಕುಡಿಯಲು ನೀರನ್ನು ಕೊಡುತ್ತೀರೋ, ಇಲ್ಲವೋ ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಇನ್ನೊಂದು ವಿಚಾರ ಎಂದರೆ ವಿಧಾನ ಸಭಾ ಚುನಾವಣೆ ಡಿಕ್ಲೇರ್ ಆದಮೇಲೆ ೬ನೇ ತಾರೀಖು ಕಂಬತ್ತನಹಳ್ಳಿಯಲ್ಲಿ ಒಂದು ಗಲಾಟೆ ಆಯಿತು. ಆ ಗಲಾಟೆಗೆ ಸಂಬಂಧಪಟ್ಟಂತೆ ಇಬ್ಬರು ಉಪಾಧ್ಯಾಯರನ್ನು ಪೋಲೀಸರು ತಂದು ಬಂಧನದಲ್ಲಿ ಇಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಈ ಸದನದ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ಮಾಡಿ ತನಿಖೆ ನಡೆಸಿ ಅವರನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.-- ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ರಾಚಯ್ಯ .-- ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರು ಕಂಬತ್ತನಹಳ್ಳಿಯಲ್ಲಿ ನಡೆದ ಗಲಾಟೆಯ ಬಗ್ಗೆ ಹೇಳಿದ್ದಾರೆ. ಅದು ಕೊಲೆಗೆ ಸಂಬಂಧಪಟ್ಟ ವಿಷಯ. ಅಲ್ಲಿ ಇಬ್ಬರು ಹರಿಜನರ ಕೊಲೆ ಅಮಾನುಷವಾದ ರೀತಿಯಲ್ಲಿ ನಡೆದಿದೆ. ಈ ಸಂಬಂಧದಲ್ಲಿ ೩೭ ಜನರನ್ನು ಅರೆಸ್ಟ್ ಮಾಡಿದ್ದಾರೆ. ಇವರ ಅನುಯಾಯಿಗಳು ಎನ್ನುವವರು ಆ ಪ್ರಕರಣದಲ್ಲಿ ಸೇರಿದ್ದಾರೆ. ಆದ್ದರಿಂದ ಈ ಸದನದ ಸದಸ್ಯರಿಂದ ಕೂಡಿದ ಸಮಿತಿಯನ್ನು ರಚಿಸಿ ತನಿಖೆ ನಡೆಸಿ ಅವರನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ.

ಶ್ರೀ ಬಿ. ಹೆಚ್. ಯಂಕಾನಾಯಕ್.-- ಸ್ವಾಮಿ. ಆ ಜನರು ನಮ್ಮ ಅನುಯಾಯಿಗಳು ಎಂದು ಹೇಳುತ್ತಿರುವುದು ಸರಿಯಲ್ಲ. ಆ ಮಾತನ್ನು ರೆಕಾರ್ಡ್‌ನಿಂದ ತೆಗೆಸಿ.

ಶ್ರೀ ಬಿ. ರಾಚಯ್ಯ.-- ಅವರು ನಿಮ್ಮ ಅನುಯಾಯಿಗಳೆಂದು ನಾನು ಹೇಳಿದ್ದೇನೆ. ಅವರ ತನಿಖೆ ನಡೆಸಿದರೆ ತಾನೇ ತಾನಾಗಿ ವಾಸ್ತವಾಂಶ ಹೊರಗೆ ಬರುತ್ತದೆ.

(ಗೊಂದಲ)

ಶ್ರೀ ಬಿ. ರಾಚಯ್ಯ.-- ಶಾಸಕರೇ ಕೊಲೆ ಮಾಡಿದ್ದರೂ ಬಿಡುವುದಿಲ್ಲ.

ಅಧ್ಯಕ್ಷರು.-- ಅನುಯಾಯಿಗಳು ಏನು ಹೇಳಿದ್ದೀರಿ. ಅದು ಬೇಡ.

ಶ್ರೀ ಬಿ. ರಾಚಯ್ಯ.-- ಅಲ್ಲಿ ಹರಿಜನರ ಕೊಲೆ ಅಮಾನುಷವಾಗಿ ನಡೆದಿದ್ದು ಅದಕ್ಕೆ ಸಂಬಂಧಪಟ್ಟಂತೆ ಅರೆಸ್ಟ್ ಆಗಿರುವವರ ಪೈಕಿ ಇವರ ಅನುಯಾಯಿಗಳು ಇದ್ದಾರೆ ಎಂದು ನಾನು ಹೇಳಿದ್ದೇನೆ. ಕೇಸು ದಾಖಲಾಗಿರುವ ವಿಚಾರವನ್ನು ಅವರು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.-- (ಸೊರಬ) .-- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಪ್ರಾರಂಭ ಮಾಡುವಾಗ ನಾನು ಇರಲಿಲ್ಲ. ತಡವಾಗಿ ಬಂದುದಕ್ಕಾಗಿ ಕ್ಷಮೆ ಬೇಕು. ಕೇಂದ್ರ ಸರ್ಕಾರದ ವಿಚಾರದಲ್ಲಿ ಮಾತನಾಡುತ್ತಾ, ಶ್ರೀಮಾನ್ ಸಾಠೆ ಅವರು ಪಾರ್ಲಿಮೆಂಟ್‌ನಲ್ಲಿ ನಾವು ವಿದ್ಯುಚ್ಛಕ್ತಿಯನ್ನು ಕೊಟ್ಟರೆ ಅವರು ಸ್ಟೀಲ್ ಪ್ಲಾಂಟ್ ಕೊಡುವುದಕ್ಕೆ ತಯಾರಾಗಿದ್ದೇವೆಂದು ಒಂದು ಹೊಸ ವಿಚಾರವನ್ನು ಹೇಳಿರತಕ್ಕಂಥದ್ದು ನಿಜ. ಉಕ್ಕಿನ ಕಾರ್ಖಾನೆಯ ವಿಚಾರವನ್ನು ಶ್ರೀಮಾನ್ ಸಾಠೆಯವರು ಪಾರ್ಲಿಮೆಂಟ್‌ನಲ್ಲಿ ಎತ್ತಿದಾಗ ನಾನೂ ಕೂಡ ದೆಹಲಿಯಲ್ಲಿಯೇ ಇದ್ದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಪವರ್ ಕೊಡುತ್ತೇವೆ. ಎನ್ನುವ ಮಾತನ್ನು ಹೇಳಿದ್ದಾರೆ. ಅದರಂತೆ ಪ್ರೈಮ್‌ಮಿನಿಸ್ಟರ್ ಅವರಿಗೂ ಕೂಡ ಪತ್ರ ಬರೆದು ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನೂ ಕೂಡ ಈ ಸಂದರ್ಭದಲ್ಲಿ ಭಾವಿಸುತ್ತೇನೆ. ಏತಕ್ಕೆಂದರೆ ನಿಮಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನಮಗೂ ಕೂಡ ಈ ವಿಚಾರದಲ್ಲಿ ಇದೆ. ಬಾಕಿ ವಿಚಾರಗಳನ್ನು ಕೇಂದ್ರ ಸರ್ಕಾರದವರು ಕೈ ಬಿಟ್ಟರತಕ್ಕಂಥದ್ದು ಬಹಳ ಸಂತೋಷದ ವಿಚಾರ. ಪ್ರಶ್ನೋತ್ತರ ಕಾಲದಲ್ಲಿ ಬಾಕಿ ವಿಚಾರಗಳನ್ನು ಮರೆತು ಪವರ್ ವಿಚಾರವನ್ನು ಮಾತ್ರ ಸೀಮಿತಮಾಡಿ ಉತ್ತರವನ್ನು ಕೊಟ್ಟಿರುವುದಕ್ಕೆ ನಾನು ಅವರಿಗೆ ಅಭಿನಂದಿಸುತ್ತೇನೆ.

ಮತ್ತೆ ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರದ ವಿಚಾರದಲ್ಲಿ ನಾವು ನೀವು ಹೇಳಿಕೆಯನ್ನು ಕೊಟ್ಟಿರತಕ್ಕದ್ದನ್ನು, ಓದಿರತಕ್ಕಂಥದ್ದು ಬರೇವಿರೋಧ ಪಕ್ಷದವರು ಭಾಷಣಮಾಡಿರತಕ್ಕಂಥದ್ದು ಮಾನ್ಯಸದಸ್ಯರು ಎಲ್ಲರೂ ಓದಿರತಕ್ಕಂಥದ್ದು, ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯವರು ಬರೆದಿರತಕ್ಕಂಥದ್ದನ್ನು ಎಲ್ಲರೂ ಓದಿರಬಹುದು. ಅವರು ಏನು ಬರೆದಿರುತ್ತಾರೆ ಅದಕ್ಕೆ ನಾನು ತುಂಬ ಗೌರವ ಕೊಡುತ್ತೇನೆ. ಅದರಲ್ಲಿ ಬಹಳಷ್ಟು ಅಡ್ವೈಸ್ ಮಾಡಿರುತ್ತಾರೆ. ಎಲ್ಲ ರಾಜಕಾರಣಿಗಳಿಗೂ ಹೇಳಿರುತ್ತಾರೆ. ತಾವು ಓದಬೇಕು ನಾವು ಮಾನ್ಯ ಸದಸ್ಯರು ಆ ಅಡ್ವೈಸ್‌ನ್ನು ಗಮನದಲ್ಲಿಟ್ಟುಕೊಳ್ಳಬೇಕೆಂಬುದು ನನ್ನ ಸಲಹೆ. ನಮ್ಮ ಅಭಿಪ್ರಾಯದ ಪ್ರಕಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಚೆನ್ನಾಗಿ ಇರಬೇಕು.' ಈಬಂದು ದಿಸೆಯಲ್ಲಿ ಏನು ಚಿಂತನೆ ಮಾಡಿದಂತೆ ಕಾಣುತ್ತಿಲ್ಲ. ಇನ್ನು ಮೇಲಾದರೂ ಒಳ್ಳೆಯ ರೀತಿಯಲ್ಲಿ ಚಿಂತನೆ ಮಾಡುತ್ತಾರೆಂದು ನಾವು ನಿರೀಕ್ಷಣೆ ಮಾಡುತ್ತೇವೆ. ಇದರ ಬಗ್ಗೆ ಹೆಚ್ಚಿಗೆ ಮಾತನಾಡಿ ವಿವರಣೆಯನ್ನು ಕೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಭದ್ರಾವತಿ ಉಕ್ಕಿನ ಕಾರ್ಖಾನೆಯ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಹಿಂದೆಯೂ ಕೂಡ ಹೇಳಿದ್ದಾರೆ. ಹಿಂದೆ ಭದ್ರಾವತಿ ಕಾರ್ಖಾನೆಯ ಬಗ್ಗೆ ಬೇಕಾದಷ್ಟು ಸಾರಿ ಲೇಬರ್, ಪ್ರಾಬ್ಲಮ್ ಬಂದಿರಬಹುದು. ಮತ್ತೆ ಅಲೈಡ್ ಸ್ಟೀಲ್, ಮೆದು ಸ್ಟೀಲ್ ಬಗ್ಗೆಯೂ ಚರ್ಚೆಯಾಗಿ ಅಲ್ಲಿ ಬಾರಿ ನಷ್ಟವಾಗುತ್ತಿರುವುದಕ್ಕೆ ಹಲವಾರು ಕಾರಣಗಳ ಜೊತೆಗೆ ವಿದ್ಯುಚ್ಛಕ್ತಿಯ ಕೊರತೆಯೂ ಕಾರಣವಾಗಿರುತ್ತದೆಂದು ಹಿಂದೆ ಎಲ್ಲಾ ಚರ್ಚೆಯಾಗಿದೆ. ಹೀಗಿದಾಗ್ಯೂ ಈ ಕಾರ್ಖಾನೆಯು ಲಾಭಗಳಿಸಿರತಕ್ಕಂಥದ್ದನ್ನು ಮರೆಯುವಂತಿಲ್ಲ. ಆದರೆ ಇವತ್ತು ನಷ್ಟ ಉಂಟಾಗುತ್ತಿರುವುದಕ್ಕೆ ಏನೇ ಕಾರಣವಿದ್ದರೂ ಟೋಟಲ್ ಷೇರಿನಲ್ಲಿ ಸ್ಟೀಲ್ ಪ್ಲಾಂಟ್ ಆಫ್ ಇಂಡಿಯಾದವರ ಮುಖಾಂತರ ೪೮ ಪರ್ಸೆಂಟ್ ಇಟ್ಟುಕೊಂಡಿದ್ದಾರೆ, ೫೨ ಪರ್ಸೆಂಟ್ ನಮ್ಮ ಸರ್ಕಾರದ್ದು ಇರತಕ್ಕಂಥದ್ದು ದಾಖಲೆ ಪ್ರಕಾರ ಇರುತ್ತಿದೆ. ಇದರಿಂದ ಆದಾಯವನ್ನು ಅನೇಕ ವರ್ಷಗಳಿಂದ ಪಡೆದಿರತಕ್ಕಂಥದ್ದನ್ನು ಮರೆಯುವಂತಿಲ್ಲ. ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರಿಗೆ ಕಳಂಕ ತರತಕ್ಕಂಥ ತೀರ್ಮಾನವನ್ನು ಈಗ ಏನು ಕೈಗೊಂಡಿರುತ್ತೀರಿ ಅದನ್ನು ಕೈಬಿಡ

ಬೇಕೆಂದು ನಾನು ಹೇಳುತ್ತೇನೆ. ೧೯೮೪ನೇ ಇಸವಿಯಲ್ಲಿ ಏನು ನೀವು ತೀರ್ಮಾನವನ್ನು ತೆಗೆದುಕೊಂಡಿರುತ್ತೀರಿ ಅದನ್ನು ಬದಲಾವಣೆ ಮಾಡುವುದು ಸೂಕ್ತವೆಂದು ನಾನು ಹೇಳುತ್ತೇನೆ.

ಮತ್ತೊಂದು ವಿಚಾರವನ್ನು ಹೇಳಬೇಕಾಗಿದೆ. ಇದು ರಾಜ್ಯದ ವಿಚಾರಕ್ಕೆ ಸಂಬಂಧಪಟ್ಟಿದ್ದು. ತಾವು ಇದರ ಬಗ್ಗೆ ಮಾತನಾಡಿದ್ದೀರಿ. ಶ್ರೀಮತಿ ಇಂದಿರಾಗಾಂಧಿ ಯವರನ್ನು ವಿರೋಧಿಸಿ ಮಾತನಾಡಿದ್ದೀರಿ. ಮತ್ತೆ ನಾನು ಈಗ ಅವರ ಪರವಾಗಿ ಇದ್ದೇನೆ ಎನ್ನುವ ಅರ್ಥದಲ್ಲಿಯೂ ಕೂಡ ಮಾತನಾಡಿದ್ದೀರಿ. ನಾವು ನೀವು ಸೇರಿ ಚುನಾವಣೆ ಪ್ರಚಾರಕ್ಕೆ ಹೋದಾಗ ಮತದಾರರು ಬಹುಮತ ಕೊಟ್ಟು ಪ್ರೋತ್ಸಾಹಿಸಿದರು. ಬಹಳ ಸಂತೋಷ, ೧೯೮೪ನೇ ಡಿಸೆಂಬರ್‌ನಲ್ಲಿ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ 'ಚೈತನ್ಯ ರಥ' ಎಂದು ಈಗ ಏನು ಹೆಸರನ್ನು ಇಟ್ಟುಕೊಂಡಿರುತ್ತೀರಿ, ಆಗ ಅದಕ್ಕೆ ಜಯವಾಹಿನಿ ಎಂದು ಹೆಸರಿಟ್ಟುಕೊಂಡು ತಾವು ಪ್ರವಾಸ ಮಾಡಿದಿರಿ. ಆಗ ಏತಕ್ಕೆ ನಿಮಗೆ ಬೆಂಬಲ ಸಿಗಲಿಲ್ಲವೆಂದು ಕೇಳುತ್ತೇನೆ. ಈಗ ನಮಗೆ ಮತ ಸಿಗಲಿಲ್ಲ ಎನ್ನುವ ಪ್ರಶ್ನೆಯಲ್ಲ. ಬಹುಮತ ಪಡೆದಿರಬಹುದು, ಐದು ವರ್ಷ ಇರಬಹುದು ಅದಕ್ಕೆ ನಾವು ತಲೆಬಾಗುತ್ತೇವೆ. ಜನರ ತೀರ್ಪನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ತಾವು ಮಾಡಿರತಕ್ಕಂಥ ಪದಪ್ರಯೋಗಕ್ಕೆ ನನಗೆ ಬಹಳ ಖೇದವಾಗುತ್ತದೆ. ಆಗ ಅವರ ಮೇಲೆ ಕಕ್ಕಿದ್ದನ್ನು ಈಗ ನೆಕ್ಕುತ್ತಿದ್ದೀರಿ ಎನ್ನತಕ್ಕಂಥ ಪದ ಪ್ರಯೋಗ ಮಾಡಿದ್ದೀರಿ. ನಾನು ಇಂದೂ ಕೂಡ ಹೇಳುತ್ತೇನೆ. ಇಂಥ ಪದಪ್ರಯೋಗ ಈ ಸದನದೊಳಗೆ ಮಾಡತಕ್ಕಂಥದ್ದು ಒಳ್ಳೆಯದಲ್ಲ. ಮಾನ್ಯ ಮುಖ್ಯಮಂತ್ರಿಗಳಾಗಿ, ಸಭಾನಾಯಕರಾಗಿ ಈ ಈ ರೀತಿ ಮಾತನಾಡತಕ್ಕಂಥದ್ದು ಒಳ್ಳೆಯದಲ್ಲ. ಕರ್ನಾಟಕ ರಾಜ್ಯ ಈ ರೀತಿಯಾಗಿ ಪದ ಪ್ರಯೋಗ ಮಾಡತಕ್ಕಂಥ ಮುಖ್ಯ ಮಂತ್ರಿಯನ್ನು ಪಡೆದಿರತಕ್ಕಂಥದ್ದು ಜನತೆಯ ದೌರ್ಭಾಗ್ಯವಾಗಿದೆ. ಅದರಲ್ಲೂ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಮಾತನಾಡಿದರೆ ಅದರ ಜವಾಬ್ದಾರಿಯನ್ನು ನೀವು ಹೊತ್ತುಕೊಳ್ಳಬೇಕಾಗುತ್ತದೆ. ಅವರು ೧೯೬೬ರಲ್ಲಿ ಪ್ರಧಾನ ಮಂತ್ರಿಯಾಗಿದ್ದಾಗ ಕರ್ನಾಟಕ ರಾಜ್ಯದಲ್ಲಿ ಮಾನ್ಯ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ತಾವು ಹಣಕಾಸಿನ ಮಂತ್ರಿಗಳಾಗಿ ಶ್ರೀಮತಿ ಇಂದಿರಾಗಾಂಧಿಯವರನ್ನು ಹಾಡಿ ಹೊಗಳಿದರು. ಈಗ ಅವರ ವಿರೋಧಪಕ್ಷದ ಮಂತ್ರಿ ಮಂಡಲದಲ್ಲಿ ಇದ್ದುಕೊಂಡು ಏನು ಕಕ್ಕುತ್ತಿದ್ದೀರಿ ಅದನ್ನು ನಿಮ್ಮ ಉದ್ದಿಷ ನಾಲಿಗೆಯನ್ನು ಚಾಚಿ ನೆಕ್ಕಿ ಎಂದು ನಾನು ಹೇಳುತ್ತೇನೆ.

೧೨-೦೦ ಪಿ. ಎಂ.

ಅಧ್ಯಕ್ಷರು.—ಪರ್ಯಾಲೋಚನಾ ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾಪ ಏನೆಂದರೆ—"ಮಾರ್ಚ್ ೧೪, ೧೯೮೫ ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ಶ್ರೀ ವೇದಾಂತ ಹೆಮ್ಮಿಗೆಯವರು ದಿನಾಂಕ ೧ನೇ ಏಪ್ರಿಲ್ ೧೯೮೫ ರಂದು ಸೂಚಿಸಿದ ಪ್ರಸ್ತಾವದ ಮೇಲಿನ ಚರ್ಚೆಗೆ ಮುಖ್ಯ ಮಂತ್ರಿಯವರಿಂದ ಉತ್ತರ. ಇದನ್ನು ಅಂಗೀಕರಿಸುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಧ್ಯಕ್ಷರು.—ಇನ್ನು ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಶ್ರೀ ಬಿ. ರಾಚಯ್ಯ (ಒಳಾಡಳಿತ ಮಂತ್ರಿ).—೧೯೫೨ ನೇ ಇಸವಿಯ ವಿಚಾರಣಾ ಆಯೋಗ ಶಾಸನದ ೩ (೪) ನೇ ಕಲಮಿನ ಮೇರೆಗೆ ಮಾಲೂರಿನಲ್ಲಿ ನಡೆದ ಗೋಲೀಬಾರ್ ಬಗ್ಗೆ ನೇಮಿಸಲಾದ ವಿಚಾರಣಾ ಆಯೋಗದ ವರದಿಯೊಂದಿಗೆ ಆ ಬಗ್ಗೆ ಕೈಕೊಂಡ ಕ್ರಮದ ಜ್ಞಾಪನಾ ಪತ್ರವನ್ನು ಸಭೆಯ ಮುಂದಿಡುತ್ತಿದ್ದೇನೆ.

ಶ್ರೀ ಜೆ. ಎಚ್. ಪಟೇಲ್ (ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿ).—

೧೯೫೬ ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ-೧೯೮೩-೮೪ನೇ ಸಾಲಿನ ಬೆಂಗಳೂರಿನ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್, ರವರ ೪೮ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.